ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮ್ಯಾಗ್ನಸ್‌ಗೆ ಮುಖಭಂಗ: ಪ್ರಜ್ಞಾನಂದಗೆ ಜಯ

ಭಾರತದ ಆರ್.ಪ್ರಜ್ಞಾನಂದ್ ಅವರು ಲಾಸ್ ವೇಗಾಸ್‌ನಲ್ಲಿ ನಡೆದ ಫ್ರೀಸ್ಟೈಲ್ ಚೆಸ್ ಗ್ರ್ಯಾಂಡ್ ಸ್ಲಾಮ್ ಟೂರ್ನಿಯಲ್ಲಿ ವಿಶ್ವದ ನಂಬರ್ 1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರ ವಿರುದ್ಧ ಭರ್ಜರಿ ಜಯ ಸಾಧಿಸಿದ್ದಾರೆ. 19 ವರ್ಷದ ಪ್ರಜ್ಞಾನಂದ್ ಕೇವಲ 39 ನಡೆಗಳಲ್ಲಿ ನಾರ್ವೆಯ ಚಾಂಪಿಯನ್ ಅನ್ನು ಸೋಲಿಸಿದ್ದಾರೆ. ಗುಕೇಶ್ ಅವರು ಕಾರ್ಲ್‌ಸನ್ ಅವರನ್ನು ಕ್ಲಾಸಿಕಲ್ ಮತ್ತು ರ್‍ಯಾಪಿಡ್ ಚೆಸ್‌ನಲ್ಲಿ ಸೋಲಿಸಿದ್ದರು. ಪ್ರಜ್ಞಾನಂದ ಅವರು ಈ ಗೆಲುವಿನೊಂದಿಗೆ ಎಲ್ಲ ಮಾದರಿಗಳಲ್ಲಿ ಕಾರ್ಲ್‌ಸನ್ ವಿರುದ್ಧ ಗೆಲುವು ಸಾಧಿಸಿದ ಸಾಧನೆ ಮಾಡಿದ್ದಾರೆ.



ಸೊಂಪಾದ ಪುಟಗಳು

ಮನೆಗೆ ಬಂದು ತಲುಪಿದೆನೆಂಬ ಸಾರ್ವತ್ರಿಕ ಭಾವ
ಶಿಶಿರಕಾಲ
ಶಿಶಿರ್ ಹೆಗಡೆ 6

ಮಳೆ ಕೋಂಗಿಲ ಹಕ್ಕಿಗೆ ಹಾಡಲು ಬರುವುದಿಲ್ಲ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ನಮ್ಮ ಆಪ್ತರಿಗೆ ಅಥವಾ ಸ್ನೇಹಿತರಿಗೆ ಮಾಡುವ ಒಳ್ಳೆಯ ಕೆಲಸಗಳನ್ನು ಅವರು ಗಮನಿಸದಿರಬಹುದು. ಆದರೆ ಅವರು ಗಮನಿಸುವುದು ನಾವು ಮಾಡದಿರುವುದನ್ನು ಮಾತ್ರ. ಹಾಗಂತ ನಾವು ಮಾಡುವ ಒಳ್ಳೆಯ ಕೆಲಸಗಳನ್ನು ಮುಂದುವರಿಸಬೇಕು, ಅವರು ನೋಡದಿದ್ದರೂ.

ವಕ್ರತುಂಡೋಕ್ತಿ



ಗಣಿತ ವಿಷಯದಲ್ಲಿ ಎಷ್ಟು ಸಲ ಫೇಲ್ ಆಗಿದ್ದೀರಿ ಎಂಬುದು ಗೊತ್ತಿಲ್ಲದಿದ್ದರೆ, ನೀವು ನಿಜಕ್ಕೂ ಫೇಲ್ ಆಗಿದ್ದೀರಿ ಎಂದರ್ಥ.

ಎಚ್‌ಡಿಕೆ ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ತಡೆ

ದೆಹಲಿ: ಬಿಡದಿ ಬಳಿ ಕೇತಗಾನಹಳ್ಳಿಯಲ್ಲಿ ಒತ್ತುವರಿಗೆ ಸಂಬಂಧಿಸಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಗೆ ಸುಪ್ರೀಂಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ. ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಕುಮಾರಸ್ವಾಮಿ ಅವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ಪೀಠವು ಮುಂದಿನ ಆದೇಶದವರೆಗೂ ಪ್ರಕರಣದ ವಿಚಾರಣೆಗೆ ತಡೆ ನೀಡಿದೆ.

ಶಾಸಕ ನಂಜೇಗೌಡ ಆಸ್ತಿ ಮುಟ್ಟುಗೋಲು

ಬೆಂಗಳೂರು: 2023ರ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳ ಸಹಕಾರ ಹಾಲು ಉತ್ಪಾದಕರ ಒಕ್ಕೂಟ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಮಾಲೂರು ಶಾಸಕ ಕೆ.ವೈ. ನಂಜೇಗೌಡ ಹಾಗೂ ಇತರರಿಗೆ ಸೇರಿದ ಒಟ್ಟು 1.32 ಕೋಟಿ ರು.ಮೌಲ್ಯದ ಚರಾಸ್ತಿ ಹಾಗೂ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿದ್ದಾರೆ. 2023ರಲ್ಲಿ ನಡೆದ ಕೋಮುಲ್ ನೇಮಕಾತಿ ಪ್ರಕ್ರಿಯೆಯಲ್ಲಿ ಹಲವು ಅವ್ಯವಹಾರ ನಡೆದಿರುವ ಶಂಕೆ ಇದೆ. ಈ ಹಗರಣದಲ್ಲಿ ಲಕ್ಷಾಂತರ ರುಪಾಯಿ ಹಸ್ತಾಂತರವಾಗಿದ್ದು, ಅರ್ಹತೆಯಿಲ್ಲದವರ ನೇಮಕಾತಿಗೆ ಹಣ ಪಡೆದುಕೊಳ್ಳಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿದ್ದವು.



ಫನ್‌ತರಂಗ
- ರಘುಪತಿ ಶೃಂಗೇರಿ -

ಸರ್ಕಾರಿ ಶಾಲಾ ಶಿಕ್ಷಕರಿಗೆ ಪಾಠ ಹೊರತಾಗಿ ಶಾಲಾ ಮಕ್ಕಳನ್ನು ಬೆಳಿಗ್ಗೆ ಬೇಗ ಎಬ್ಬಿಸಿ ಓದಿಸುವ ಟಾಸ್ಕ್
ಸುದ್ದಿ



ಎನ್‌ಟಿಪಿಸಿ ಅಣುವಿದ್ಯುತ್ ಸ್ಥಾವರ ಪ್ರಸ್ತಾಪಕ್ಕೆ ಸಚಿವ ಸಂಪುಟ ಒಪ್ಪಿಗೆ

ಅಣು ವಿದ್ಯುತ್‌ನತ್ತ ಚಿತ್ತ

ಬೆಂಗಳೂರು: ರಾಜ್ಯದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಹಾಗೂ ಗುರುತಿಸಿರುವ ಸಂಭಾವ್ಯ ಸ್ಥಳಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲು ರಾಜ್ಯ ಸರಕಾರ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಕರ್ನಾಟಕದಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪಿಸಲು ತಾತ್ವಿಕ ಅನುಮೋದನೆ ಹಾಗೂ ಗುರುತಿಸಿರುವ ಸಂಭಾವ್ಯ ಸ್ಥಳಗಳಲ್ಲಿ ಪ್ರಾಥಮಿಕ ಅಧ್ಯಯನ ನಡೆಸಲು ಎನ್‌ಟಿಪಿಸಿ ಸಂಸ್ಥೆಗೆ ಅನುಮತಿ ನೀಡಲಾಗಿದೆ ಎಂದರು. ಇದರಿಂದಾಗಿ ಕೊಪ್ಪಳ, ವಿಜಯಪುರ, ರಾಯಚೂರು ಮತ್ತು ಇತರ ಸ್ಥಳಗಳಲ್ಲಿ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮ (ಎನ್‌ಟಿಪಿಸಿ) ಪ್ರಾಥಮಿಕ ಅಧ್ಯಯನ ನಡೆಸಬಹುದಾಗಿದೆ.

ಪ್ರಸಕ್ತ ವರ್ಷದ ಕೇಂದ್ರ ಬಜೆಟ್‌ನಲ್ಲಿ ತಿಳಿಸಿರುವಂತೆ ಭಾರತದ ದೀರ್ಘಕಾಲೀನ ಇಂಧನ ಪರಿವರ್ತನಾ ಕಾರ್ಯತಂತ್ರದ ಭಾಗವಾಗಿ ಪರಮಾಣು ಶಕ್ತಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಕೇಂದ್ರ ಸರಕಾರ 2047 ರ ವೇಳೆಗೆ 100 ಗಿಗಾವ್ಯಾಟ್ ಪರಮಾಣು ವಿದ್ಯುತ್ ಸಾಮರ್ಥ್ಯದ ಗುರಿ ಹೊಂದಿದೆ. ಪಳೆಯುಳಿಕೆ ಇಂಧನಗಳ ಮೇಲಿನ ಹೊರೆ ಕಡಿಮೆ ಮಾಡುವ ಮೂಲಕ ದೇಶದಲ್ಲಿ ಪರಮಾಣು ಪ್ರಮುಖ ವಿದ್ಯುತ್ ಮೂಲವಾಗಬೇಕೆಂದು ಬಯಸಿರುವಂತೆ ರಾಜ್ಯ ಸರಕಾರ ತಾತ್ವಿಕ ಅನುಮೋದನೆ ನೀಡಿದೆ.

ನಾಗಮಂಗಲ ಶಾಖಾ ನಾಲೆ ಮರುವಿನ್ಯಾಸ ಕಾಮಗಾರಿಗೆ ಅನುಮೋದನೆ: ಸಚಿವ ಸಂಪುಟದಲ್ಲಿ ಹೇಮಾವತಿ ಯೋಜನಾ ವ್ಯಾಪ್ತಿಯಲ್ಲಿ ನಾಗಮಂಗಲ ಶಾಖಾ ನಾಲೆಯು ಸರಪಳಿ 0.00 ಕಿ.ಮೀ ಇಂದ 78.46 ಕಿ.ಮೀ ವರೆಗೆ 560 ಕೋಟಿ ರುಪಾಯಿ ಅಂದಾಜು ಮೊತ್ತದ ಮರುವಿನ್ಯಾಸ ಕಾಮಗಾರಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ. ನಾಗಮಂಗಲ ಶಾಖಾ ನಾಲೆಯು ಮೂಲ ಯೋಜನಾ ವರದಿಯಂತೆ 78.46 ಕಿ.ಮೀ ಉದ್ದವಿದ್ದು, ಈ ನಾಲೆಯನ್ನು 1994ರಲ್ಲಿ ಪ್ರಾರಂಭಿಸಿ 2004ರಲ್ಲಿ ಪೂರ್ಣಗೊಳಿಸಿ ನಾಲೆಯಲ್ಲಿ ನೀರನ್ನು ಹರಿಸಲಾಗುತ್ತಿದೆ. → 4

ಬಿ ಖಾತೆಗೂ ಮಾನ್ಯತೆ

ಬಿ ಖಾತಾ ಹೊಂದಿರುವ ಬೆಂಗಳೂರಿಗರಿಗೆ ಸರಕಾರ ಗುಡ್ ನ್ಯೂಸ್ ಕೊಟ್ಟಿದೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಎ ಖಾತಾ, ಬಿ ಖಾತಾ ಗೊಂದಲಕ್ಕೆ ತೆರೆ ಎಳೆಯಲು ಸಂಪುಟ ಒಪ್ಪಿಗೆ ನೀಡಿದೆ. ಎ ಖಾತಾದಂತೆ ಬಿ ಖಾತಾಗೂ ಅಧಿಕೃತ ಮಾನ್ಯತೆ ನೀಡಲು ಸಂಪುಟ ತೀರ್ಮಾನಿಸಿದ್ದು, ಶೀಘ್ರದಲ್ಲೇ ರಾಜ್ಯ ಸರಕಾರದಿಂದ ಅಧಿಕೃತ ಅಧಿಸೂಚನೆ ಹೊರಬೀಳಲಿದೆ. 2020ರ ಮೇ 22ರಿಂದ ಅನ್ವಯ ಆಗಲಿದ್ದು, 2024 ಸೆ.30 ರವರೆಗೆ ಮಾತ್ರ ಹಾಲಿ ಇರುವ ಬಿ ಖಾತಾಗಳನ್ನು ಎಲ್ಲ ಕಾನೂನು ಉದ್ದೇಶಕ್ಕೆ ಅಧಿಕೃತ ಖಾತಾ ಎಂದು ಪರಿಗಣಿಸುವುದಾಗಿ ಸಂಪುಟ ತೀರ್ಮಾನಿಸಿದೆ.

ಇತರ ಪ್ರಮುಖ ನಿರ್ಧಾರಗಳು

- ಆಯುಷ್ ಇಲಾಖೆಯ ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಅಮಲುಜಾರಿ ವಿಭಾಗ ಹಾಗೂ ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಜತೆಗೆ ವಿಲೀನ
- ರಾಯಚೂರು ಜಿಲ್ಲೆಯಲ್ಲಿ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಅಭಿವೃದ್ಧಿಗೆ 24.50 ಕೋಟಿ ರು.
- ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಯಳವಟ್ಟಿ ಗ್ರಾಮದಲ್ಲಿ ಸಂಗ್ರಹಣೆ, ಸಂಸ್ಕರಣೆ, ಸಂರಕ್ಷಣಾ ಘಟಕ ಪಿಪಿಪಿ ಮಾದರಿಯಡಿ 35.07 ಕೋಟಿ ವೆಚ್ಚದಲ್ಲಿ ಆರಂಭ
- ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಸಿರಿವಾರ ಗ್ರಾಮದಲ್ಲಿ ತೋಟಗಾರಿಕೆ ತಂತ್ರಜ್ಞಾನ ಪಾರ್ಕ್ ಆರಂಭಿಸಲು 83.79 ಕೋಟಿ ರು.
- ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೆಮ್ಮಿಂಜೆ ಗ್ರಾಮದಲ್ಲಿ 3 ಎಕರೆ ಬಂಟರ ಸಂಘಕ್ಕೆ.
- ಗ್ರಾಪಂ ಮಟ್ಟದ 1,530 ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳ ಉಪಕರಣ ಬದಲಾಯಿಸಲು 19.89 ಕೋಟಿ
- ಮೈಸೂರು ವಿಶ್ವವಿದ್ಯಾಲಯದಲ್ಲಿ ಡಾ.ಬಿ.ಆರ್. ಅಂಬೇಡ್ಕರ ಸಂವಿಧಾನ ಪೀಠ ಸ್ಥಾಪನೆಗೆ 10 ಕೋಟಿ ರು.
- ಪ್ರವಾಸೋದ್ಯಮ ಉತ್ತೇಜಿಸಲು ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮಕ್ಕೆ 166.22 ಕೋಟಿ ರು.
- ನವಿಲುತೀರ್ಥ ಅಣೆಕಟ್ಟಿನ ಡ್ರೈನೇಜ್ ಅಕ್ವಾಡಕ್ಟ್ ಎಂಎಸ್ ಪೈಪ್‌ನೊಂದಿಗೆ ನಿರ್ಮಿಸುವ ಕಾಮಗಾರಿಗೆ 19.05 ಕೋಟಿ ರು.
- ಕೇಂದ್ರಿಯ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿ ಸೂಕ್ತ ಮಾರ್ಪಾಡುಗಳೊಂದಿಗೆ ಜಾರಿ
- ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ಪಟ್ಟಣದ ರಸ್ತೆ ಅಭಿವೃದ್ಧಿಗೆ 60 ಕೋಟಿ ರು.

ಕರಾವಳಿಯ ಶಾಲೆಗಳಿಗೆ ರಜೆ
ಗುಡ್ಡ ಕುಸಿದು ಹೆದ್ದಾರಿ ಸಂಚಾರ ವ್ಯತ್ಯಯ

ಮಳೆ ಅಬ್ಬರ

ಬೆಂಗಳೂರು: ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆ ಅಬ್ಬರ ಜೋರಾಗಿದ್ದು, ಹಲವೆಡೆ ಅನಾಹುತಗಳು ಸಂಭವಿಸಿವೆ.

ಹದಿನಾಲ್ಕು ಜಿಲ್ಲೆಗಳಲ್ಲಿ ಜುಲೈ 17 ರಿಂದ ಜುಲೈ 22ರ ವರೆಗೆ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಬೆಳಗಾವಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಮೈಸೂರು, ಮಂಡ್ಯ ಶಿವಮೊಗ್ಗ ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂದಿನ ನಾಲ್ಕು ದಿನ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಶಾಲೆಗಳಿಗೆ ರಜೆ: ಮಳೆ ಅಬ್ಬರ ಮುಂದುವರಿದ ಪರಿಣಾಮ ಕೊಡಗು, ಉತ್ತರ ಕನ್ನಡದ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಹಾಗೂ ಭಟ್ಕಳ ತಾಲೂಕಿನ ಅಂಗನವಾಡಿ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಗುರುವಾರ ರಜೆ ಘೋಷಿಸಲಾಗಿತ್ತು. → 4

ಮಗು ಬಲಿ

ಗಂಗಾವತಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ಮನೆಯ ಶೀಟ್ ಮತ್ತು ಗೋಡೆ ಕುಸಿದು ಪ್ರಶಾಂತಿ ಎಂಬ ಒಂದೂವರೆ ವರ್ಷದ ಮಗು ಮೃತಪಟ್ಟಿದೆ. ಘಟನೆಯಲ್ಲಿ ಬಾಲಕಿಯ ತಾಯಿ ಹನುಮಂತಿ, ಕುಟುಂಬ ಸದಸ್ಯರಾದ ದುರ್ಗಮ್ಮ, ಭೀಮಮ್ಮ, ಹುಸೇನಪ್ಪ, ಫಕೀರಪ್ಪ ಎನ್ನುವವರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಲಾಗುತ್ತಿದೆ.

ಗುಡ್ಡ ಕುಸಿತದಿಂದ ಬಂದ್ ಆಗಿದ್ದ ಬೆಂಗಳೂರು-ಮಂಗಳೂರು ಹೆದ್ದಾರಿಯನ್ನು ಸಂಚಾರಕ್ಕೆ ಸುಗಮಗೊಳಿಸಲಾಯಿತು.

ಕಾಲ್ತುಳಿತ ದುರಂತಕ್ಕೆ ಆರ್‌ಸಿಬಿ, ಡಿಎನ್‌ಎ, ಕೆಎಸ್‌ಸಿಎ ಕಾರಣ

ಕಾಲ್ತುಳಿತ ಪ್ರಕರಣ: ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್?

ಬೆಂಗಳೂರು: ಐಪಿಎಲ್ ಟೂರ್ನಿಯ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜೂನ್ 4 ರಂದು 11 ಜನರ ಬಲಿ ತೆಗೆದುಕೊಂಡ ಕಾಲ್ತುಳಿತ ದುರಂತಕ್ಕೆ ಆರ್‌ಬಿ, ಡಿಎನ್‌ಎ ಮತ್ತು ಕೆಎಸ್‌ಸಿಎ ಕಾರಣವೆಂದು ರಾಜ್ಯ ಸರಕಾರದ ಗೃಹ ಇಲಾಖೆಯು ಹೈಕೋರ್ಟ್‌ಗೆ ವರದಿ ಸಲ್ಲಿಸಿದೆ. ಆದರೆ ಪೊಲೀಸ್ ಇಲಾಖೆ ವೈಫಲ್ಯದ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲವಾದ್ದರಿಂದ ಪೊಲೀಸ್ ಅಧಿಕಾರಿಗಳಿಗೆ ರಿಲೀಫ್ ನೀಡಿದಂತಾಗಿದೆ.

ವಿಜಯೋತ್ಸವ ಆಚರಣೆ ಕುರಿತಂತೆ ಆರ್‌ಸಿಬಿ, ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಡಿಎನ್‌ಎ ಮತ್ತು ಕೆಎಸ್‌ಸಿಎ ತೆಗೆದುಕೊಂಡ ಏಕಪಕ್ಷೀಯ ನಿರ್ಧಾರವೇ ಕಾಲ್ತುಳಿತ ದುರಂತಕ್ಕೆ ಕಾರಣವಾಗಿದೆ. ಪೊಲೀಸರ ಜತೆ ಸಮಾಲೋಚಿಸದೇ, ಸಂಭ್ರಮಾಚರಣೆ ಕಾರ್ಯಕ್ರಮ ನಡೆಸಲು ಪೊಲೀಸರ ಅನುಮತಿ ಪಡೆಯದೇ ತೆಗೆದುಕೊಂಡ ತೀರ್ಮಾನವು ಕಾಲ್ತುಳಿತ ಘಟನೆ ಸಂಭವಿಸಲು ಅವಕಾಶ ನೀಡಿದಂತಾಯಿತು ಎಂದು ವರದಿಯಲ್ಲಿ ಹೇಳಲಾಗಿದೆ. ಕಾಲ್ತುಳಿತ ದುರಂತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್ ಕೇಳಿರುವ 9 ಪ್ರಶ್ನೆಗಳಿಗೆ ವಿವರವಾದ ಉತ್ತರಗಳನ್ನು ವರದಿಯ ರೂಪದಲ್ಲಿ ನೀಡಿರುವ ಗೃಹ ಇಲಾಖೆ ಕಾರ್ಯದರ್ಶಿಯವರು ಆರ್‌ಸಿಬಿ ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅವರು ಆರ್‌ಸಿಬಿ ವಿಜಯೋತ್ಸವ ಆಚರಿಸುವ ಬಗ್ಗೆ ಮಾತನಾಡಿದ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಆರ್‌ಸಿಬಿ ಪೋಸ್ಟ್ ಮಾಡಿದ್ದರ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. → 4

ವರದಿಯ ಪ್ರಮುಖ ಅಂಶಗಳು

- ಆರ್‌ಸಿಬಿ ಮತ್ತು ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ಡಿಎನ್‌ಎ ಐಪಿಎಲ್ ಟೂರ್ನಿ ಗೆಲುವಿನ ಸಂಭ್ರಮಾಚರಣೆ ಬಗ್ಗೆ ಮಾಹಿತಿ ಇರುವ ಪತ್ರವನ್ನು ಮಾತ್ರ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ನೀಡಿದ್ದರು. ಆದರೆ ಸಂಭ್ರಮಾಚರಣೆಗೆ ಪೊಲೀಸ್ ಇಲಾಖೆ ಅನುಮತಿ ಕೇಳಿರಲಿಲ್ಲ.
- ಆರ್‌ಸಿಬಿ ಫೈನಲ್ ಪಂದ್ಯಕ್ಕೂ ಮೊದಲೇ ಪೊಲೀಸ್ ಠಾಣೆಗೆ ಸಂಘಟಕರು ಮಾಹಿತಿ ಪತ್ರ ನೀಡಿದ್ದರು. ಈ ಪತ್ರದಲ್ಲಿ ಆರ್‌ಸಿಬಿ ಫೈನಲ್ ಪಂದ್ಯ ಗೆಲುವಿನ ಬಗ್ಗೆ ಸ್ಪಷ್ಟ ಮಾಹಿತಿ ಇರಲಿಲ್ಲ ಮತ್ತು ಸಂಭ್ರಮಾಚರಣೆಗೆ ಸಂಬಂಧಪಟ್ಟಂತೆ ಮಾಹಿತಿಗಳ ಕೊರತೆ ಇದ್ದವು.
- ಆರ್‌ಸಿಬಿ ಫೈನಲ್ ಪಂದ್ಯ ಗೆದ್ದ ದಿನ ಜೂನ್ 3 ರ ರಾತ್ರಿ 11.30ರಿಂದ ಬೆಳಗಿನ ಜಾವ 5 ಗಂಟೆಯ ತನಕ ಬೆಂಗಳೂರು ಪೊಲೀಸ್ ಆಯುಕ್ತರು, ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಟ್ರಾಫಿಕ್ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ನ್ಯಾಟೊ ಮುಖ್ಯಸ್ಥರಿಗೆ ತಿರುಗೇಟು

ದೆಹಲಿ: ಭಾರತವು ರಷ್ಯಾದ ಜತೆ ವಾಣಿಜ್ಯ ಸಂಬಂಧವನ್ನು ಮುಂದುವರಿಸಿದರೆ, ಆರ್ಥಿಕ ನಿರ್ಬಂಧ ಹೇರಬೇಕಾದೀತು ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರು ಹೇಳಿರುವುದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕೇಂದ್ರ ಸರಕಾರವು, 'ಇಬ್ಬಂದಿತನ ಹೊಂದಿರಬಾರದು' ಎಂದು ಎಚ್ಚರಿಸಿದೆ.

'ನಾವು ಈ ವಿಚಾರವಾಗಿ ಬಂದಿರುವ ವರದಿಗಳನ್ನು ಗಮನಿಸಿದ್ದೇವೆ. ಬೆಳವಣಿಗೆಗಳನ್ನು ಅವಲೋಕಿಸುತ್ತಿದ್ದೇವೆ. ನಮ್ಮ ದೇಶದವರ ಇಂಧನ ಅಗತ್ಯಗಳನ್ನು ಪೂರೈಸುವುದು ನಮ್ಮ ಪಾಲಿಗೆ ಹೆಚ್ಚಿನ ಆದ್ಯತೆಯ ಸಂಗತಿ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. 'ಈ ಪ್ರಯತ್ನದಲ್ಲಿ ನಾವು ಮಾರುಕಟ್ಟೆಯಲ್ಲಿ ಲಭ್ಯವಿರುವುದರ ಆಧಾರದಲ್ಲಿ ಹಾಗೂ ಜಾಗತಿಕ ಸನ್ನಿವೇಶಗಳ ಆಧಾರದಲ್ಲಿ ಮುನ್ನಡೆಯುತ್ತೇವೆ. ಈ ವಿಚಾರದಲ್ಲಿ ಇಬ್ಬಂದಿತನ ಪ್ರದರ್ಶಿಸಬಾರದು ಎಂದು ಎಚ್ಚರಿಸುತ್ತೇವೆ' ಎಂದು ಹೇಳಿದ್ದಾರೆ.

'ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದರೆ ಗಂಭೀರ ಆರ್ಥಿಕ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಭಾರತ, ಬ್ರೆಜಿಲ್ ಮತ್ತು ಚೀನಾ ರಾಷ್ಟ್ರಗಳಿಗೆ ನ್ಯಾಟೊ ಸೆಕ್ರೆಟರಿ ಜನರಲ್ ಮಾರ್ಕ್ ರುಟ್ಟೆ ಎಚ್ಚರಿಕೆ ನೀಡಿದ್ದರು.

ಟ್ರಂಪ್ ಪಾಕ್‌ಗೆ ಭೇಟಿ?

ಇಸ್ಲಾಮಾಬಾದ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೆಪ್ಟೆಂಬರ್‌ನಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ ಎಂದು ವರದಿಯಾಗಿದೆ. ಟ್ರಂಪ್ ಭೇಟಿಯ ಬಗ್ಗೆ ತಿಳಿದಿಲ್ಲ ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿ ತಿಳಿಸಿದೆ. ಪಾಕಿಸ್ತಾನಕ್ಕೆ ಟ್ರಂಪ್ ಭೇಟಿಯ ಕುರಿತು ಶ್ವೇತಭವನ ಯಾವುದೇ ಮಾಹಿತಿ ನೀಡಿಲ್ಲ. ಸೆಪ್ಟೆಂಬರ್‌ನಲ್ಲಿ ಇಸ್ಲಾಮಾಬಾದ್‌ಗೆ ಭೇಟಿ ನೀಡಲಿರುವ ಟ್ರಂಪ್, ಬಳಿಕ ಭಾರತಕ್ಕೂ ಭೇಟಿ ನೀಡಲಿದ್ದಾರೆ ಎಂದು ಅಲ್ಲಿನ ಸುದ್ದಿ ವಾಹಿನಿಗಳು ವರದಿ ಮಾಡಿವೆ. ಒಂದು ವೇಳೆ ಅವರ ಭೇಟಿ ಖಚಿತವಾದರೆ ಸುಮಾರು ಎರಡು ದಶಕಗಳ ನಂತರ ಅಮೆರಿಕದ ಅಧ್ಯಕ್ಷರೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು. 2006ರಲ್ಲಿ ಅಂದಿನ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು.

ಭರಮನಿಗೆ ಬಡ್ತಿ

ಬೆಳಗಾವಿ: ಸಿಎಂ ಸಿದ್ದರಾಮಯ್ಯ ಅವರು ಕೈ ಎತ್ತಿ ಅವಮಾನ ಮಾಡಿದ್ದಾರೆ ಎಂಬ ಕಾರಣಕ್ಕೆ ಸ್ವಯಂ ಸೇವಾ ನಿವೃತ್ತಿ ಬಯಸಿ ರಾಜೀನಾಮೆಗೆ ಮುಂದಾಗಿದ್ದ ಹುಬ್ಬಳ್ಳಿ-ಧಾರವಾಡ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಾರಾಯಣ ಭರಮನಿ ಅವರಿಗೆ ಸರಕಾರ ಬಡ್ತಿ ನೀಡಿ, ಬೆಳಗಾವಿ ನಗರ ಕಾನೂನು ಸುವ್ಯವಸ್ಥೆ ಉಪ ಆಯುಕ್ತರನ್ನಾಗಿ ನೇಮಿಸಿ ಆದೇಶ ಹೊರಡಿಸಿದೆ. ರೋಹನ್ ಜಗದೀಶ್ ಅವರಿಂದ ತೆರವಾದ ಸ್ಥಾನಕ್ಕೆ ಗುರುವಾರ ನಾರಾಯಣ ಭರಮನಿ ಅಧಿಕಾರ ಸ್ವೀಕರಿಸಿದರು. ಈ ವೇಳೆ ಪ್ರತಿಕ್ರಿಯೆ ನೀಡಿದ ಅವರು, ಇಲಾಖೆ ನೀಡಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ಬಳಸಿಕೊಂಡು ನಗರದ ಕಾನೂನು ಸುವ್ಯವಸ್ಥೆ ಕಾಪಾಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಅಲಾಸ್ಕಾದಲ್ಲಿ ಭೂಕಂಪ

ಅಲಾಸ್ಕಾ: ಅಲಾಸ್ಕಾ ಕರಾವಳಿಯಲ್ಲಿ 7.3 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದ್ದು, ಇಲ್ಲಿನ ದಕ್ಷಿಣದ ಪ್ರದೇಶಗಳು ಮತ್ತು ಅಲಾಸ್ಕಾ ಪರ್ಯಾಯ ದ್ವೀಪದ ಕೆಲ ಭಾಗಗಳಿಗೆ ಸುನಾಮಿ ಎಚ್ಚರಿಕೆ ನೀಡಲಾಗಿದೆ ಎಂದು ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ ವರದಿ ಮಾಡಿದೆ. ಬುಧವಾರ ಸ್ಥಳೀಯ ಸಮಯ ಸುಮಾರು ಮಧ್ಯಾಹ್ನ 12:37ಕ್ಕೆ ಭೂಕಂಪ ಸಂಭವಿಸಿದ್ದು, ಇದರ ಕೇಂದ್ರ ಬಿಂದುವು ದ್ವೀಪ ಪಟ್ಟಣವಾದ ಸ್ಯಾಂಡ್ ಪಾಯಿಂಟ್‌ನ ದಕ್ಷಿಣಕ್ಕೆ ಸುಮಾರು 54 ಮೈಲುಗಳು (87 ಕಿಲೋ ಮೀಟರ್) ದೂರದಲ್ಲಿದೆ. ಭೂಕಂಪವು 20.1 ಕಿಲೋಮೀಟರ್ ಆಳದಲ್ಲಿ ಸಂಭವಿಸಿದ್ದು, ಮೇಲ್ಮೈ ಮಟ್ಟದಲ್ಲಿ ಪ್ರಭಾವದ ಸಾಧ್ಯತೆಯನ್ನು ಹೆಚ್ಚಿಸಿದೆ ಎಂದು ತಿಳಿಸಿದೆ.



50 ಮಂದಿ ಬೆಂಕಿಗಾಹುತಿ

ಬಾಗ್ದಾದ್: ಶಾಪಿಂಗ್ ಮಾಲ್‌ವೊಂದರಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 50 ಮಂದಿ ಮೃತಪಟ್ಟಿರುವ ಘಟನೆ ಪೂರ್ವ ಇರಾಕ್‌ನ ಕುಟ್ ನಗರದಲ್ಲಿ ನಡೆದಿದೆ. ಈ ಕುರಿತು ಪ್ರತಿಕ್ರಿಯಿಸಿದ ವಾಸಿಟ್ ಪ್ರಾಂತ್ಯದ ಗವರ್ನರ್, ಮೃತರ ಸಂಖ್ಯೆ 50ಕ್ಕೆ ತಲುಪಿದ್ದು, ಹಲವರು ಗಾಯಗೊಂಡಿದ್ದಾರೆ. ಮಾಲ್‌ನಲ್ಲಿ ಬೆಂಕಿ ಅವಘಡ ಸಂಭವಿಸಲು ಕಾರಣವೇನು ಎಂಬ ಕುರಿತು ಅಧಿಕಾರಿಗಳು ತನಿಖೆ ಪ್ರಾರಂಭಿಸಿದ್ದಾರೆ ಎಂದು ತಿಳಿಸಿದ್ದಾರೆ. ಈ ದುರಂತದ ಬೆನ್ನಿಗೇ, ಈ ಪ್ರಾಂತ್ಯದಲ್ಲಿ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದ್ದು, ಸ್ಥಳೀಯ ಅಧಿಕಾರಿಗಳು, ಕಟ್ಟಡ ಮತ್ತು ಮಾಲ್ ಮಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುವಂತೆ ಗವರ್ನರ್ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸೂಚಿಸಿದ್ದಾರೆ.



ಕಾಲ್ತುಳಿತ ವರದಿ ಸ್ವೀಕಾರ

ಬೆಂಗಳೂರು: ಜೂನ್ 4 ರಂದು 11 ಆರ್‌ಸಿಬಿ ಅಭಿಮಾನಿಗಳ ಸಾವಿಗೆ ಕಾರಣವಾದ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತದ ತನಿಖೆಗಾಗಿ ರಾಜ್ಯ ಸರಕಾರ ರಚಿಸಿದ್ದ ನ್ಯಾ.ಕುನ್ಹಾ ಅವರ ವರದಿಯನ್ನು ಸಂಪುಟ ಸ್ವೀಕರಿಸಿದೆ. ಮುಂದಿನ ಸಚಿವ ಸಂಪುಟದಲ್ಲಿ ನಾವು ಇದನ್ನು ಅಧ್ಯಯನ ಮಾಡಿ ಚರ್ಚಿಸುತ್ತೇವೆ ಮತ್ತು ನಂತರದ ನಿರ್ಧಾರ ಗಳನ್ನು ತಿಳಿಸುತ್ತೇವೆ. ವರದಿಯನ್ನು ಸಲ್ಲಿಸಬೇಕಾದಾಗ ಲೆಲ್ಲಾ (ನ್ಯಾಯಾಲಯ)ಅದನ್ನು ಸಲ್ಲಿಸುತ್ತೇವೆ ಎಂದರು. ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಜಾನ್ ಮೈಕೆಲ್ ಕುನ್ಹಾ ನೇತೃತ್ವದ ಆಯೋಗ ಜುಲೈ 11 ರಂದು ಸಿಎಂ ಸಿದ್ದರಾಮಯ್ಯ ಅವರಿಗೆ ಎರಡು ಸಂಪುಟಗಳ ವರದಿ ಸಲ್ಲಿಸಿತ್ತು.

ಕಾಡಾನೆಗಳ ಉಪಟಳ ಎಐ ಸೈರನ್ ಅಳವಡಿಕೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಆನೆ ಮಾನವನ ಸಂಘರ್ಷ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆನೆಗಳ ಚಲನವಲನದ ಬಗ್ಗೆ ಎಚ್ಚರಿಕೆ ನೀಡಲು ಪ್ರಯೋಗಿಕವಾಗಿ ಎಐ ಆಧಾರಿತ ಸೈರನ್ ವ್ಯವಸ್ಥೆ ರೂಪಿಸಲಾಗಿದೆ. ಈ ಯೋಜನೆಗೆ ಖಾಸಗಿ ಕಂಪನಿಯೊಂದು ಹಣಕಾಸು ಒದಗಿಸಿದ್ದು, ಸ್ನೇಹ ಸಂಸ್ಥೆ ಎಂಬ ಎನ್‌ಜಿಒ ವತಿಯಿಂದ ಸೈರನ್ ವ್ಯವಸ್ಥೆ ಅಳವಡಿಸಲಾಗಿದೆ. ವಿರಾಜಪೇಟೆ ತಾಲೂಕಿನ ಮಾಲ್ದಾರೆ, ಬಡಗ, ಬನಂಗಾಲ ಮತ್ತು ಸುತ್ತಲಿನ ಪ್ರದೇಶಗಳ ಸಂಘರ್ಷ ವಲಯಗಳಲ್ಲಿ 12 ಅಂತಹ ಸೈರನ್‌ಗಳನ್ನು ಸ್ಥಾಪಿಸಲಾಗಿದೆ. ಈಗಾಗಲೇ ಈ ಗ್ರಾಮಗಳಲ್ಲಿ ಆನೆ ಕಂದಕ ಸೋಲಾರ್ ವಿದ್ಯುತ್ ತಂತಿಬೇಲಿ ಅಳವಡಿಕೆ ಮಾಡಿದರೂ ಕಾಡಾನೆಗಳ ಉಪಟಳ ಕಡಿಮೆ ಆಗಿರಲಿಲ್ಲ. ಇದರಿಂದ ಜನರು ಮನೆಯಿಂದ ಹೊರ ಬರಲು ಹಿಂದೇಟು ಹಾಕುತ್ತಿದ್ದರು. ಆದರೀಗ ಎಐ ಆಧಾರಿತ ಸೈರನ್ ಅಳವಡಿಕೆ ಮಾಡಿರುವುದರಿಂದ ಕಾಡಂಚಿನ ಜನರು ಓಡಾಟ ನಡೆಸುತ್ತಿದ್ದಾರೆ.



ಸೈರನ್ ಕೆಲಸ ಹೇಗೆ?

ಈ ಎಐ ಆಧಾರಿತ ವ್ಯವಸ್ಥೆಯ ಮೂಲಕ ಆನೆಯ ಚಲನೆಯನ್ನು ಪತ್ತೆಹಚ್ಚಲಾಗುತ್ತದೆ. ಆನೆಯಿದ್ದ ಸ್ಥಳವನ್ನಾಧರಿಸಿ, ಒಂದು ಕಿಮೀ ವ್ಯಾಪ್ತಿಯೊಳಗೆ ನಿವಾಸಿಗಳನ್ನು ಎಚ್ಚರಿಸಲು ಸೈರನ್ ಮೊಳಗುತ್ತದೆ.

ಕರ್ನಾಟಕ ಹೈಕೋರ್ಟ್ ವಿವೇಚನೆ ಬಳಸಿಲ್ಲ ಎಂದ ನ್ಯಾಯಮೂರ್ತಿ ಪರ್ದಿವಾಲಾ

ದರ್ಶನ್ ಜಾಮೀನಿಗೆ ಸುಪ್ರೀಂ ಆಕ್ಷೇಪ

ದೆಹಲಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದು ಶೂಟಿಂಗ್, ವಿದೇಶ ಪ್ರವಾಸ ಅಂತಾ ಜಾಲಿ ಮೂಡ್‌ನಲ್ಲಿದ್ದ ನಟ ದರ್ಶನ್‌ಗೆ ಸುಪ್ರೀಂಕೋರ್ಟ್ ಶಾಕ್ ಕೊಟ್ಟಿದೆ.

ಹೈಕೋರ್ಟ್ ತೀರ್ಪಿನ ಬಗ್ಗೆ ಪರಿಶೀಲಿಸಿರುವ ಸುಪ್ರೀಂ ಕೋರ್ಟ್ ಬದಲಾವಣೆಯ ಬಗ್ಗೆ ಪರೋಕ್ಷವಾಗಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಮಂಗಳವಾರ (ಜು.22) ಅಂತಿಮ ವಿಚಾರಣೆ ನಡೆಸಿ ಅಂದೇ ಆದೇಶ ನೀಡುವುದಾಗಿ ಸುಪ್ರೀಂಕೋರ್ಟ್ ಹೇಳಿದ್ದು, ಅಂದು ದರ್ಶನ, ಪವಿತ್ರಾಗೌಡ ಸೇರಿ ಏಳು ಮಂದಿಯ ಭವಿಷ್ಯ ನಿರ್ಧಾರವಾಗಲಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿ, ಜಾಮೀನು ಪಡೆದು ಸದ್ಯ ಶೂಟಿಂಗ್‌ಗಾಗಿ ವಿದೇಶಿ ಪ್ರವಾಸದಲ್ಲಿ ತಲ್ಲೀನರಾಗಿರುವ ನಟ ದರ್ಶನ್‌ಗೆ ಸುಪ್ರೀಂಕೋರ್ಟ್ ಶಾಕ್ ಕೊಡುವ ಸಾಧ್ಯತೆ ಇದೆ. ಹೈಕೋರ್ಟ್ ನೀಡಿರುವ ಜಾಮೀನು ಪ್ರಶ್ನಿಸಿ ಬೆಂಗಳೂರು ಪೊಲೀಸರು ಸಲ್ಲಿಕೆ ಮಾಡಿರುವ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ನ್ಯಾ.ಪರ್ದಿವಾಲಾ ನೇತೃತ್ವದ ದ್ವಿಸದಸ್ಯ ಪೀಠ ಹೈಕೋರ್ಟ್ ಆದೇಶದ ಬಗ್ಗೆ ಭಿನ್ನಾಭಿಪ್ರಾಯಗಳನ್ನ ವ್ಯಕ್ತಪಡಿಸಿದೆ.

ಜಾಮೀನು ನೀಡುವಾಗ ಹೈಕೋರ್ಟ್ ತನ್ನ ವಿವೇಚನೆಯನ್ನು ಸೂಕ್ತವಾಗಿ ಬಳಸಿಲ್ಲ ಎಂದ ನ್ಯಾ. ಪರ್ದಿವಾಲಾ, ಈ ಬಗ್ಗೆ ಏನು ಹೇಳಬಯಸುತ್ತೀರಿ ಎಂದು ದರ್ಶನ್ ಪರ ಹಿರಿಯ ವಕೀಲ ಕಪಿಲ್ ಸಿಬಲ್‌ಗೆ ಪ್ರಶ್ನಿಸಿದರು. ಹೈಕೋರ್ಟ್ ಆದೇಶವನ್ನು ಹೇಗೆ ನೀಡಿದೆ ಎನ್ನುವುದನ್ನು ನೀವು ಗಮನಿಸಿರಬಹುದು ಎಂದು ಸಿಬಲ್ ಅವರಿಗೆ ಹೇಳಿದ ನ್ಯಾಯಾಲಯ ಕೇಳಿತು.

22ಕ್ಕೆ ಜಾಮೀನು ಭವಿಷ್ಯ ನಿರ್ಧಾರ

ಇದಕ್ಕೆ ಪ್ರತಿಯಾಗಿ ದರ್ಶನ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಲು ಮುಂದಾಗಿದ್ದರು. ಈ ವೇಳೆ ಮಧ್ಯಪ್ರವೇಶ ಮಾಡಿದ ನ್ಯಾ.ಪರ್ದಿವಾಲಾ ಮಂಗಳವಾರ ಅಂತಿಮ ವಾದ ಮಂಡಿಸಿ, ಅಂದೇ ಈ ಬಗ್ಗೆ ತೀರ್ಪು ನೀಡಲಾಗುವುದು ಎಂದು ಹೇಳಿದರು. ಹೀಗಾಗಿ ಅಂದು ದರ್ಶನ್ ಜಾಮೀನು ಭವಿಷ್ಯ ನಿರ್ಧಾರವಾಗಲಿದೆ. ನಟ ದರ್ಶನ್ ಮಾತ್ರವಲ್ಲ, ಆಪ್ತೆ ಪವಿತ್ರಾ ಗೌಡ ಸೇರಿ ಇತರ ಐವರು ಆರೋಪಿಗಳ ಬೇಲಾ ಅಥವಾ ಜೈಲಾ ಎಂಬುದು ನಿರ್ಧಾರವಾಗಲಿದೆ. ದರ್ಶನ ಪರ ವಾದ ಆಲಿಸಿದ ಬಳಿಕ ಉಳಿದ ಆರೋಪಿಗಳ ಪರ ವಾದವನ್ನೂ ಕೋರ್ಟ್ ಆಲಿಸಲಿದೆ. ಇದಾದ ಬಳಿಕ ಕೋರ್ಟ್ ತನ್ನ ಅಂತಿಮ ಆದೇಶ ನೀಡಲಿದೆ.

ಸಮಾಚಾರ ಸಣ್ಣದಲ್ಲ

ವಾರ್ಷಿಕ ಪ್ರಶಸ್ತಿಗೆ ಮಲ್ಲಿಕಾರ್ಜುನ ಆಯ್ಕೆ

ದೇವರ ಹಿಪ್ಪರಗಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕ ವಿಜಯಪುರ ವತಿಯಿಂದ 2025-26ನೇ ಸಾಲಿನ ಜಿಲ್ಲಾ ಪ್ರಶಸ್ತಿಗೆ ದೇವರಹಿಪ್ಪರಗಿ ತಾಲೂಕು ಕನ್ನಡಪ್ರಭ ವರದಿಗಾರ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಾಲೂಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಸಂಗಮೇಶ ಉತ್ನಾಳ ತಿಳಿಸಿದ್ದಾರೆ. ಜು.19ರಂದು ವಿಜಯಪೂರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆಯುವ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಸ್ತುವಾರಿ ಸಚಿವರು, ಸಚಿವರು, ಸಂಸದರು, ಶಾಸಕರು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು, ಸಂಘದ ರಾಜ್ಯಾಧ್ಯಕ್ಷರು, ಜಿಲ್ಲಾಧ್ಯಕ್ಷರು, ಹಿರಿಯ ಪತ್ರಕರ್ತರು, ಅಧಿಕಾರಿಗಳು ಸೇರಿದಂತೆ ಹಲವಾರು ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಗಮೇಶ್ವರ ಶಾಲೆ: ಸಂಸತ್ ಚುನಾವಣೆ

ತಾಳಿಕೋಟಿ: ಶ್ರೀ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಸಂಗಮೇಶ್ವರ ಪ್ರೌಢಶಾಲೆಯಲ್ಲಿ 2025-2026ನೇ ಸಾಲಿನ ಶಾಲಾ ಸಂಸತ್ತಿನ ಚುಣಾವಣೆ ಬುಧವಾರ ನಡೆಸಲಾಯಿತು. ಚುನಾವಣೆಯ ಮತಗಟ್ಟೆ ಅಧಿಕಾರಿಗಳಾಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಶೋಕ ಕಟ್ಟಿ ಕಾರ್ಯ ನಿರ್ವಹಿಸಿದರು.ಉಪಮತಗಟ್ಟೆ ಅಧಿಕಾರಿಗಳಾಗಿ ಎಸ್.ವಿ.ಜಾಮಗೊಂಡಿ, ಸಹಾಯಕ ಮತಗಟ್ಟೆ ಅಧಿಕಾರಿಗಳಾಗಿ ಎಸ್.ಗುಡಗುಂಟಿ, ಬಿ.ಆಯ್. ಹಿರೇಹೊಳಿ, ಚುಣಾವಣೆ ಕಾರ್ಯ ನಿರ್ವಹಿಸಿದರು. ಸಿಬ್ಬಂದಿಗಳಾದ ಎಚ್.ಬಿ.ಪಾಟೀಲ, ಎಮ್.ಎಸ್. ರಾಯಗೊಂಡ, ಯು.ಎಚ್.ಗಟನೂರ,ಕಾಶೀನಾಥ ನಾಲತವಾಡ, ಚುನಾವಣೆ ಕಾರ್ಯಕ್ಕೆ ಸಹಾಯ ಮಾಡಿದರು.ಎಂಟನೇ ತರಗತಿಯ ವರ್ಗ ಪ್ರತಿ ನಿಧಿಯಾಗಿ ಅನುಶಾ ಚಲವಾದಿ, ನಿತಿನ ರಾಠೋಡ, ಒಂಬತ್ತನೇ ತರಗತಿಯಲ್ಲಿ ವರ್ಗ ಪ್ರತಿ ನಿಧಿಯಾಗಿ ವಿನೋದ ರಾಠೋಡ,ಚಂದ್ರಕಲಾ ದ್ಯಾಸರ, ಹತ್ತನೇ ತರಗತಿಯಲ್ಲಿ.ವರ್ಗ ಪ್ರತಿನಿಧಿಯಾಗಿ ಯಮನಪ್ಪ ಹಡಗಿನಾಳ, ಕಾಂಚನಾಚಲವಾದಿ. ವಿದ್ಯಾರ್ಥಿಗಳ ಪ್ರತಿನಿದಿಗಳಾಗಿ ಅರ್ಜುನ ಜಾದವ, ಪೂಜಾ ಪೂಜಾರಿ ಆಯ್ಕೆಗೊಂಡ ಪ್ರಯುಕ್ತ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್.ಪಾಟೀಲ (ಬಾವೂರ) ಯುವ ಕಾರ್ಯದರ್ಶಿ ಸಚಿನ.ಎಚ್.ಪಾಟೀಲ ಆಡಳಿತಾಧಿಕಾರಿಗಳಾದ ಕಿರಣ.ಎಚ್.ಪಾಟೀಲ ಪ್ರೌಢಶಾಲೆಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದರು.

ಗೋಂಧಳಿ ಸಮಾಜದ ಸಾಧನೆ ದೊಡ್ಡದಿದೆ

ಕೆರೂರ: ಬಡತನ,ಅಲೆಮಾರಿಗಳಾಗಿರುವ ಗೊಂಧಳಿ ಸಮಾಜ ಸಣ್ಣ ಸಮಾಜವಾಗಿದ್ದರೂ ಅವರ ಸಾಧನೆ ದೊಡ್ಡದಿದೆ ಎಂದು ಬಾದಾಮಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ಅವರು ಮಂಗಳವಾರ ಆಷಾಢ ನಿಮಿತ್ತ ಪಟ್ಟಣದ ಶ್ರೀ ಗಡೇದ ದರ್ಗಾದೇವಿಯ ಉಡಿ ತುಂಬುವ, ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಸಾಧಕರಿಗೆ ಸನ್ಮಾನ ಕರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಷ್ಟ್ರಪತಿಗಳಿಂದ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಬಾಗಲಕೋಟೆಯ ಡಾ.ವೆಂಕಪ್ಪ ಸುಗತೇಕರ ತಮ್ಮ ಸಮಾಜದವರಾಗಿದ್ದು ಒಂದು ಹೆಮ್ಮೆಯ ಸಂಗತಿ. ಇನ್ನೂ ಅನೇಕರು ತೆರೆಮರೆಯಲ್ಲಿ ಸಾಧನೆ ಮಾಡಿದ್ದಾರೆ. ಗಂಡಸರು ಭವಿಷ್ಯ ಹೇಳುತ್ತ. ಹೆಣ್ಣು ಮಕ್ಕಳು ಕೌದಿ ಹೊಲೆದು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವುದು ಶ್ಲಾಘನೀಯ.ಸಮಾಜದ ಅಭಿವೃದ್ಧಿಗೆ ಸಹಾಯ ಸಹಕಾರ ನೀಡುವೆ. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ರ್ಥಿಕವಾಗಿ ಸಬಲರಾಗಲಿ. ಅಲೇಮಾರಿಗಳಾಗಿ ಜೀವನ ಸಾಗಿಸುತ್ತಿರುವ ತಮ್ಮ ಸಮುದಾಯದ ಉನ್ನತಿಗೆ ಶಾಸಕರ ಅನುದಾನದಿಂದ ರೂ.10 ಲಕ್ಷ ನೀಡುತ್ತೇನೆ ಎಂದು ಭರವಸೆ ನೀಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮುಖ್ಯ ಅತಿಥಿಗಳಾಗಿ ಮಾತನಾಡಿ, ಗೋಂಧಳಿ ಸಮಾಜವನ್ನು ಗರ್ತಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪದ್ಮಶ್ರೀ ಪ್ರಶಸ್ತಿ ನೀಡುದ್ದು ಇಡೀ ಜಿಲ್ಲೆಗೆ ಹೆಮ್ಮೆ ತಂದಿದೆ. ಅವರನ್ನು ಆಹ್ವಾನಿಸಿ ಪ್ರಶಂಸನಾ ಪತ್ರ ನೀಡುತ್ತಿರುವುದರಿಂದ ಸಮಾಜದ ಗೌರವ ಹೆಚ್ಚುತ್ತದೆ. ಸಮಾಜ ಮುಖ್ಯವಾಹಿನಿಗೆ ಬರಬೇಕು. ವಿದ್ಯಾವಂತರಾಗಿ ಎಂದು ಗೋಂಧಳಿ ಸಮಾಜದ ಯುವಕರಿಗೆ ಹೇಳಿದರು.

ವಿರಾಮ
ಪ್ರತಿ ಭಾನುವಾರ

{ಎಚ್.ವಿಶ್ವನಾಥ್} ಎಂಎಲ್‌ಸಿ

ರಾಹುಲ್ ಗಾಂಧಿಯೂ ನ್ಯಾಯ ಯೋಧ ಅಲ್ಲ. ಸಿದ್ದರಾಮಯ್ಯನೂ ನ್ಯಾಯ ಯೋಧ ಅಲ್ಲ. ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಚಾಂಪಿಯನ್ ಅಂತಾರೆ. ನನ್ನ ಬಿಟ್ಟರೆ ಯಾರೂ ಇಲ್ಲ, ದೇವರಾಜ ಅರಸುಗೆ ನಾನು ಸಮ ಅಂತಾರೆ. ಈ ಹಿಂದೆ ಕಾಕ ಕಾಳೇಕಾರ್ ಆಯೋಗದ ವರದಿಯನ್ನು ಇದೇ ಕಾಂಗ್ರೆಸ್‌ನ ನೆಹರು ತಿರಸ್ಕಾರ ಮಾಡಿ ಹಿಂದುಳಿದ ವರ್ಗಕ್ಕೆ ಅನ್ಯಾಯ ಮಾಡಿದರು.

ಪೋಕ್ಸೋ ಕಾಯಿದೆ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಆನಂದ.ಕೆ ಸೂಚನೆ

ಬಾಲ್ಯ ವಿವಾಹ ತಡೆಗೆ ಕಾನೂನು ಅರಿವು ಮೂಡಿಸಿ

ವಿಜಯಪುರ: ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ಧತಿಯಂತಹ ಸಾಮಾಜಿಕ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಸಾಕಷ್ಟು ಪ್ರಚಾರಗೊಳಿಸಿ ಜಾಗೃತಿ ಹಾಗೂ ಕಾನೂನಿನ ಅರಿವು ಮೂಡಿಸಲು ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಡಾ.ಆನಂದ.ಕೆ ಅವರು ಸೂಚಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬಾಲ್ಯ ವಿವಾಹ ನಿಷೇಧ, ಕೌಟುಂಬಿ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006 ಹಾಗೂ ಪೋಕ್ಸೋ ಕಾಯ್ದೆಯ ಪರಿಶೀಲನಾ ಸಭೆಯ ಅಧ್ಯಕತೆ ವಹಿಸಿ ಮಾತನಾಡಿದ ಅವರು, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ ಸಮರ್ಪಕ ಜಾರಿ ಒಳಗೊಂಡಂತೆ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೊಂದ ಮತ್ತು ಸಂಕಷ್ಟಕೊಳಗಾಗಿರುವ ಮಹಿಳೆಯರಿಗೆ ಕೌನ್ಸಲಿಂಗ್ ಹಾಗೂ ಅಗತ್ಯ ಕಾನೂನು ನೆರವು ಒದಗಿಸುವಂತೆ ಅವರು ಸೂಚನೆ ನೀಡಿದರು.

ಬಾಲ್ಯವಿವಾಹ ತಡೆಗಟ್ಟುವಲ್ಲಿ ಆಶಾ-ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ಥಳೀಯ ಆಡಳಿತಗಳ ಪಾತ್ರ ಬಹುಮುಖ್ಯವಾಗಿದ್ದು, ಸಮನ್ವಯವಾಗಿ ಕಾರ್ಯನಿರ್ವಹಿಸಿ, ಬಾಲ್ಯವಿವಾಹ ನಡೆಯುವ ಮುನ್ನವೇ ಪತ್ತೆ ಹಚ್ಚಿ ತಪ್ಪಿತಸ್ಥರ ಸಂಬಂಧಿಸಿದ ಪೋಷಕರು, ಬಾಲ್ಯವಿವಾಹವನ್ನು ಪ್ರೋತ್ಸಾಹಿಸುವವರ ವಿರುದ್ಧ ವಿಳಂಬ ಮಾಡದೇ ಪ್ರಕರಣ ದಾಖಲಿಸಬೇಕು ಎಂದು ಅವರು ಸೂಚಿಸಿದರು.

ಬಾಲ್ಯವಿವಾಹ ಅದೊಂದು ಅಪರಾಧ. ಸಾರ್ವಜನಿಕರಿಗೆ ಸೂಕ್ತ ಕಾನೂನಿನ ಅರಿವು ನೀಡುವುದ ಜೊತೆಗೆ ಬಾಲ್ಯವಿವಾಹ ನಡೆಯುವುದು ಕಂಡುಬಂದಲ್ಲಿ ಮುಂಚಿತವಾಗಿ ಮಾಹಿತಿ ಪಡೆದುಕೊಳ್ಳುವುದರ ಮೂಲಕ ಮಕ್ಕಳ ಭವ್ಯ ಭವಿಷ್ಯ ಹಾಳಾಗದಂತೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಮುಂಜಾಗ್ರತೆವಹಿಸಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಕೌಟುಂಬಿ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005, ನಿಯಮ 2006 ಹಾಗೂ ಪೋಕ್ಸೋ ಕಾಯ್ದೆಯ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ಡಾ.ಆನಂದ.ಕೆ ಮಾತನಾಡಿದರು.

> **ಬಾಲ್ಯವಿವಾಹದಂತಹ ಸಾಮಾಜಿಕ ಪಿಡುಗು ತೊಲಗಿಸಲು ಸಾರ್ವಜನಿಕರಿಗೆ ಜಾಗೃತಿ ಅವಶ್ಯವಾಗಿದ್ದು, ಈ ಬಗ್ಗೆ ನಿರಂತರ ಶಿಬಿರ, ಸಭೆ ನಡೆಸಬೇಕು. ಪ್ರಕರಣ ನಡೆದ ಸಂದರ್ಭದಲ್ಲಿ ಮಾಹಿತಿ ಒದಗಿಸಿದರೆ ಪೊಲೀಸ್ ಇಲಾಖೆಯಿಂದ ಈ ನಿಟ್ಟಿನಲ್ಲಿ ಶೀಘ್ರ ಕ್ರಮ ವಹಿಸಲಾಗುವುದು. ಸಂಬಂಧಿಸಿದ ಇಲಾಖೆಗಳು ವಾಟ್ಸಾಪ್ ಗ್ರೂಪ್ ರಚಿಸಿಕೊಂಡು ಸಮರ್ಪಕ ಮಾಹಿತಿಯನ್ನು ವಿನಿಮಯ ಮಾಡಬೇಕು.**
> -ಲಕ್ಷ್ಮಣ ನಿಂಬರಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಖಿ ಒನ್ ಸ್ಟಾಫ್ ಕೇಂದ್ರಗಳಲ್ಲಿ ಪೋಕ್ಸೋ, ಬಾಲ್ಯವಿವಾಹ, ಮಹಿಳಾ ದೌರ್ಜನ್ಯ, ಕಿರುಕುಳ ಸೇರಿದಂತೆ ವಿವಿಧ ದೌರ್ಜನ್ಯಕೊಳಗಾದವರನ್ನು ಕೌನ್ಸಲಿಂಗ್ ಪ್ರಕ್ರಿಯೆಗೆ ಒಳಪಡಿಸಿ, ಅವರ ಮನೋಸ್ಥೈರ್ಯ ಹೆಚ್ಚಿಸಬೇಕು. ಈ ಕೇಂದ್ರಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಬೇಕು.ವೈದ್ಯರು, ಪೊಲೀಸ್ ಇಲಾಖೆ ಸಹಕಾರ ಒದಗಿಸಬೇಕು. ಸಂಬಂಧಿಸಿದ ಸಂತ್ರಸ್ತರ ಕುರಿತ ವಸ್ತುಸ್ಥಿತಿ ಆಗಾಗ ವರದಿ ಮಾಡಬೇಕು ಹೇಳಿದರು.

> **ಬಾಲ್ಯ ವಿವಾಹ ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಸಂಬಂಧಿಸಿದ ಇಲಾಖೆಗಳು ನಿರಂತರ ಸಭೆ, ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚಾಗಿ ಏರ್ಪಡಿಸುವ ಮೂಲಕ ಸೂಕ್ತ ಕಾನೂನು ಅರಿವು ಮತ್ತು ತಿಳುವಳಿಕೆ ಮೂಡಿಸಬೇಕು. ಈ ವಿಷಯದಲ್ಲಿ ತುಂಬಾ ಗಂಭೀರತೆಯಿಂದ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು.**
> - ಡಾ.ಆನಂದ.ಕೆ, ಜಿಲ್ಲಾಧಿಕಾರಿ

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ ಹಾಗರಗಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ವಿಜಯ ಆಜೂರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಕೆ.ಕೆ.ಚವ್ಹಾಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಸಂಪತ್ ಗುಣಾರಿ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಶಿವಾನಂದ ಮಾಸ್ತಿಹೊಳಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಂದಾಯ ನೌಕರರ ಕ್ರೀಡಾಕೂಟ | ಸಮಾರೋಪ ಸಮಾರಂಭ

ಮುಧೋಳ ತಾಲೂಕು ತಂಡಕ್ಕೆ ಸಮಗ್ರ ವೀರಾಗ್ರಣಿ

ಬಾಗಲಕೋಟೆ: ಇಲ್ಲಿನ ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಕಂದಾಯ ಇಲಾಖೆಯ ನೌಕರರ ಕ್ರೀಡಾಕೂಟದಲ್ಲಿ ಮುಧೋಳ ತಾಲೂಕು ತಂಡ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದುಕೊಂಡಿತು.

ನವನಗರದ ಕಲಾಭವನದಲ್ಲಿ ಕಂದಾಯ ಇಲಾಖೆ ನೌಕರರ ಸಂಘ, ಜಿಲ್ಲಾ ಕಂದಾಯ ಇಲಾಖೆ ವಿವಿಧ ವೃಂದ ಸಂಘಗಳ ಸಹಯೋಗದಲ್ಲಿ ಕಂದಾಯ ದಿನಾಚರಣೆ ಅಂಗವಾಗಿ ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದ ಕ್ರೀಡೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಹಮ್ಮಿಕೊಂಡ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಮುಧೋಳ ತಾಲೂಕಾ ತಂಡಕ್ಕೆ ಸಮಗ್ರ ವೀರಾಗ್ರಣಿ ಪ್ರಶಸ್ತಿ ನೀಡಿದರು.

ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎನ್.ವಿ.ವಿಜಯ್, ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಉಪವಿಭಾಗಾಧಿಕಾರಿಗಳಾದ ಸಂತೋಷ ಜಗಲಾಸರ, ಶ್ವೇತಾ ಬೀಡಿಕರ, ತಹಶೀಲ್ದಾರರಾದ ವಾಸುದೇವ ಸ್ವಾಮಿ, ಕಾವ್ಯಾಶ್ರೀ.ಎಚ್, ಎಫ್.ಬಿ.ಮೊಮ್ಮಣ್ಣವರ, ನಿಂಗಪ್ಪ ಬಿರಾದಾರ, ವಿನೋದ ಹತ್ತಳ್ಳಿ, ಅಮರೇಶ ಪಮ್ಮಾರ, ಗಿರೀಶ ಸ್ವಾದಿ, ಸದಾಶಿವ ಮಕ್ಕೋಜಿ, ಮಹಾದೇವ ಸನಮೂರೆ, ವಿಜಯಕುಮಾರ ಕಡಕೋಳ, ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ, ಕಂದಾಯ ನೌಕರರ ಸಂಘದ ಅಧ್ಯಕ್ಷ ಚಿದಾನಂದ ವಡವಡಗಿ, ಗೌರವಾಧ್ಯಕ್ಷ ಮಲ್ಲಿಕಾರ್ಜುನ ಗುಡೂರ, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಕಂದಾಯ ಇಲಾಖೆಯ ನೌಕರರ ಕ್ರೀಡಾಕೂಟದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದ ಮುಧೋಳ ತಾಲೂಕು ತಂಡಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಪ್ರಶಸ್ತಿ ವಿತರಿಸಿದರು.

ಬೀಳಗಿ ಶಾಸಕ ಜೆ.ಟಿ.ಪಾಟೀಲ ಸೂಚನೆ
ಪಿಡಿಒಗಳ ಪ್ರಗತಿ ಪರಿಶೀಲನಾ ಸಭೆ

ಅಭಿವೃದ್ಧಿ ಕಾರ್ಯಗಳಿಗೆ ಎರಡು ತಿಂಗಳ ಗಡುವು

ಬಾಗಲಕೋಟೆಯ ಜಿಪಂ ನೂತನ ಸಭಾಭವನದಲ್ಲಿ ಶಾಸಕ ಜೆ.ಟಿ.ಪಾಟೀಲ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ ಜರುಗಿತು.

ಬಾಗಲಕೋಟೆ: ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಕುಂಟಿತಗೊಂಡಿದ್ದು, ಬರುವ ಎರಡು ತಿಂಗಳಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಗತಿ ಹೊಂದಬೇಕೆಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ ಅಧಿಕಾರಿಗಳಿಗೆ ಗಡುವು ನೀಡಿದರು.

ಇಲ್ಲಿನ ಜಿಪಂ ಸಭಾಭವನದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮ ಮಟ್ಟದಲ್ಲಿ ಮೂಲಭೂತ ಸೌಲಭ್ಯಗಳಾದ ಚರಂಡಿ ಕಾಮಗಾರಿ, ಶುದ್ಧ ಕುಡಿಯುವ ನೀರು ಸೇರಿದಂತೆ ಇತರೆ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಮಾಹಿತಿ ಕೇಳಿದರೆ ಸರಿಯಾದ ಮಾಹಿತಿ ಸಹ ನೀಡುತ್ತಿಲ್ಲ. ಅಧಿಕಾರಿಗಳು ತಮ್ಮ ಕಾರ್ಯವೈಖರಿಯಲ್ಲಿ ಬದಲಾವಣೆಯಾಗದಿದ್ದಲ್ಲಿ ನಿಮ್ಮ ಮೇಲೆ ಸರಕಾರಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗುವುದೇಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮತಕ್ಷೇತ್ರದ ಬಾದಾಮಿ ತಾಲೂಕಿನ ಫಕೀರ ಬೂದಿಹಾಳ ಹಾಗೂ ಅನಗವಾಡಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಹೇಳಿದರು ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇದ್ದುದರಿಂದ ನೋಟಿಸ್ ಜಾರಿ ಮಾಡುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದ ಅವರು ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿ ಗ್ರಾಮಗಳಿಗೆ ವಾರಕ್ಕೆ ಒಂದು ಬಾರಿಯಾದರೂ ಭೇಟಿ ನೀಡಿ ಅವರ ಕಾರ್ಯವೈಖರಿಯನ್ನು ಪರಿಶೀಲಿಸಬೇಕು. ಗ್ರಾಮದ ಜನರ ಜತೆಗೆ ಮುಕ್ತವಾಗಿ ಚರ್ಚೆ ಮಾಡಿ ಗ್ರಾಮದ ಸಮಸ್ಯೆಗಳ ಪರಿಹರಿಸುವ ಕಾರ್ಯವಾಗಬೇಕು ಎಂದರು.

> **ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನರೇಗಾದಡಿ ಕೈಗೊಂಡು ಹಳೆಯ ಕಾಮಗಾರಿಗಳನ್ನು ಎರಡು ದಿನಗಳಲ್ಲಿ ಪಟ್ಟಿಮಾಡಿಕೊಂಡು ಇಡಬೇಕು. ಅವುಗಳಿಗೆ ಆನ್‌ಲೈನ್‌ನಲ್ಲಿ ಅನುಮೋದನೆಗೆ ಕ್ರಮವಹಿಸಲಾಗುತ್ತದೆ. ಕ್ರಿಯಾಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ವಿಳಂಬ ಧೋರಣೆ ಅನುಸರಿಸುವಂತಿಲ್ಲ. ಕಾರ್ಯವೈಖರಿಯಲ್ಲಿ ಬೇಜವಾಬ್ದಾರಿ ತೋರಿದಲ್ಲಿ ಅಮಾನತ್ತಗೆ ಶಿಫಾರಸ್ಸು ಮಾಡಲಾಗುತ್ತದೆ.**
> -ಶಶಿಧರ ಕುರೇರ, ಜಿಪಂ ಸಿಇಒ

ಮತಕ್ಷೇತ್ರದ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಿಸಿ ರಸ್ತೆ, ಕುಡಿಯುವ ನೀರು, ಶೌಚಾಲಯಗಳ ಕುಂದು ಕೊರತೆಗಳು ನಮ್ಮ ಗಮನಕ್ಕೆ ಬರದಂತೆ ಕಾರ್ಯನಿರ್ವಹಿಸಬೇಕು. ಪ್ರತಿ ಪ್ರಾಥಮಿಕ ಶಾಲೆಯ ಅಡುಗೆ ಕೋಣೆ ರಿಪೇರಿ, ಅಂಗನವಾಡಿ ಕಟ್ಟಡ ಹಾಗೂ ಸ್ಮಶಾನದ ಚಿತಾಗಾರ ದುರಸ್ತಿ ಕಾರ್ಯ ಇದ್ದಲ್ಲಿ ಕೂಡಲೇ ಸರಿಪಡಿಸಬೇಕು. ಮತಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯಿಂದ ಸರಿಯಾದ ಕೆಲಸ ನಡೆಯುತ್ತಿಲ್ಲ ಎಂದರು.

ಕುಡಿಯುವ ನೀರು ಪೂರೈಕೆ ನಿರ್ವಹಣೆ ವ್ಯವಸ್ಥಿತವಾಗಿರಬೇಕು. 15ನೇ ಹಣಕಾಸಿನಡಿ ಕೈಗೊಂಡ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಪೂರ್ಣಗೊಳಿಸಲು ಸೂಚಿಸಿದರು. ಇ-ಖಾತಾ ಬಗ್ಗೆ ಜನರಲ್ಲಿ ಅರಿವು ಮೂಡಿಸಿ ನಿಗದಿತ ಅವಧಿಯಲ್ಲಿ ಕೆಲಸ ಮಾಡಿಕೊಡಲು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸುಭಾಷ ಸಂಪಗಾವಿ, ಶ್ರೀನಿವಾಸ ಪಾಟೀಲ, ಸತೀಶ ಮಾಕೊಂಡ ಸೇರಿದಂತೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿದ್ದರು.

ಇಂಜನವಾರಿ ಗ್ರಾಮದಲ್ಲಿ 'ಮನೆ ಮನೆಗೆ ಪೊಲೀಸ್' ಜಾಗೃತಿ

ಗುಳೇದಗುಡ್ಡ: ಸಾರ್ವಜನಿಕರಿಗೆ ಅತ್ಯುತ್ತಮ ಸೇವೆ ಒದಗಿಸುವ ಉದ್ದೇಶದಿಂದ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸೈಬರ್ ಅಪರಾಧ, ಕರ್ನಾಟಕ ಡ್ರಗ್ಸ್ ಫ್ರೀ ಆಪ್, ಬಾಲ್ಯವಿವಾಹ ನಿಷೇಧ ಕಾಯ್ದೆ, ಸಾಮಾಜಿಕ ಜಾಲ ತಾಣಗಳಲ್ಲಿ ಬರುವ ಸತ್ಯಾಸತ್ಯತೆ ಬಗ್ಗೆ, ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು, ಕಾರಿನಲ್ಲಿ ಸಂಚರಿಸುವವರು ಸೀಟ್ ಬೆಲ್ಟ್ ಧರಿಸುವುದು ಸೇರಿದಂತೆ ಇತರೆ ಸುರಕ್ಷಾ ಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಪಿಎಸ್ಐ ಸಿದ್ದಪ್ಪ ಯಡಹಳ್ಳಿ ಹೇಳಿದರು. ಅವರು ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದ ಅಂಗವಾಗಿ ಬುಧವಾರ ಸಮೀಪದ ಇಂಜನವಾರಿ ಗ್ರಾಮಕ್ಕೆ ಪೊಲೀಸ್ ತಂಡದೊಂದಿಗೆ ಗ್ರಾಮದ ಮನೆಗಳಿಗೆ ಭೇಟಿ ನೀಡಿದ ಬಳಿಕ ಮತನಾಡಿದ ಅವರು, ಗ್ರಾಮದ ಮನೆ ಮನೆಗೂ ಪೊಲೀಸರು ಭೇಟಿ ನೀಡಿ, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಸಣ್ಣ ಪುಟ್ಟ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹಾರಿಸಲಾಗುತ್ತದೆ, ಯಾವುದೇ ಭಯ ಪಡೆಬೇಕಾಗಿಲ್ಲ. ತುರ್ತು ಕರೆಗಾಗಿ 112 ಸಂಖ್ಯೆಗೆ ಕರೆಮಾಡಬಹುದು. ಬಾಲ್ಯವಿವಾಹ ಕಾನೂನು ಬಾಹೀರವಾಗಿದ್ದು ಪಾಲಕರು ಬಾಲ್ಯವಿವಾಹವನ್ನು ಮಾಡಬಾರದು ಎಂದು ಹೇಳಿದರು.

ಇಂಜನವಾರಿ ಗ್ರಾಮದಲ್ಲಿ ಮನೆ ಮನೆಗೆ ಪೊಲೀಸರು ಭೇಟಿ ನೀಡಿ ಕಾನೂನಿನ ಬಗ್ಗೆ ಮಹಿತಿ ನೀಡಿದರು.

ಈ ಸಂದರ್ಭದಲ್ಲಿ ಕ್ರೈಂ ಪಿಎಸ್ಐ ಜೆ.ಪಿ. ಸಗರಿ, ಎಎಸ್ಐ ಎಂ.ಎಲ್. ಭಜಂತ್ರಿ, ಸಿಬ್ಬಂದಿ ಶರಣು ಕೂಡಲೆಪ್ಪನವರ, ಮಹಾದೇವ ಚಂದರಗಿ, ವಿಜಯ ತುಂಬದ, ಬೀರಪ್ಪ ಮುಗಲನ್ನವರ, ಜಿ.ವಿ. ಮನ್ನಿಕಟ್ಟಿ ಮತ್ತಿತರರು ಇದ್ದರು.

'ಜನರೊಂದಿಗೆ ಜನತಾದಳ' ಸದಸ್ಯತ್ವಕ್ಕೆ ಚಾಲನೆ

ಬಾದಾಮಿ: ನಗರದ ಬಸವೇಶ್ವರ ವೃತ್ತದಿಂದ ಮುಖ್ಯರಸ್ತೆಯಲ್ಲಿ ಜೆಡಿಎಸ್ ಮುಖಂಡರ ಹಾಗೂ ಸಾವಿರಾರು ಕಾರ್ಯಕರ್ತರ ಸಮ್ಮುಖದಲ್ಲಿ ಜೆಡಿಎಸ್ ರಾಜ್ಯ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಯವರನ್ನು ತೆರದ ವಾಹನದಲ್ಲಿ ರೋಡ್ ಶೋ ಮೂಲಕ ಕರೆತಂದರು.

ಎಸ್.ವಿ.ಪಿ ವಿದ್ಯಾವರ್ಧಕ ಸಂಘದಲ್ಲಿ ಬೃಹತ್ ಹಮ್ಮಿಕೊಂಡ ಜನರೊಂದಿಗೆ ಜನತಾದಳ ಕಾರ್ಯಕರ್ತರ ಸಮಾವೇಶ ಹಾಗೂ ಜೆಡಿಎಸ್ ಪಕ್ಷಕ್ಕೆ ಮಿಸ್ ಕಾಲ್ ಮೂಲಕ ನೋಂದಣಿಗೆ ಚಾಲನೆ ನೀಡಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ ಅವರು, ನಮ್ಮ ಪಕ್ಷ ನಿಮ್ಮಂತ ಲಕ್ಷಾಂತರ ಯುವ ಕಾರ್ಯಕರ್ತರು ಬೆಳೆಸಿದ್ದಾರೆ ಈಗ ಅವರು ಮುಖಂಡರಾಗಿದ್ದಾರೆ ಯುವ ಮಿತ್ರರೆ ನೀವು ಜೆಡಿಎಸ್ ಪಕ್ಷಕ್ಕೆ ನಿಮ್ಮ ಹೆಸರನ್ನು ನೊಂದಾಯಿಸಿ ಪಕ್ಷಕಟ್ಟಿ ಮುಂದಿನ ಚುನಾವಣೆಯಲ್ಲಿ ಪಕ್ಷ ಗೆಲ್ಲಿಸಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸಿಗಬೇಕಾದ ಸವಲತ್ತುಗಳನ್ನು ಪಡಿಯೋಣ, ಭ್ರಷ್ಟಾಚಾರ ಮುಕ್ತರಾಜ್ಯ ಮಾಡೋಣ, ಮುಂಬರುವ ಜಿಲ್ಲಾಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ, ಸ್ಥಳೀಯ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಮಾಡಿಸುವ ಮೂಲಕ ಸಂಘಟನೆ ಮಾಡುತ್ತಾ ನಾಯಕತ್ವ ಹೊಂದಿರುವ ಹನಮಂತ ಮಾವಿನಮರದ ಅವರನ್ನು ಶಾಸಕರಾನ್ನಾಗಿಸುವಲ್ಲಿ ಶ್ರಮಿಸಬೇಕು ಎಂದರು ಈ ಸಂದರ್ಭದಲ್ಲಿ ನೂತನ ಬಾದಾಮಿ ಹಾಗೂ ಗುಳೇದಗುಡ್ಡ ತಾಲೂಕ ಅಧ್ಯಕ್ಷ, ನಗರ ಘಟಕಗಳ ಅಧ್ಯಕ್ಷರಿಗೆ ಬಾವುಟ ನೀಡುವ ಮೂಲಕ ಅಧಿಕಾರ ನೀಡಲಾಯಿತು. ಎಂ.ಎಸ್.ಹಿರೇಹಾಳ, ಚಂದ್ರಶೇಖರ ಸೂಡಿ, ರಾಘು ಗೋವನಕೊಪ್ಪ, ಹುಚ್ಚೇಶ ಹದ್ದನ್ನವರ, ಶಿವು ಫಕೀರಪ್ಪ ಗೊರವರ, ಬಸವರಾಜ ಕುಂಬಾರ, ಶರಣಪ್ಪ ಮಾವಿನಮರದ, ಪ್ರಕಾಶ ಕೋಟಿ, ನಿಂಗಪ್ಪ ಮಾದರ, ಸೇರಿದಂತೆ ಮುಖಂಡರು ಹಾಜರಿದ್ದರು.

ನಗರದ ಎಸ್.ವಿ.ಪಿ ವಿದ್ಯಾ ಸಂಸ್ಥೆಯಲ್ಲಿ ರಾಜ್ಯ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ ಕುಮಾರಸ್ವಾಮಿ ಜನರೊಂದಿಗೆ ಜನತಾದಳ ಹಾಗೂ ಪಕ್ಷಕ್ಕೆ ನೋಂದಣಿಗೆ ಚಾಲನೆ ನೀಡಿದರು.

ಕೃಷಿ ಪರಿಕರ ಮಳಿಗೆಗೆ ಅಧಿಕಾರಿಗಳ ಭೇಟಿ

ಮುಧೋಳ: ತಾಲೂಕಿನ ಕೃಷಿ ಪರಿಕರಗಳ ಮಾರಾಟ ಮಳಿಗೆಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ದಿಢೀರ್ ಭೇಟಿ ನೀಡಿ ಪರಿಶೀಲಿಸೀಲನೆ ನಡೆಸಿದರು. ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಎಸ್ ಬಿ ದೊಡಮನಿ ಮತ್ತು ತೋಟಗಾರಿಕೆ ಇಲಾಖೆಯ ನಿರ್ದೇಶಕ ಮಹೇಶ ದಂಡನ್ನವರ ಅವರು ಮುಧೋಳ ನಗರ ಸೇರಿದಂತೆ ತಾಲೂಕಿನ ವಿವಿಧ ಕೃಷಿ ಪರಿಕರಗಳ ಮಾರಾಟ ಮಳಿಗೆಗಳಿಗೆ ದಿಢೀರ್ ಭೇಟಿ ನೀಡಿ ರಸಗೊಬ್ಬರ ಮತ್ತು ಬೀಜ ದಾಸ್ತಾನು ಪರಿಶೀಲಿಸಿದರು. ಸಕಾಲದಲ್ಲಿ ಎಲ್ಲ ರೈತರಿಗೆ ಕೃಷಿ ಪರಿಕರಗಳು ಯೋಗ್ಯ ಬೆಲೆಗೆ ಸಿಗುವಂತೆ ಅಗಬೇಕು ಎಂದು ಮಳಿಗೆದಾರರಿಗೆ ಕೆಲವೊಂದು ಅಂಶಗಳನ್ನು ತಿಳಿಸಿದರು. ರೈತರು ಖರೀಧಿಸುವ ಬೀಜ ಮತ್ತು ರಸಗೊಬ್ಬರಗಳಿಗೆ ರಶೀಧಿ ನೀಡಬೇಕು, ರಸಗೊಬ್ಬರ, ಬೀಜ ಮತ್ತು ಕೀಟನಾಶಕ ಪರವಾನಿಗೆ ಅವಧಿಯನ್ನು ಗಮನಿಸಬೇಕು ಹಾಗೂ ನಿಗಧಿತ ಅವಧಿಯೊಳಗೆ ನವೀಕರಿಸಿಕೊಳ್ಳಬೇಕು. ಪ್ರಸ್ತುತ ಚಾಲ್ತಿಯಲ್ಲಿರುವ ಓ ಫಾರಂ/ಪಿಸಿ ಗಳನ್ನು ಇಡುವುದು ಮತ್ತು ಅದರಲ್ಲಿ ನಮೂದಿಸಿರುವ ರಸಗೊಬ್ಬರ, ಬೀಜ, ಮತ್ತು ಕೀಟನಾಶಕಗಳನ್ನು ಮಾತ್ರ ಮಾರಾಟ ಮಾಡುವುದು. ಗೊಬ್ಬರ ದಾಸ್ತಾನುವಿದ್ದು ಬರುವ ರೈತರಿಗೆ ಗೊಬ್ಬರ ಇಲ್ಲವೆಂದು ಹಿಂತಿರುಗಿ ಕಳುಹಿಸುವುದಾಗಲಿ ಮಾಡಬಾರದು, ರೈತರೊಂದಿಗೆ ಸೌಜನ್ಯಯುತವಾಗಿ, ಸೌಹಾರ್ದತಯುತವಾಗಿ ವರ್ತಿಸಬೇಕು. ತಾಂತ್ರಿಕ ವ್ಯವಸ್ಥಾಪಕ ಡಾ. ರಂಗಪ್ಪ ಹಂದಿಗುಂದ ಹಾಜರಿದ್ದರು.

ಸುರ್ಜೆವಾಲ ಸಭೆ, ಸಿಎಂ ಸ್ಥಾನಕ್ಕೆ ಅಪಮಾನ

ಬಸವನಬಾಗೇವಾಡಿ: ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರಿಗೆ ಅನುದಾನ ಬೇಕಾದರೆ ಕಾಂಗ್ರೆಸ್ ಪಕ್ಷದ ಕೇಂದ್ರ ನಾಯಕ ಸುರ್ಜೆವಾಲ್ ಹತ್ತಿರ ಹೋದರೆ ಮಾತ್ರ ಅನುದಾನ ಸಿಗುತ್ತದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಸಿಎಂ ಸಿದ್ದರಾಮಯ್ಯನವರು ಹೆಸರಿಗೆ ಮಾತ್ರ ಸಿಎಂ ಆಗಿದ್ದಾರೆ. ಇದು ಸಂವಿಧಾನಾತ್ಮಕ ಸಿಎಂ ಹುದ್ದೆಗೆ ಮಾಡುತ್ತಿರುವ ಅಪಮಾನವಾಗಿದೆ ಎಂದು ಜೆಡಿಎಸ್ ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ಬುಧವಾರ ಸಂಜೆ ಹಮ್ಮಿಕೊಂಡಿದ್ದ ಜನರೊಂದಿಗೆ ಜನತಾದಳ, ಸದಸ್ಯತ್ವ ಅಭಿಯಾನ ಹಾಗೂ ಬೃಹತ್ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಜನರ ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರಕಾರ ಜನರ ಮೇಲೆ ತೆರಿಗ ಹೊರೆ ಹಾಕುತ್ತಿದೆ. ಸರಕಾರದಲ್ಲಿ ಭ್ರಷ್ಟಾಚಾರ ನಿರಂತರವಾಗಿ ನಡೆಯುತ್ತಿದೆ. ಇಂತಹ ಭ್ರಷ್ಟ ಸರಕಾರವನ್ನು ಕಿತ್ತಿಹಾಕಿ ಮುಂಬರುವ 2028 ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವ ಮೂಲಕ ಮತ್ತೆ ರಾಜ್ಯದಲ್ಲಿ ಕುಮಾರಸ್ವಾಮಿ ಸಿಎಂ ಆಗುವ ಆಶಾಭಾವನೆಯೊಂದಿಗೆ ನಿರಂತರವಾಗಿ ಮೂರು ವರ್ಷಗಳ ಕಾಲ ರಾಜ್ಯದಲ್ಲಿ ನಾನು ಪ್ರವಾಸ ಮಾಡುತ್ತೇನೆ.

ರಾಜ್ಯದ ಸಮಗ್ರ ಅಭಿವೃದ್ದಿಗೆ ಕುಮಾರಸ್ವಾಮಿ ಮತ್ತೊಮ್ಮೆ ಸಿಎಂ ಆಗಬೇಕೆಂಬುವದೇ ನನ್ನ ಕನಸಾಗಿದೆ. ಕೇಂದ್ರದಲ್ಲಿ ನರೇಂದ್ರ ಮೋದಿ, ರಾಜ್ಯದಲ್ಲಿ ಕುಮಾರಸ್ವಾಮಿ, ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಅಪ್ಪುಗೌಡ ಪಾಟೀಲ ಮನಗೂಳಿ ಅಧಿಕಾರಕ್ಕೆ ಬರುವಂತಾಗಬೇಕಿದೆ ಎಂದರು.

ಜೆಡಿಎಸ್ ರಾಜ್ಯ ಹಿರಿಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿ, ನಾನು ನಾಲ್ಕು ಸಲ ಸೋತಿದ್ದರೂ ಕ್ಷೇತ್ರದ ಜನರು ತಮ್ಮ ಮನಸ್ಸಿನಲ್ಲಿ ನನ್ನನ್ನು ಸದಾ ಇಟ್ಟುಕೊಂಡಿದ್ದಾರೆ ಎಂದರು.

ಮಾಜಿ ಸಚಿವ ವೆಂಕಟರಾವ ನಾಡಗೌಡ, ಮಾಜಿ ಸಚಿವ ಅಲ್ಕೋಡ ಹನುಮಂತಪ್ಪ, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ, ಅಪ್ಸರಾಬೇಗಂ ಚಪ್ಪರಬಂದ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಸಕ ರಾಜುಗೌಡ ಪಾಟೀಲ, ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ, ಮಾಜಿ ಶಾಸಕ ವೀರಭದ್ರಪ್ಪ ಹಾಲಳ್ಳಿ, ಬಾಲಚಂದ್ರ ಗುತ್ತೆದಾರ, ಡಾ.ಸುನೀತಾ ಚವ್ಹಾಣ, ಸುಭಾಸಗೌಡ ಪಾಟೀಲ, ಬಿ.ಕೆ. ಕಲ್ಲೂರ, ಅಂಬೋಜಿ ಪವಾರ, ಸೇರಿದಂತೆ ಮುಂತಾದವರು ಇದ್ದರು.

ಪಟ್ಟಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ಸ್ವಯಂ ಚಾಲಿತ ಚಾಲನಾ ಪಥದ ಉದ್ಘಾಟನೆ

ಬೈಲಹೊಂಗಲ: ಪಟ್ಟಣದ ಹೊರವಲಯದ ದೇವಲಾಪುರ ರಸ್ತೆಯಲ್ಲಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಿದ ಸ್ವಯಂ ಚಾಲಿತ ಚಾಲನಾ ಪಥದ ಉದ್ಘಾಟನಾ ಸಮಾರಂಭ ಶುಕ್ರವಾರ ಜೂ.18 ರಂದು ಬೆಳಗ್ಗೆ 10 ಕ್ಕೆ ಜರುಗಲಿದೆ. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡಿಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಘನ ಉಪಸ್ಥಿತಿಯಲ್ಲಿ, ಶಾಸಕ ಮಹಾಂತೇಶ ಕೌಜಲಗಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹಾಗೂ ಜಿಲ್ಲೆಯ ಸಂಸದರು, ಶಾಸಕರು, ವಿಧಾನ ಪರಿಷತ ಸದಸ್ಯರು, ಸಾರಿಗೆ ಅಧಿಕಾರಿಗಳು ಆಗಮಿಸುವರೆಂದು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಯಾನಂದ ನರಸಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭವನದ ಕಾಮಗಾರಿಗೆ ರಾಜು ಕಾಗೆ ಭೂಮಿಪೂಜೆ

ಕಾಗವಾಡ: ಸಮುದಾಯ ಭವನಗಳು ಕೇವಲ ಜಾತ್ರೆ, ಧಾರ್ಮಿಕ ಕಾರ್ಯಕ್ರಮಕ್ಕೆ ಸಿಮೀತವಾಗದೆ, ಧಾಮಿರ್ಕ ಚಟುವಟಿಕೆಗಳ ಜತೆಗೆ ಆಯಾ ಸಮು ದಾಯದ ಮಹಿಳೆಯರ ಆರ್ಥಿಕ ಸಾವಲಂಬನೆಗಾಗಿ ಸ್ವಯಂ ಉದ್ಯೋಗ ಶಿಬಿರಗಳನ್ನು ಹಮ್ಮಿಕೊಂಡು, ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ವೇದಿಕೆಗಳಾಗಬೇಕೆಂದು ಶಾಸಕ ರಾಜು ಕಾಗೆ ಹೇಳಿದರು. ಅವರು ತಾಲೂಕಿನ ಐನಾಪೂರ ಪಟ್ಟಣದ ಪದ್ಮಾವತಿ ಸಮುದಾಯ ಭವನ, ವಾಲ್ಮೀಕಿ ಸಮುದಾಯ ಭವನ ಹಾಗೂ ಮೋಳೆ ಗ್ರಾಮದ ಕೋಳೆಕರ ಓಣಿಯ ಸಮುದಾಯ ಭವನ, ಶಿವ ಬಸವ ಭಜನಾ ಮಂಡಳದ ಸಮುದಾಯ ಭವನಗಳಿಗೆ ತಲಾ ಇಪ್ಪತ್ತು ಲಕ್ಷ ರುಪಾಯಿಗಳಂತೆ ರಾಜ್ಯ ಇಲಾಖೆ ವತಿಯಿಂದ ಮಂಜೂ ರಾದ ಭವನಗಳ ಕಾಮಗಾರಿಗಳಿಗೆ ಭೂಮಿ ಪೂಜೆ ಸಲ್ಲಿಸಿದರು.

ವಿದ್ಯಾರ್ಥಿಯನ್ನು ಜ್ಞಾನ, ತಂತ್ರಜ್ಞಾನದೊಂದಿಗೆ ಭವಿಷ್ಯ ರೂಪಿಸಲು ಶ್ರಮಿಸುವೆ

ಕೇಂದ್ರದ ಎಮರ್ಜಿಂಗ್ ವಿವಿ ಪ್ರಶಸ್ತಿ ಸ್ವೀಕರಿಸಿದ ತ್ಯಾಗರಾಜ

ಬೆಳಗಾವಿ: ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದಿಂದ ಎಮರ್ಜಿಂಗ್ ಯುನಿವರ್ಸಿಟಿ ಪ್ರಶಸ್ತಿಯನ್ನು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಮುಂಬೈನ ಐಐಟಿಯಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಕುಲಪತಿ ಪ್ರೊ. ಸಿ. ಎಂ. ತ್ಯಾಗರಾಜ ಅವರು ಸಮಾಜದ ಅಂಚಿನಲ್ಲಿರುವ ಕಟ್ಟಕಡೆಯ ವಿದ್ಯಾರ್ಥಿಯನ್ನು ಜ್ಞಾನ ಮತ್ತು ತಂತ್ರಜ್ಞಾನದೊಂದಿಗೆ ಅವರ ಭವಿಷ್ಯವನ್ನು ರೂಪಿಸುವುದಕ್ಕಾಗಿ ಶ್ರಮಿಸುತ್ತಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರಕಾರದ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾಲಯ ಮುನ್ನಡೆಯುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಸಂಶೋಧನೆ , ಸಮಾಜ ಸೇವೆ, ಆಡಳಿತ, ಶಿಕ್ಷಣ, ಪರಿಸರ ಸಂರಕ್ಷಣೆ ಮುಂತಾದ ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು. ಎಲ್ಲಾ ಪ್ರಶಸ್ತಿಗಳನ್ನು ಇಸ್ರೋ ಮಾಜಿ ಅಧ್ಯಕ್ಷರಾದ ಪದ್ಮಶ್ರೀ ಡಾ. ಕಿರಣ ಕುಮಾರ ಅವರು ಪ್ರದಾನ ಮಾಡಿದರು.

ಕರ್ನಾಟಕದಲ್ಲಿ ಇಲ್ಲಿಯವರೆಗೆ ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾಗಿರುವುದು ಕೇವಲ ಎರಡು ಸಂಸ್ಥೆಗಳು ಮಾತ್ರ. ಒಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಎರಡನೆಯದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ. ಸ್ವಾತಂತ್ರ್ಯ ಹೋರಾಟದ ಬೆಳ್ಳಿ ಚುಕ್ಕಿಯಾದ, ವೀರವನಿತೆ ರಾಣಿ ಚನ್ನಮ್ಮನ ನಾಮಧೇಯ ಹೊಂದಿದ ಉತ್ತರ ಕರ್ನಾಟಕದ ಹೆಮ್ಮೆಯ ಶಿಕ್ಷಣ ಸಂಸ್ಥೆಯಾದ ರಾಣಿ ವಿಶ್ವವಿದ್ಯಾಲಯಕ್ಕೆ ಬಂದಿರುವುದು ಅತ್ಯಂತ ಸಂತಸ ತಂದಿದೆ. ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು, ವಿವಿಯ ಸಂಯೋಜಿತ ಕಾಲೇಜಿನ ಸಿಬ್ಬಂದಿಗಳು ಹರ್ಷವ್ಯಕ್ತಪಡಿಸಿದರು.



ಮುಂಬೈನ ಐಐಟಿಯಲ್ಲಿ ನಡೆದ ಸಮಾರಂಭದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ ಸಿ ಎಂ ತ್ಯಾಗರಾಜ ಅವರಿಗೆ ಪ್ರತಿಷ್ಠಿತ ಎಮರ್ಜಿಂಗ್ ಯುನಿವರ್ಸಿಟಿ ಅವಾರ್ಡ್ ಪಡೆದರು.

ಇದೇ ಸಂದರ್ಭದಲ್ಲಿ ರಾಚವಿ ಭೂಗೋಳಶಾಸ್ತ್ರ ವಿಭಾಗದ ಪ್ರೊ. ಬಸವರಾಜ ಬಗಾಡೆ ಅವರು ನ್ಯಾಷನಲ್ ಜಿಯೋಸ್ಪೆಷಿಯಲ್ ಎಮರ್ಜಿಂಗ್ ಫ್ಯಾಕಲ್ಟಿ ಫೆಲೋ ಅವಾರ್ಡ್ ಗೆ ಭಾಜನರಾದರು.

ಈ ರಾಷ್ಟ್ರಮಟ್ಟದ ಗೌರವದೊಂದಿಗೆ ಪೋಸ್ಸೀ ಜಿಐಎಸ್ (ಎನ್‌ಎಂಇಐಸಿಟಿ) ಯೋಜನೆಯ ಹಲವಾರು ಪ್ರಯೋಜನಗಳನ್ನು ಇನ್ನೂ ಮುಂದೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಬಂಧಿತ ಕಾಲೇಜುಗಳು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಗಳಿಗೆ ಮುಕ್ತವಾಗಲಿವೆ.

ಈ ಪ್ರಶಸ್ತಿ ಕಾರ್ಯಕ್ರಮವನ್ನು ಐಐಟಿ ಬಾಂಬೆಯ ಪೋಸ್ಸೀ (ಜಿಐಎಸ್) ಯೋಜನೆ ಹಾಗೂ ಐಸಿಟಿ ಮೂಲಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಿಷನ್ (KJCMAU), ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

> ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲು ನಮ್ಮ ಸಿಬ್ಬಂದಿಗಳು ಸದಾ ಕಾರ್ಯಪ್ರವೃತ್ತರಾಗುತ್ತಿದ್ದಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅವರ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿ ಶ್ಲಾಘಿಸಿದರು. ಅವರ ಕಾರ್ಯತತ್ಪರತೆ ಮತ್ತು ಸಿಂಡಿಕೇಟ್ ಸದಸ್ಯರು, ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯರ ಅವಿರತ ಪ್ರಯತ್ನದಿಂದ ಇಂಥ ಒಂದು ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾದೇವು .
>
> – ಪ್ರೊ. ಸಿ. ಎಂ. ತ್ಯಾಗರಾಜ, ಕುಲಪತಿ

ಅಭಿವೃದ್ಧಿ, ರಾಜಕೀಯ ಬೆಳವಣಿಗೆ ಬಗ್ಗೆ ಸಭೆ ಇಂದು

ಹುಕ್ಕೇರಿ: ತಾಲೂಕಿನ ಅಭಿವೃದ್ಧಿ ಹಾಗೂ ಮುಂಬರುವ ರಾಜಕೀಯ ಬೆಳವಣಿಗೆ ಕುರಿತು ಚರ್ಚಿಸುವ ಉದ್ದೇಶದಿಂದ ಇಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ವಿಶ್ವರಾಜ ಸಭಾಭವನದಲ್ಲಿ ಸಭೆ ಆಯೋಜಿ ಸಲಾಗಿದೆ ಎಂದು ಮಾಜಿ ಸಂಸದ ಉಮೇಶ್ ಕತ್ತಿ ಹೇಳಿದರು.

ಗುರುವಾರ ಪಟ್ಟಣದ ಪಿಕಾರ್ಡ್ ಬ್ಯಾಂಕ್ ಸಭಾಭವನದಲ್ಲಿ ಕರೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಕ್ಕೇರಿ ಮತಕ್ಷೇತ್ರದ ಬಿಜೆಪಿ ಶಾಸಕ ನಿಖಿಲ ಕತ್ತಿ ಕಳೆದ 2 ವರ್ಷಗಳಿಂದ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸ, ಕ್ಷೇತ್ರದ ಬಾಕಿ ಉಳಿದ ಕೆಲಸಗಳು, ಸರಕಾರಿ ಶಾಲೆಗಳ ಪರಿಸ್ಥಿತಿ, ರೈತರ, ನಿರುದ್ಯೋಗಿಳ ಸಮಸ್ಯೆ, ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಹಾಗೂ ರಾಜಕೀಯ ಕ್ಷೇತ್ರಲ್ಲಿ ಆಗುತ್ತಿರುವ ಬದಲಾವಣೆಗಳು, ಸಹಕಾರಿ ರಂಗದಲ್ಲಿ ಮುಂದೆ ಅಗಬೇಕಾಗಿರುವ ಬದಲಾವಣೆಯ ಕುರಿತು ಕಾರ್ಯಕರ್ತರೊಂದಿಗೆ ಚರ್ಚಿಸಲಾಗುವುದು ಎಂದರು.

ಮಹಾವೀರ ಸಮೂಹ ಸಂಸ್ಥೆಗಳ ಅಧ್ಯಕ್ಷ ಮಹಾವೀರ ನಿಲಜಗಿ, ಮುಖಂಡರಾದ ಸತ್ಯಪ್ಪಾ ನಾಯಿಕ, ಗುರುರಾಜ ಕುಲಕರ್ಣಿ, ಪಜ್ವಲ್ ನಿಲಜಗಿ, ಚನ್ನಪ್ಪಾ ಗಜಬರ, ಸುಹಾಸ ನೂಲಿ, ಬಸವರಾಜ ಗಂಗಣ್ಣವರ, ರಿಯಾಜ ಮುಲ್ಲಾ, ಮತ್ತಿತರರು ಉಪಸ್ಥಿತರಿದ್ದರು.

> ಸಹಕಾರಿ ಸಂಘ ಸಂಸ್ಥೆಗಳಲ್ಲಿ ಚುನಾವಣೆ ಎದುರಿಸುತ್ತಾರೆ ಕತ್ತಿ ಸಹೋದರರು ಮಾಜಿ ಸಚಿವ ಎಬಿ ಪಾಟೀಲ ಅವರು ಹೊಂದಾಣಿಕೆ ಮಾಡಿಕೊಂಡು ಜನರ ಅಭಿಪ್ರಾಯವಿದೆ. ನಾವಾಗಲ್ಲಿ. ಅಥವಾ ಮಾಜಿ ಎಬಿ ಪಾಟೀಲ ಅವರು ಕೂಡಿ ಚರ್ಚಿಸಿಲ್ಲಾ. ಇಲ್ಲಿವರೆಗೂ, ನಾವು ಹೊಂದಾಣಿಕೆ ರಾಜಕೀಯ ಮಾಡಿಲ್ಲ, ಎ.ಬಿ ಪಾಟೀಲ, ಕಾರ್ಯಕರ್ತರು ಕ್ಷೇತ್ರದ ಅಭಿವೃದ್ಧಿ ಕುರಿತು ತಮ್ಮ ಸಲಹೆ ನೀಡಬಹುದು. ಬಿಡಿಸಿಸಿ ಬ್ಯಾಂಕ, ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ, ಹುಕ್ಕೇರಿ ಗ್ರಾಮೀಣ ವಿದ್ಯತ್ ಸಹಕಾರಿ ಸಂಘ, ಚುನಾವಣೆ ಕ್ಷೇತ್ರದ ಕ್ಷೇತ್ರದ ಜನರ, ಕಾರ್ಯಕರ್ತರ ಸಲಹೆ, ಅಭಿಪ್ರಾಯಪಡೆದು ಮುಂದಿನ ತಿರ್ಮಾಣ ತೆಗೆದುಕೊಳ್ಳುವುದು.
>
> – ರಮೇಶ್ ಕತ್ತಿ, ಮಾಜಿ ಸಂಸದ

ಪಟ್ಟಣದ ಪಿಕಾರ್ಡ್ ಬ್ಯಾಂಕ್ ಸಭಾಭವನದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಉಮೇಶ್ ಕತ್ತಿ ಮಾತನಾಡಿದರು.

ಸಿಇಒ ಭೇಟಿ, ಜೆಜೆಎಂ ಕಾಮಗಾರಿ ಪರಿಶೀಲನೆ

ಅಥಣಿ: ಜಿಲ್ಲೆಯ ಅಥಣಿ ಹಾಗೂ ಕಾಗವಾಡ ತಾಲೂಕಿನ ಹಲವಾರು ಗ್ರಾಮಗಳಲ್ಲಿ ನಡೆಯುತ್ತಿರುವ ಜಲಜೀವನ್ ಮಿಷನ್ ಯೋಜನೆ ಕಾಮಗಾರಿಗಳನ್ನು ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಪರಿಶೀಲನೆ ನಡೆಸಿದರು.

ಗುರುವಾರ ಅಥಣಿ ತಾಲೂಕಿನ ಕನ್ನಾಳ, ಐಗಳಿ, ಪಡತರವಾಡಿ, ಕಟಗೇರಿ, ರಡ್ಡೇರಹಟ್ಟಿ ಸೇರಿದಂತೆ ವಿವಿಧ ಗ್ರಾಮಗಳ ಜಲ ಜೀವನ ಮಿಷನ್ ಯೋಜನೆಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಯೋಜನೆ ಬಗ್ಗೆ ಸಾರ್ವಜನಿಕರೊಡನೆ ಚರ್ಚೆ ಮಾಡಿ ಮಾಹಿತಿ ಪಡೆದುಕೊಂಡರು.

ಕನ್ನಾಳ ಗ್ರಾಮ ಪಂಚಾಯತಿ ಮುಂದೆ 15 ನೇ ಹಣಕಾಸು ಯೋಜನೆಯಡಿ ನಿರ್ಮಾಣವಾಗುತ್ತಿರುವ ಉದ್ಯಾನವನ ವೀಕ್ಷಣೆ ಮಾಡಿದರು. ಗ್ರಾಮ ಪಂಚಾಯತಿ ಸಭಾ ಭವನದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಜೊತೆ ಸ್ವಚ್ಛ ಭಾರತ ಮಿಷನ್ (ಗ್ರಾ) ಯೋಜನೆಯ ಘಟಕಾಂಶಗಳ ಪ್ರಗತಿ, ಹೆಸ್ಕಾಂ ಬಿಲ್ಲುಗಳು ಪುನರ್‌ವಿಮರ್ಶೆ, ಹೊಸ ಗ್ರಂಥಾಲಯಗಳ ಬಗ್ಗೆ ಚರ್ಚಿಸಿದರು. ಕನ್ನಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲೆಗೆ ಬೇಟಿ ನೀಡಿ ಮಕ್ಕಳ ಜತೆ ಬಿಸಿಯೂಟ ಹಾಗೂ ಸಮವಸ್ತ್ರ ಬಗ್ಗೆ ಚರ್ಚೆ ಮಾಡಿದರು.

ಜಲ ಜೀವನ್ ಮಿಷನ್ ಯೋಜನೆಯಡಿ ನಮೆಗಳಿಗೆ ನೀರು ಪೂರೈಕೆ ಆಗುತ್ತಿರುವುದನ್ನು ಪರೀಕ್ಷಿಸುತ್ತಿರುವ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ.

ಕಾಗವಾಡ ತಾಲೂಕಿನ ಮೋಳೆ ಗ್ರಾಮದ ದೇವರಡ್ಡಿ ತೋಟ ಮತ್ತು ಕೆಂಪವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೌಲಗುಡ್ಡ ಹಾಗೂ ಮಂಗಸೂಳಿ ಗ್ರಾಮದಲ್ಲಿ ಅನುಷ್ಠಾನಗೊಳಿಸಲಾದ ಜೆಜೆಎಂ ಕಾಮಗಾರಿಗಳಿಗೆ ಭೇಟಿ ನೀಡಿ ಫಲಾನುಭವಿಗಳೊಂದಿಗೆ ಚರ್ಚಿಸಿದರು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಜನರೊಂದಿಗೆ ಸಂವಾದ ನಡೆಸಿದರು.

ಬಳಿಕ ಜಲ ಜೀವನ ಮಿಷನ್ ಯೋಜನೆಯ ಕಾಮಗಾರಿಗಳನ್ನು ವೀಕ್ಷಣೆ ಮಾಡಿ ನಂತರ ಕಾರ್ಯಾತ್ಮಕ ನಳ ಸಂಪರ್ಕದ ಕುರಿತು ಫಲಾನುಭವಿಗಳ ಜತೆ ಚರ್ಚೆ ಮಾಡಿದರು. ಮಂಗಸೂಳಿ ಗ್ರಾಮದಲ್ಲಿನ ನಲ್ಲಿಗಳಿಗೆ ಮೀಟರ್ ಅಳವಡಿಸುವಂತೆ ಹಾಗೂ ಕೆಲವು ನಲ್ಲಿ ಸೋರಿಕೆಯಾಗುತ್ತಿದ್ದು, ಅವುಗಳನ್ನು 15 ದಿನಗಳ ಒಳಗಾಗಿ ದುರಸ್ತಿ ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಿಗದಿತ ಅವಧಿಯಲ್ಲಿ ದುರಸ್ತಿ ಮಾಡದೇ ಹೋದಲ್ಲಿ ಸಹಾಯವಾಣಿ ನಂಬರಿಗೆ ಕರೆ ಮಾಡಲು ಸಾರ್ವಜನಿಕರಿಗೆ ಮಾನ್ಯರು ತಿಳಿಸಿದರು.

ಈ ಸಂದರ್ಭದಲ್ಲಿ ಅಥಣಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಶಿವಾನಂದ ಕಲ್ಲಾಪುರ ಮತ್ತು ಕಾಗವಾಡ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೀರಣ್ಣಾ ವಾಲಿ, ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಚಿಕ್ಕೋಡಿ ಪಾಂಡುರಂಗರಾವ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗ ಅಥಣಿ ರವೀಂದ್ರ ಮುರಗಾಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


ಗೋಕಾಕ್ ತಾಲೂಕಿನ ಮಾಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಫಲಾನುಭವಿಗಳಿಗೆ 2024, 25ನೇ ಸಾಲಿನ ಬಸವ ವಸತಿ ಯೋಜನೆ ಅಡಿಯಲ್ಲಿ ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರಗಳನ್ನು ಶಾಸಕ ರಮೇಶ ಜಾರಕಿಹೊಳಿ ಅವರು ವಿತರಿಸಿದರು. ಈ ಸಂದರ್ಭದಲ್ಲಿ ಭೀಮನಗೌಡ ಪೊಲೀಸಗೌಡರ,ಟಿ.ಆರ್ ಕಾಗಲ,ಸುರೇಶ ಸನದಿ,ಅಶೋಕ ಗೋಣಿ,ಗ್ರಾ.ಪಂ ಅಧ್ಯಕ್ಷರಾದ ಈರವ್ವ ಬುನಾದಿ,ಉಪಾಧ್ಯಕ್ಷರಾದ ಮುತ್ತೇಪ್ಪ ಖಾನಪ್ಪನವರ,ಲಕ್ಕಪ್ಪ ಬಂಡಿ, ರಂಗಪ್ಪ ನಂದಿ,ಮಹಾದೇವ ಚೂನನ್ನವರ, ಕೆಂಪವ್ವ ಬಂಗೇನ್ನವರ, ಲಕ್ಕವ್ವ ಕುರಿ ಸೇರಿದಂತೆ ಪಿಡಿಒ ವೀರಭದ್ರ, ಗುಂಡಿ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಧರ್ಮಸ್ಥಳ ಸಂಸ್ಥೆಯಿಂದ ಕೆರೆ ಅಂಗಳದಲ್ಲಿ ಸಸಿಗಳ ನಾಟಿ

ರಾಮದುರ್ಗ: ತಾಲೂಕಿನ ಕುಳ್ಳೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿದ ನಮ್ಮೂರು ನಮ್ಮ ಕೆರೆ ಅಂಗಳದಲ್ಲಿ ಗಿಡ ನಾಟಿ ಕಾರ್ಯಕ್ರಮ ಜರುಗಿತು.

ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಎಚ್. ಆರ್. ಲವಕುಮಾರ ಮಾತನಾಡಿ, ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಅಳುವಿನ ಅಂಚಿನಲ್ಲಿರುವ ಕೆರೆಗಳನ್ನು ದತ್ತು ಪಡೆದು ನಮ್ಮೂರು ನಮ್ಮ ಕೆರೆ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಪಡಿಸಿ, ಪುನಃ ಗ್ರಾಮಸ್ಥರಿಗೆ ಹಸ್ತಾಂತರಿಸುವ ಕಾರ್ಯಕ್ರಮ ಜಾರಿಯಲ್ಲಿದೆ. ಯೋಜನೆಯಿಂದ ಗ್ರಾಮದ ಜನ ಜಾನುವಾರುಗಳಿಗೆ ನೀರಿನ ಭವಣೆ ತಪ್ಪಲಿದೆ. ಜತೆಗೆ ಕರೆ ಅಂಗಳದ ಸುತ್ತಲೂ ಗಿಡಗಳನ್ನು ಬೆಳೆಸುವುದರಿಂದ ಪರಿಸರ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಸಮಾರಂಭದ ಸಾನಿಧ್ಯ ವಹಿಸಿದ್ದ ಗ್ರಾಮದ ಶ್ರೀ ಬಸವಾನಂದ ಭಾರತಿ ಮಹಾಸ್ವಾಮಿಗಳು ಕಾರ್ಯಕ್ರಮ ಉದ್ಘಾಟನೆ ಮಾಡಿ ಆಶೀರ್ವಚನ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ನಿಂಗಪ್ಪ ಬಳಿಗಾರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದಂತಹ ಜಿಲ್ಲೆಯ ಗೌರವಾನ್ವಿತ ಜಿಲ್ಲಾ ನಿರ್ದೇಶಕರು ಯೋಜನೆಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು ಹಾಗೂ ಗಿಡಗಳನ್ನು ಸಂರಕ್ಷಿಸುವ ಬಗ್ಗೆ ಗ್ರಾಮಸ್ಥರಿಗೆ ಅರಿವು ಮೂಡಿಸಿದರು.

ರಾಮದುರ್ಗ ತಾಲೂಕಿನ ಕುಳ್ಳೂರು ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಅಭಿವೃದ್ಧಿ ಪಡಿಸಿದ ನಮ್ಮೂರು ನಮ್ಮ ಕೆರೆ ಅಂಗಳದಲ್ಲಿ ಗಣ್ಯರು ಗಿಡ ನಾಟಿ ಮಾಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ ದೇವರೆಡ್ಡಿ, ಗಸ್ತು ಅರಣ್ಯಾಧಿಕಾರಿ ಹಾಗೂ ಅರಣ್ಯ ಪಾಲಕರಾದ ಡಿ.ಎಚ್. ಪಾಟೀಲ, ಮಹೇಶ್ ಕಿಲ್ಲಾರಿ, ಕೆರೆ ಅಭಿಯಂತರ ನಿಂಗರಾಜ್ ಮಾಳವಾಡ, ಜಿಲ್ಲಾ ಜನಜಾಗೃತಿ ವೇದಿಕೆ ನಿಕಟಪೂರ್ವ ಅಧ್ಯಕ್ಷ ಅಶೋಕ ಕುಲಗೋಡ, ಕೆ.ಎಂ.ಎಫ್. ಅಧ್ಯಕ್ಷ ಬಿ.ಎಸ್. ಹಲಗತ್ತಿ, ಪಿಕೆಪಿಎಸ್ ಅಧ್ಯಕ್ಷ ಕೆ.ಎಚ್. ಹಿರೇಹನಮಣ್ಣವರ, ಎಸ್‌ಡಿಎಂಸಿ ಅಧ್ಯಕ್ಷ ಎಸ್.ಕೆ. ಬಾಲಣ್ಣವರ್, ರುದ್ರಗೌಡ ರಂಗನಗೌಡ ಪಾಟೀಲ್, ರಾಜು ಮರಲಿಂಗಣ್ಣವರ್, ಶಿವು ಬಳಿಗಾರ, ಸೇವಾ ಪ್ರತಿನಿಧಿಗಳಾದ ಸಾವಿತ್ರಿ, ಲಕ್ಷ್ಮೀ ಸೇರಿದಂತೆ ಯೋಜನೆಯ ಕಾರ್ಯಕರ್ತರು, ಒಕ್ಕೂಟದ ಪದಾಧಿಕಾರಿಗಳು, ಸಂಘದ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ವಿದ್ಯೆ ಅರಸಿ ಬಂದವರಿಗೆ ಭವಿಷ್ಯ ಕಟ್ಟಿಕೊಡುವ ಯಾದವಾಡ

ಮೂಡಲಗಿ; ವಿದ್ಯೆ ಅರಸಿಕೊಂಡು ಬಂದವರಿಗೆ ಅಪ್ಪಿಕೊಂಡು ಬದುಕು ಕಟ್ಟಿಕೊಳ್ಳಲು ಅಪ್ಪಿಕೊಂಡ ಮಣ್ಣಿನ ಗುಣ ಯಾದವಾಡದ ಮಣ್ಣಿನಲ್ಲಿದೆ ಇದೊಂದು ಒಂದು ಶಕ್ತಿ ಕೇಂದ್ರ, ಕವಿ ಪುಂಗವರು ಸ್ವಾತಂತ್ರ್ಯ ಹೋರಾಟಗಾರರಿಗೆ ಜನ್ಮ ನೀಡಿದ ಭೂಮಿ ಇಲ್ಲಿ ವಿದ್ಯೆ ಅರಿಸಿ ಬಂದ ಅದೆಷ್ಟೋ ವಿದ್ಯಾರ್ಥಿಗಳು ಇಂದು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ್ದು ಸ್ಮರಣೀಯವಾದುದು ಎಂದು ನಿವೃತ್ತ ಪ್ರಾಚಾರ್ಯ ಎನ್.ಎಸ್.ಪಂಚಗಾರ ಹೇಳಿದರು.

ಅವರು ತಾಲೂಕಿನ ಯಾದವಾಡ ಪಟ್ಟಣದ ಚನ್ನಬಸಪ್ಪ ಹುಬ್ಬಳ್ಳಿ ಮುತ್ಯಾ ಸುಮಂಗಲಾ ಕಲ್ಯಾಣ ಮಂಟಪದಲ್ಲಿ ಯಾದವಾಡ ಜಿ.ಎನ್.ಎಸ್ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ 1999–2000 ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಇಲ್ಲಿ ಕಲಿತ ಎಲ್ಲರೂ ಪುಣ್ಯವಂತರು ಹೆತ್ತ ಮಕ್ಕಳು ಕೂಡಾ ಗೌರವಿಸದ ಈ ಕಾಲ ಘಟ್ಟದಲ್ಲಿ ಹಳೆ ವಿದ್ಯಾರ್ಥಿಗಳು ನಮ್ಮನ್ನು ನಡೆಸಿಕೊಂಡ ರೀತಿ ಅದ್ಭುತ, ಅದನ್ನು ಮಾತಿನಲ್ಲಿ ವರ್ಣಿಸಲ್ಲುಸಾಧ್ಯ ಎಂದು ಭಾವುಕರಾದರು.

ಪತ್ರಕರ್ತ ವೆಂಕಟೇಶ ಗುಡೆಪ್ಪನವರ, ಶಿಕ್ಷಕಿ ಮಹಾದೇವಿ ವಕ್ಕುಂದ, ಅಣ್ಣಪ್ಪ ಗಾಣಗೇರ, ಶ್ರೀಶೈಲ್ ಶಂಕರ ಶೆಟ್ಟಿ, ಮಂಜುನಾಥ ಗಾಣಗೇರ, ಮಾತನಾಡಿ ಬದುಕಿನಲ್ಲಿ ಯಾವುದೇ ಸಾಧನೆಯ ಹಿಂದೆ ಗುರುಗಳ ಮಾರ್ಗದರ್ಶನ ಜೀವನುದುದ್ದಕ್ಕೂ ಅಗತ್ಯ, ಅದರಲ್ಲಿಯೂ ಬದುಕಿನ ಆರಂಭದ ಮೆಟ್ಟಿಲುಗಳನ್ನು ಕಲಿಸುವ ಪ್ರೌಢಶಾಲಾ ಶಿಕ್ಷಕರನ್ನಂತೂ ಮರೆಯಲು ಅಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮಹಾವಿದ್ಯಾಲಯದ 1999–2000 ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮ ನಡೆಯಿತು.

ರಾಜ್ಯ ಸಂಪನ್ಮೂಲ ಶಿಕ್ಷಕ ಎಸ್.ಎಸ್. ಬಳೂರಗಿ ಮಾತನಾಡಿ, ಜಿ.ಎನ್.ಎಸ್ಕನ್ನಡ ಮಾಧ್ಯಮ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳೇ ಬದುಕು, ಸಮಾಜದಲ್ಲಿ ಛಲ, ಹಿಂಜರಿಕೆಯಿಲ್ಲದೇ ಮುನ್ನಡೆಯಲು ಸಾಧ್ಯ ಎಂದರು. ಹುಬ್ಬಳ್ಳಿ ಮಠದ ಶ್ರೀಚನ್ನಬಸಪ್ಪ ಮಹಾಸ್ವಾಮಿಗಳು ಸಾನಿಧ್ಯವಹಿಸಿ ಮಾತನಾಡಿ ಎಸ್.ಸಿ.ಗಾಣಗಿ, ಎಂ.ಗೋಪಾಲ, ಪಿ.ಬಿ.ದೇಶಪಾಂಡೆ, ಪಿ.ಎಸ್.ಕಲ್ಯಾಣಿ, ಜಿ.ಎಚ್.ಕಾಂಬಳೆ, ಹನಮಂತ ಮಾದರ ಶಿಕ್ಷಕರು ಮಾತನಾಡುವುದುರ ಜೊತಗೆ ಹಾಡು ಹಾಡಿ ರಂಜಿಸಿದರು. ಎನ್.ಡಿ.ಅತ್ತಾರ ಎಸ್.ಪಿ.ಗಾಣಗಿ, ಎಸ್.ಎಸ್.ಹೊಸಮನಿ, ಆಯ್,ಎಚ್.ಪಠಾಣ, ಲಲಿತಾ ಶೆಗುಣಸಿ, ಸುಮನ್ ಚನ್ನಾಳ, ಡಾ.ಇಂದಿರಾ ಪಾಲಬಾವಿ ಮಾತನಾಡಿದರು.

ಬಿ.ಜಿ.ಕಾಗವಾಡ, ವಿಠ್ಠಲ ಮೇತ್ರಿ, ಯಶವಂತ ತೊಂಡಕಟ್ಟಿ, ವಿಲಾಸ ಬಂಡಿ, ಹಣಮಂತ ಕೆಂಜೋಳ ಸೇರಿದಂತೆ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗೆ ಸನ್ಮಾನಿಸಿಲಾಯಿತು. ಎಲ್ಲ ವೃತ್ತಿಯಲ್ಲಿರುವ ಹಾಗೂ ನಿವೃತ್ತ ಶಿಕ್ಷಕ ಹಾಗೂ ಶಿಕ್ಷಕೇತರ ಶಿಬ್ಬಂದಿಯನ್ನು ಸನ್ಮಾನಿಸಿ ಗೌರವಿಸಲಾಯಿತು. ಹಳೆ ವಿದ್ಯಾರ್ಥಿಗಳಿಂದ ಮನರಂಜನೆ ಕಾರ್ಯಕ್ರಮ, ಆಟಗಳು ಜರುಗಿದವು, ಶಿಕ್ಷಕರನ್ನು ಮೆರವಣಿಗೆಯ ಮೂಲಕ ಕಾರ್ಯಕ್ರಮದ ವೇದಿಕೆಗೆ ಪುಷ್ಪಾರ್ಚನೆಯ ಮೂಲಕ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಅನ್ವರ ಜಿಡ್ಡಿಮನಿ ಸ್ವಾಗತಿಸಿ, ಮಹಾದೇವಿ ವಕ್ಕುಂದ ಪ್ರಶಾಂತ ಚಿಕ್ಕೇಗೌಡರ ನಿರೂಪಿಸಿ, ವೀಣಾ ತಿರ್ಲಾಪುರ ವಂದಿಸಿದರು. ಕಾರ್ಯಕ್ರಮದಲ್ಲಿ ಎಲ್‌ಇಡಿ ಪರದೆಯ ಮೇಲೆ ಬಿತ್ತರಿಸಿದ ಇಂದಿನ ಹಾಗೂ ಹಳೆಯ ನೆನಪುಗಳು ಭಾವುಕರಾಗುವಂತೆ ಮಾಡಿದವು. ಬಸವರಾಜ ಕೌಜಲಗಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಶ್ವವಾಣಿ
ಕುಟುಂಬದ ಸದಸ್ಯರಾಗಲು ಬಯಸುತ್ತೀರಾ



ಇಲ್ಲಿದೆ ಅವಕಾಶ

ಮುಖ್ಯ ಉಪಸಂಪಾದಕ
- ದಿನಪತ್ರಿಕೆಯಲ್ಲಿ 8-10 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಉತ್ತಮ ಭಾಷಾಂತರ ಜ್ಞಾನ, ನವಮಾಧ್ಯಮದ ಕಲಿಕಾಸಕ್ತಿ

ಹಿರಿಯ ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 5-7 ವರ್ಷಗಳ ಅನುಭವ. ಎಲ್ಲ ವಿಭಾಗಗಳ ಪರಿಣತಿ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಉತ್ತಮ ಭಾಷಾ ಪ್ರೌಢಿಮೆ, ವಿನ್ಯಾಸ ಕೌಶಲ್ಯ.

ಉಪ ಸಂಪಾದಕ
- ದಿನಪತ್ರಿಕೆಯಲ್ಲಿ 2-3 ವರ್ಷಗಳ ಸುದ್ದಿ ಮನೆ ಅನುಭವ.
- ಪ್ರಚಲಿತ ವಿದ್ಯಮಾನಗಳ ಜ್ಞಾನ, ಭಾಷಾ ಪ್ರೌಢಿಮೆ, ಪುಟ ವಿನ್ಯಾಸ ಪರಿಣತಿ.

ಆಸಕ್ತರು, ಜುಲೈ 22ರೊಳಗಾಗಿ ಕೆಳಗೆ ಸೂಚಿಸಿದ ಸಂಪರ್ಕ ಸಂಖ್ಯೆಗೆ ವಾಟ್ಸ್ಆ್ಯಪ್ ಅಥವಾ ಇಮೇಲ್‌ಗೆ ಅರ್ಜಿಯನ್ನು ಕಳಿಸಬಹುದು

ವಿಶ್ವವಾಣಿ
hr@vishwavani.news
63623 93988

ಫೈನಾನ್ಸ್ ಕಿರುಕುಳ: ಚಾಲಕ ಆತ್ಮಹತ್ಯೆ

ಹಗರಿಬೊಮ್ಮನಹಳ್ಳಿ: ಖಾಸಗಿ ಫೈನಾನ್ಸ್ ಕಂಪನಿಯ ವ್ಯವಸ್ಥಾಪಕ ಮತ್ತು ಸಿಬ್ಬಂದಿಯ ಕಿರುಕುಳದಿಂದ ಬೇಸತ್ತು ತಾಲೂಕಿನ ಬನ್ನಿಕಲ್ಲು ಗ್ರಾಮದ ಸರಕುಸಾಗಣೆ ವಾಹನ ಚಾಲಕ ಅಂಬೇಶ್ (36) ಎಂಬುವರು ಮರದ ಕೊಂಬೆಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ವರ್ಷದ ಹಿಂದೆ ಸಾಲ ಪಡೆದಿದ್ದ ಅಂಬೇಶ್, ಕಳೆದ 3 ತಿಂಗಳಿನಿಂದ ದುಡಿಮೆ ಇಲ್ಲದ ಕಾರಣ ತಿಂಗಳ ಕಂತು 14,301 ಕಟ್ಟಲು ಸಾಧ್ಯವಾಗಿರಲಿಲ್ಲ. ಅದಕ್ಕೆ ಮೂರು ದಿನಗಳಿಂದ ಅವರ ಮನೆ ಬಳಿ ಬಂದ ಚೋಳಾ ಫೈನಾನ್ಸ್ ಕಂಪನಿಯ ಸಿಬ್ಬಂದಿ ಅವಾಚ್ಯ ಪದಗಳಿಂದ ನಿಂದಿಸಿದ್ದರು' ಎಂದು ಅಂಬೇಶ್ ಪತ್ನಿ ಕೆ.ಮಂಜುಳಾ ದೂರು ನೀಡಿದ್ದಾರೆ. ಫೈನಾನ್ಸ್ ವ್ಯವಸ್ಥಾಪಕ ಮತ್ತು ಸಿಬ್ಬಂದಿ ನಾಗಲಾಪುರ ತಾಂಡಾದ ನವೀನ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ' ಎಂದು ತಂಬ್ರಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕಾಡಾನೆ ದಾಳಿ: ವ್ಯಕ್ತಿ ಸಾವು

ಮಂಗಳೂರು: ಬೆಳ್ತಂಗಡಿ ತಾಲೂಕಿನ ಕೊಕ್ಕಡ ಗ್ರಾಮದ ಸೌತಡ್ಕ ಗುಂಡಿಯಲ್ಲಿ ಕಾಡಾನೆ ದಾಳಿಗೆ ಒಬ್ಬರು ಮೃತಪಟ್ಟಿದ್ದಾರೆ. ಸೌತಡ್ಕ ನಿವಾಸಿ ಬಾಲಕೃಷ್ಣ (60) ಮೃತರು. ಗುರುವಾರ ಬೆಳಗ್ಗೆ 11 ಗಂಟೆ ಸುಮಾರಿಗೆ ಕಾಡಾನೆಗಳ ಹಿಂಡು ಬಂದಿದ್ದು, ಸ್ಥಳೀಯರು ಓಡಿಸುವ ವೇಳೆ ಆನೆ ದಾಳಿ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಮೃತದೇಹವನ್ನು ಬೆಳ್ತಂಗಡಿ ಸರಕಾರಿ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು, ಘಟನಾ ಸ್ಥಳಕ್ಕೆ ಧರ್ಮಸ್ಥಳ ಠಾಣೆ ಪೊಲೀಸರು, ಅರಣ್ಯಾಧಿಕಾರಿಗಳು ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಮುಂದಿನ ಕಾನೂನುಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಜೋಕಾಲಿ ಸುತ್ತಿ ಬಾಲಕಿ ಸಾವು

ಭಟ್ಕಳ: ಜೋಕಾಲಿಯಲ್ಲಿ ಆಟ ಆಡುತ್ತಿರುವಾಗ ಜೋಕಾಲಿಯ ಹಗ್ಗ ಕುತ್ತಿಗೆಗೆ ಸುತ್ತಿಕೊಂಡ ಪರಿಣಾಮ ಉಸಿರುಗಟ್ಟಿ ಬಾಲಕಿಯೊಬ್ಬಳು ಮೃತಪಟ್ಟಿರುವ ದಾರುಣ ಘಟನೆ ತಾಲೂಕಿನ ತೆರ್ನಮಕ್ಕಿ ಸಭಾತಿಯಲ್ಲಿ ಗುರುವಾರ ನಡೆದಿದೆ. ಪ್ರಣೀತ ಜಗನ್ನಾಥ ನಾಯ್ಕ (13) ಮೃತ ಬಾಲಕಿ. ಈಕೆ 7ನೇ ತರಗತಿಯಲ್ಲಿ ಓದುತ್ತಿದ್ದಳು. ಮಳೆಯ ಪ್ರಯುಕ್ತ ಗುರುವಾರ ಶಾಲೆಗೆ ರಜೆಯಿದ್ದ ಕಾರಣ ಬಾಲಕಿ ತನ್ನ ಸಹೋದರಿಯೊಂದಿಗೆ ವೇಲ್ (ಶಾಲು) ನಿಂದ ಜೋಕಾಲಿ ಮಾಡಿಕೊಂಡು ಆಟವಾಡುತ್ತಿದ್ದಳು. ಈ ವೇಳೆ ಅಕಸ್ಮಾತಾಗಿ ಜೋಕಾಲಿಯ ಹಗ್ಗ ಕುತ್ತಿಗೆಗೆ ಸುತ್ತಿಕೊಂಡಿದೆ. ಇದರಿಂದಾಗಿ ಬಾಲಕಿಗೆ ಉಸಿರುಗಟ್ಟಿದ್ದು, ಅದರಿಂದ ತಪ್ಪಿಸಿಕೊಳ್ಳಲಾಗದೇ ಪ್ರಾಣ ಬಿಟ್ಟಿದ್ದಾಳೆ. ಘಟನೆ ಸಂದರ್ಭದಲ್ಲಿ ತಾಯಿಯು ಕೂಡಾ ಕೆಲಸಕ್ಕೆ ಹೋಗಿದ್ದರಿಂದ ಅಪಾಯದಿಂದ ತಪ್ಪಿಸಲು ಸಾಧ್ಯವಾಗಿಲ್ಲ ಎನ್ನಲಾಗಿದೆ.

ಬೆಳೆ ನಾಶ: ಫಾರೆಸ್ಟ್ ವಾಚರ್ ಮೇಲೆ ಹಲ್ಲೆ

ದಾವಣಗೆರೆ: ಕಾಡು ಹಂದಿಗಳು ಜಮೀನಿಗೆ ನುಗ್ಗಿ ಬೆಳೆ ನಾಶ ಮಾಡಿದ್ದಕ್ಕೆ ಆಕ್ರೋಶಗೊಂಡ ರೈತರು ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ ಘಟನೆ ಜಗಳೂರು ತಾಲೂಕಿನ ರಂಗಯ್ಯನದುರ್ಗದಲ್ಲಿ ನಡೆದಿದೆ.

ಅರಣ್ಯದ ಅಂಚಿನಲ್ಲಿರುವ ಗೋಡೆ ಗ್ರಾಮದ ಜಮೀನಿನಲ್ಲಿ ಕಾಡು ಹಂದಿಗಳು ಬೆಳೆ ಹಾನಿ ಮಾಡಿವೆ. ಇದರಿಂದ ಸಿಟ್ಟಿಗೆದ್ದ ಗ್ರಾಮದ ರಂಗಪ್ಪ ಮತ್ತು ಆತನ ಪುತ್ರ ಬಸವರಾಜ್ ಸೇರಿ ಫಾರೆಸ್ಟ್ ವಾಚರ್ ತಿಪ್ಪೇಶ್ ಮೇಲೆ ಹೊಲದಲ್ಲಿ ಹಲ್ಲೆ ನಡೆಸಿದ್ದಾರೆ. ರಂಗಯ್ಯದುರ್ಗ ಅರಣ್ಯದ ಪ್ರದೇಶಕ್ಕೆ ಹೊಂದಿಕೊಂಡು ಈ ರೈತರ ಜಮೀನುಗಳಿವೆ. ಜಮೀನುಗಳಿಗೆ ಕಾಡು ಹಂದಿ ಸೇರಿದಂತೆ ಹಲವು ಕಾಡು ಪ್ರಾಣಿಗಳು ನುಗ್ಗಿ ಬೆಳೆ ನಾಶ ಮಾಡುತ್ತಿದ್ದವು. ಇದರಿಂದ ಆಕ್ರೋಶಗೊಂಡ ರೈತ ರಂಗಪ್ಪ ಹಾಗೂ ಆತನ ಮಗ ಬಸವರಾಜ್ ಫಾರೆಸ್ಟ್ ವಾಚರ್ ತಿಪ್ಪೇಶ್‌ಗೆ ಅವಾಚ್ಯವಾಗಿ ನಿಂದಿಸಿ, ಕಲ್ಲಿನಿಂದ ಹಲ್ಲೆ ನಡೆಸಿದ್ದಾರೆ. ಅಲ್ಲದೇ ಕೊಲೆಗೆ ಯತ್ನಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ವೇಳೆ ಸ್ಥಳೀಯರು ಆಗಮಿಸಿ ತಿಪ್ಪೇಶ್ ಅವರನ್ನು ರಕ್ಷಣೆ ಮಾಡಿದ್ದಾರೆ. ಅವರನ್ನು ಜಗಳೂರು ಆಸ್ಪತ್ರೆಗೆ ದಾಖಲಿಸಿದ್ದಾರೆ.

ನಮ್ಮ ಯೋಜನೆಗಳನ್ನೇ ನಕಲು ಮಾಡಿದ್ದಾರೆ

ಬೆಂಗಳೂರು: ಕೆಲ ತಿಂಗಳಲ್ಲಿ ಎದುರಾಗಲಿರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಬಿಹಾರ ಸರಕಾರ ಘೋಷಿಸಿರುವ 'ಉಚಿತ ವಿದ್ಯುತ್' ಯೋಜನೆಯ ಕ್ರೆಡಿಟ್ ವಾರ್ ಜೋರಾಗಿದ್ದು, ರಾಜ್ಯ ಕಾಂಗ್ರೆಸ್ ನಾಯಕರು ಬಿಜೆಪಿಯವರ ಎಲ್ಲ ಯೋಜನೆಗಳು ಕಾಂಗ್ರೆಸ್‌ನ ಕಾಪಿ ಎಂದು ಟೀಕಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದು, ನಮ್ಮ ಮಾದರಿಯನ್ನು ಇಡೀ ದೇಶ ಪಾಲಿಸುತ್ತಿದೆ. ಬಡವರ ಬದುಕಿಗಾಗಿ ನಾವು ಗೃಹಲಕ್ಷ್ಮಿ ಯೋಜನೆ ಜಾರಿ ಮಾಡಿದ್ದೇವೆ. ಕಾಂಗ್ರೆಸ್ ಸರಕಾರ ಬಡವರಿಗಾಗಿ ಜಮೀನು, ನಿವೇಶನ, ಪಿಂಚಣಿ, ಮಕ್ಕಳಿಗೆ ಬಿಸಿಯೂಟ ಸೇರಿದಂತೆ ಅನೇಕ ಕಾರ್ಯಕ್ರಮ ಕೊಟ್ಟಿದೆ. ಅದೇ ರೀತಿ ನಾವು ಗ್ಯಾರಂಟಿ ಯೋಜನೆ ನೀಡಿದೆವು. ನಮ್ಮ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಮಂತ್ರಿಗಳು ಸೇರಿದಂತೆ ಬಿಜೆಪಿಯ ಎಲ್ಲಾ ನಾಯಕರು ಟೀಕೆ ಮಾಡಿದರು. ಕರ್ನಾಟಕದಲ್ಲಿ ಯೋಜನೆ ಜಾರಿಯಾದ ನಂತರ ಬಿಜೆಪಿಯವರೇ ಮಧ್ಯಪ್ರದೇಶ, ಮಹಾರಾಷ್ಟ್ರ, ದೆಹಲಿ, ಹರಿಯಾಣ ರಾಜ್ಯಗಳಲ್ಲಿ ಘೋಷಣೆ ಮಾಡಿದ್ದರು. ಈಗ ಬಿಹಾರದಲ್ಲಿ ಘೋಷಣೆ ಮಾಡಿದ್ದಾರೆ. ಕರ್ನಾಟಕ ಕಾಂಗ್ರೆಸ್ ಸರಕಾರ ಸದಾ ದೇಶಕ್ಕೆ ಮಾದರಿ. ಕಾಂಗ್ರೆಸ್ ಮಾದರಿಯನ್ನು ಇಡೀ ದೇಶವೇ ಪಾಲಿಸುತ್ತಿದೆ ಎಂದು ಅಭಿಪ್ರಾಯಪಟ್ಟರು.

ಕಾಪಿ ಮಾಡುವುದೇ ಬಿಜೆಪಿ ಕೆಲಸ: ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರತಿಕ್ರಿಯಿಸಿದ್ದು, ಬಿಜೆಪಿಯವರು ಮಾತನಾಡುವುದು ಒಂದು, ಮಾಡುವುದು ಮತ್ತೊಂದು. ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ಕಾಪಿ ಹೊಡೆದು ಪಾಸಾಗಿರುವ ಸ್ಟೂಡೆಂಟ್ಸ್ ಎಂದು ಟೀಕಿಸಿದರು.

ವಿರೋಧಿಸಿದವರೇ ಅನುಷ್ಠಾನ ಮಾಡುತ್ತಿದ್ದಾರೆ: ಕಾರ್ಮಿಕ ಸಚಿವ ಸಂತೋಷ ಲಾಡ್ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಆಧಾರ್ ಕಾರ್ಡ್, ನರೇಗಾ ಯೋಜನೆಗೆ ವಿರೋಧ ಮಾಡಿದ್ದರು. ಬಳಿಕ ಅದನ್ನೇ ಬಳಸಿಕೊಂಡು ಪ್ರಚಾರ ತೆಗೆದುಕೊಂಡರು. ನಮ್ಮ ಐದು ಗ್ಯಾರಂಟಿ ಯೋಜನೆಯ ಬಗ್ಗೆಯೂ ವಿರೋಧ ಮಾಡಿದರು. ಮಹಾರಾಷ್ಟ್ರ ಚುನಾವಣೆ, ಎಂಪಿ ಚುನಾವಣೆ, ಬಿಹಾರ ಚುನಾವಣೆಗಳಲ್ಲಿ ನಮ್ಮ ಯೋಜನೆಗಳನ್ನು ಕಾಪಿ ಮಾಡಿದ್ದಾರೆ ಎಂದು ಟೀಕಿಸಿದರು. ಬಿಹಾರ ಇವತ್ತು ಅಭಿವೃದ್ಧಿ ಹೊಂದದ ರಾಜ್ಯವಾಗಿದೆ. ಬಿಹಾರದಲ್ಲಿ ಅತಿ ಹೆಚ್ಚು ಅಪರಾಧ ನಡೆಯುವ ರಾಜ್ಯ ಆಗಿದೆ. ಕಡಿಮೆ ಜಿಡಿಪಿ, ಶಿಕ್ಷಣ ಇಲ್ಲ, ಕೈಗಾರಿಕೆ ಇಲ್ಲ. ಬಿಜೆಪಿ ಆಡಳಿತ ನಡೆಸುವ ರಾಜ್ಯಗಳಲ್ಲಿ ಆಡಳಿತ ಸರಿಯಿಲ್ಲ. ನಮ್ಮ ಜಿಡಿಪಿ ಸಹ ಅವರಿಗೆ ಹೋಗುತ್ತಿದೆ. ಇಷ್ಟು ಹಣ ಹೋಗಿದ್ರು, 15 ಮೇಲ್ಸೇತುವೆ ಬಿದ್ದಿವೆ. ಬಿಜೆಪಿ ಆಡಳಿತ ನಡೆಸುವ ರಾಜ್ಯಗಳು ದೊಡ್ಡ ಉದ್ದಾರ ಆಗಿಲ್ಲ ಎಂದು ಟೀಕಿಸಿದರು.

> ನಾವು ಕೊಟ್ಟ ಐದು ಗ್ಯಾರಂಟಿಗಳನ್ನು ಬಿಜೆಪಿ ಟೀಕಿಸುತ್ತಿತ್ತು. ಆದರೆ ತಾನು ಎಲ್ಲಾ ರಾಜ್ಯಗಳಲ್ಲೂ ಇದೇ ಮಾದರಿಯನ್ನು ನಕಲು ಮಾಡುತ್ತಿದೆ. ಈಗ ಚುನಾವಣೆಯ ಹತ್ತಿರವಿರುವ ಬಿಹಾರದಲ್ಲಿ ಬಿಜೆಪಿ-ಜೆಡಿಯು ಸಮ್ಮಿಶ್ರ ಸರಕಾರ ತಿಂಗಳಿಗೆ 125 ಯೂನಿಟ್ ಉಚಿತ ವಿದ್ಯುತ್ ಘೋಷಿಸಿದೆ. ಇದು ಬಿಜೆಪಿಯ ದ್ವಂದ್ವ ತೋರಿಸುತ್ತದೆ. ರಾಜ್ಯದಲ್ಲಿ ಮಹಿಳೆಯರ ನೆರವಿಗೆ ಗೃಹಲಕ್ಷ್ಮಿ ಯೋಜನೆಯನ್ನು ತಂದೆವು. ಬಿಜೆಪಿ ಇದನ್ನು ಟೀಕಿಸಿತು. ಆದರೆ ಮಹಾರಾಷ್ಟ್ರದಲ್ಲಿ ಅವರು ಅದನ್ನೇ ಮಾಡಿದ್ದಾರೆ.
>
> – **ಎಂ.ಬಿ.ಪಾಟೀಲ್** ಕೈಗಾರಿಕಾ ಸಚಿವ

ಮಳೆ ಅಬ್ಬರ

← ಮೊದಲಪುಟದಿಂದ

ಬೆಂಗಳೂರು-ಮಂಗಳೂರು ಹೆದ್ದಾರಿ ಬಂದ್: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದ ಹಿನ್ನೆಲೆ ಕಡಬ ತಾಲೂಕಿನ ಮಣ್ಣಗುಂಡಿ ಬಳಿ ಭೂಕುಸಿತ ಉಂಟಾಗಿದ್ದು, ಬೆಂಗಳೂರು- ಮಂಗಳೂರು ರಾಷ್ಟ್ರೀಯ ಹೆದ್ದಾರಿ ಬಂದ್ ಆಗಿದೆ. ಬೆಂಗಳೂರಿನಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯಕ್ಕೆ ಸಂಚರಿಸಲು ಯಾವುದೇ ಅಡಚಣೆ ಇಲ್ಲ, ಧರ್ಮಸ್ಥಳ ಕ್ರಾಸ್‌ನಿಂದ ಸ್ವಲ್ಪ ಮುಂದೆ ಕುಸಿತ ಉಂಟಾಗಿದೆ. ನೆಲ್ಯಾಡಿ ಬಳಿ ಎಡಕ್ಕೆ ಹೋಗಿ ಕೊಕ್ಕಡ ಮಾರ್ಗವಾಗಿ ರಾ.ಹೆ.75 ತಲುಪ ಬಹುದು ಎಂದು ಎಸ್‌ಪಿ ಡಾ.ಅರುಣ್ ಮನವಿ ಮಾಡಿದ್ದಾರೆ.

ಭೂಕುಸಿತದ ಭೀತಿ: ಮಡಿಕೇರಿ ಸುತ್ತಲಿನ ಪ್ರದೇಶಗಳಲ್ಲಿ ಕಳೆದ 2-3 ದಿನಗಳಿಂದ ನಿರಂತರ ಮಳೆಯಾಗುತ್ತಿರುವುದರಿಂದ ಮೇಕೇರಿ ಗ್ರಾಮ, ನವಗ್ರಾಮ ಹಾಗೂ ಶಕ್ತಿ ನಗರದಲ್ಲಿ ಭೂಕುಸಿತದ ಅತಂಕವುಂಟಾಗಿದೆ. ಈ ವ್ಯಾಪ್ತಿಯ ಬೆಟ್ಟದ ತಪ್ಪಲಿನಲ್ಲಿರುವ ಸುಮಾರು 13 ಮನೆಗಳು ಅಪಾಯದ ಅಂಚಿನಲ್ಲಿದ್ದು, ಕೆಲ ಮನೆಗಳ ಹಿಂಭಾಗದ ನೆಲ ಬಿರುಕು ಬಿಟ್ಟಿದೆ. ಮುಂಜಾಗ್ರತಾ ಕ್ರಮವಾಗಿ ಇಲ್ಲಿನ ಕುಟುಂಬಗಳು ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ.

ಪೊಲೀಸ್ ಅಧಿಕಾರಿಗಳ ಅಮಾನತು ವಾಪಸ್?

← ಮೊದಲಪುಟದಿಂದ

ಗೃಹ ಇಲಾಖೆಯು ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯಲ್ಲಿ ಪೊಲೀಸ್ ಇಲಾಖೆ ವೈಫಲ್ಯದ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಆದರೆ ಸಂಘಟಕರಾದ ಆರ್‌ಸಿಬಿ, ಡಿಎನ್‌ಎ ಮತ್ತು ಕೆಎಸ್‌ಸಿಎ ವಿಜಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೊಲೀಸ್ ಇಲಾಖೆ ಅನುಮತಿ ಪಡೆದಿರಲಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಜೂನ್ 3 ರಂದು ಸಂಜೆ 6.30ಕ್ಕೆ, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಆರ್‌ಸಿಬಿ ಸಂಭ್ರಮಾಚರಣೆ ಬಗ್ಗೆ ಮಾತ್ರ ಮಾಹಿತಿ ನೀಡಲಾಗಿತ್ತು. ಆದರೆ ಕಾರ್ಯಕ್ರಮಕ್ಕೆ ಅನುಮತಿ ಕೇಳಿರಲಿಲ್ಲ ಎನ್ನುವುದನ್ನು ತಿಳಿಸಲಾಗಿದೆ. ಮಾಹಿತಿಯ ಪತ್ರದಲ್ಲಿ ಕಾನೂನು ಪ್ರಕಾರ ಅಗತ್ಯ ಮಾಹಿತಿಯನ್ನು ಒದಗಿಸಿರಲಿಲ್ಲ. ಯಾವುದೇ ದೊಡ್ಡ ಪ್ರಮಾಣದ ಕಾರ್ಯಕ್ರಮ ಆಯೋಜನೆಗಿಂತ 7 ದಿನ ಮುಂಚೆ ಆಯೋಜಕರು ಅರ್ಜಿ ಸಲ್ಲಿಸಬೇಕಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಕೇವಲ ಒಂದು ದಿನ ಮುಂಚೆ ಮಾತ್ರ ಪೊಲೀಸರಿಗೆ ಮಾಹಿತಿ ರೂಪದಲ್ಲಿ ಪತ್ರ ನೀಡಲಾಗಿತ್ತು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಣು ವಿದ್ಯುತ್‌ನತ್ತ ಚಿತ್ತ

← ಮೊದಲಪುಟದಿಂದ

ಪ್ರಸ್ತುತ 717 ಕ್ಯೂಸೆಕ್ ಸಾಮರ್ಥ್ಯವಿದ್ದು 1,21,197 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಒದಗಿಸಲಾ ಗುತ್ತದೆ. ಹಾಲಿ ನಾಲೆ ತಿಪಟೂರು ತಾಲೂಕಿನಲ್ಲಿ 20.39 ಕಿ.ಮೀ. ಇದ್ದು, 4177 ಎಕರೆ ಅಚ್ಚುಕಟ್ಟು ಪ್ರದೇಶ, ತುರುವೇ ಕೆರೆ ತಾಲ್ಲೂಕಿನಲ್ಲಿ 25.01 ಕಿ.ಮೀ ಇದ್ದು, 60274 ಎಕರೆ ಅಚ್ಚುಕಟ್ಟು ಪ್ರದೇಶ ಹಾಗೂ ನಾಗಮಂಗಲ ತಾಲ್ಲೂಕಿನಲ್ಲಿ 30.56 ಕಿ.ಮೀ ಇದ್ದು, 56746 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ನಾಲೆಯು 2.50 ಕಿ.ಮೀ. ಉದ್ದವಿದ್ದು, ಒಟ್ಟಾರೆ 78.46 ಕಿ.ಮೀ. ಇದ್ದು, 1,21,197 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದೆ.

ಜೈವಿಕವಾಗಿ ವಿಘಟನೆಯಾಗುವ ಕೈಚೀಲಕ್ಕೆ ಸಂಪುಟ ಸಮ್ಮತಿ

2016ರ ಸರಕಾರದ ಅಧಿಸೂಚನೆಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ತಟ್ಟೆ, ಲೋಟ, ಚಮಚ, ಪ್ಲಾಸ್ಟಿಕ್ ಹಾಳೆಗಳ ತಯಾರಿಕೆ, ಮಾರಾಟ, ದಾಸ್ತಾನು ನಿಷೇಧಿಸಲಾಗಿತ್ತು. ಆದರೆ ಇತ್ತೀಚೆಗೆ ಸಸ್ಯಜನ್ಯ ಕೈಚೀಲಗಳ ಆವಿಷ್ಕಾರ ವಾಗಿದ್ದು, ಇದು 180 ದಿನಗಳಲ್ಲಿ ಜೈವಿತವಾಗಿ ವಿಘಟನೆಯಾಗುತ್ತದೆ. ಆದ್ದರಿಂದ ಮಾರಾಟಕ್ಕೆ ಅನುಕೂಲವಾಗುವಂತೆ ತಿದ್ದುಪಡಿ ತರಲಾಗಿದ್ದು, ಸಚಿವ ಸಂಪುಟ ಸಮ್ಮತಿ ನೀಡಿದೆ. ಪರಿಸರಕ್ಕೆ ಹಾನಿಕಾರಕವಲ್ಲದ ಮತ್ತು ಜೈವಿಕವಾಗಿ ವಿಘಟನೆಯಾಗುವ (ಬಯೋ ಡೀಗ್ರೇಡಬಲ್ -ಕಂಪೋಸ್ಟಬಲ್) ಕೈಚೀಲಗಳನ್ನು ಮತ್ತು ಮೊದಲೇ ಪ್ಯಾಕ್ ಮಾಡಿ ಸೀಲ್ ಮಾಡಿದ ಪ್ಯಾಕೇಜಿಂಗ್ ಪ್ಲಾಸ್ಟಿಕ್‌ಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಲಾಗಿದೆ. ಇದು ಕೇಂದ್ರ ಸರಕಾರದ 21ರ ಆದೇಶಕ್ಕೆ ಅನುಗುಣವಾಗಿದೆ ಎಂದು ಸಚಿವ ಸಂಪುಟ ಸಭೆಯ ಬಳಿಕ ಈಶ್ವರ್ ಖಂಡ್ರೆ ಸ್ಪಷ್ಟಪಡಿಸಿದರು.

ಗ್ಯಾಸ್ ಲೀಕ್: ತಪ್ಪಿದ ಅನಾಹುತ

ಚಿತ್ರದುರ್ಗ: ನಗರದ ಹೊರವಲಯದ ಮಲ್ಲಾಪುರ ಸರಕಾರಿ ಶಾಲೆಯಲ್ಲಿ ಗುರುವಾರ ಮಧ್ಯಾಹ್ನ ಸಿಲಿಂಡರ್‌ನಿಂದ ಗ್ಯಾಸ್ ಲೀಕ್ ಆಗಿ ಬೆಂಕಿ ಕಾಣಿಸಿಕೊಂಡು ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸುವ ವೇಳೆ ಗ್ಯಾಸ್ ಲೀಕೇಜ್ ಕಾಣಿಸಿಕೊಂಡು ಏಕಾಏಕಿ ದೊಡ್ಡ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಈ ವೇಳೆ ಅಡುಗೆ ಸಿಬ್ಬಂದಿ ಗಾಬರಿಯಾಗಿ ಬೆಂಕಿ ನಂದಿಸಲು ಪರದಾಡಿದ್ದಾರೆ. ಅಡುಗೆ ಕೊಠಡಿಯಲ್ಲಿ ದಟ್ಟ ಬೆಂಕಿ ಕಾಣಿಸಿಕೊಳ್ಳುತ್ತಲೇ, ಅಕ್ಕಪಕ್ಕದ ಕೊಠಡಿಗಳಲ್ಲಿ ಪಾಠ ಮಾಡುತ್ತಿದ್ದ ಶಿಕ್ಷಕರು ಮಕ್ಕಳನ್ನು ಶಾಲೆಯಿಂದ ಹೊರಗೆ ಕಳುಹಿಸಿದ್ದಾರೆ. ಅಷ್ಟರಲ್ಲಿ ಶಾಲೆಯ ಹೊರ ಭಾಗದಲ್ಲಿದ್ದ ಸಾರ್ವಜನಿಕರು, ಎಸ್‌ಡಿಎಂಸಿ ಸದಸ್ಯರು, ಅಧ್ಯಕ್ಷರು ಸ್ಥಳಕ್ಕೆ ಬಂದು ಗೋಣಿ ಚೀಲ ವದ್ದೆ ಮಾಡಿ ಬೆಂಕಿಯ ಮೇಲೆ ಹಾಕಿ ತಹಬದಿಗೆ ತಂದಿದ್ದಾರೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕ ದಳ ಬಂದಿತ್ತಾದರೂ, ಅಷ್ಟರಲ್ಲಿ ಬೆಂಕಿ ನಂದಿಸಲಾಗಿತ್ತು. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅದೃಷ್ಟವಶಾತ್ ನೂರಾರು ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯರು ನಿಟ್ಟಿಸಿರು ಬಿಟ್ಟರು.

ಮರಿ ಜತೆ ಕರಡಿ ಡ್ರೋಣ್‌ನಲ್ಲಿ ಸೆರೆ

ರಾಮನಗರ: ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣವಾಗಿರುವ ರೇವಣಸಿದ್ದೇಶ್ವರ ಬೆಟ್ಟದ ಪಕ್ಕದ ಬೆಟ್ಟದ ತುದಿಯಲ್ಲಿ ತಾಯಿ ಕರಡಿಯೊಂದಿಗೆ ಅದರ ಮರಿ ಆಟವಾಡುತ್ತಿರುವ ದೃಶ್ಯವನ್ನು ಪ್ರವಾಸಿಗರೊಬ್ಬರು ಡ್ರೋಣ್ ಕ್ಯಾಮರಾ ಮೂಲಕ ಸೆರೆ ಹಿಡಿದಿದ್ದು, ಕರಡಿ ಮತ್ತು ಅದರ ಮರಿಯ ಆಟ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ.,ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ-1 ಬೀದರ

No.EE/KNNL/KPC/Dn-1/BDR/PB/TND/2024-25/480 Dated:15-07-2025

:: "ಇ"ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆಯ 4701 ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಬರುವ ವಿಪತ್ತು ನಿರ್ವಹಣೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ "ಇ"ಪ್ರೊಕ್ಯೂರಮೇಂಟ್‌ನಲ್ಲಿ ಶೇಕಡವಾರು ದ್ವಿ-ಲಕೋಟೆಯ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿರುತ್ತವೆ. ಪ್ರವರ್ಗ-2(ಎ) ರವರಿಗೆ ಮೀಸಲಿಟ್ಟ ಕಾಮಗಾರಿಗೆ (ಇಂಡೆಂಟ್ ಸಂ:3013/ Call-2) **ಟೆಂಡರಿಗಿಟ್ಟ ಮೊತ್ತವು ರೂ:50,88,296.77** (ಐವತ್ತು ಲಕ್ಷದ ಎಂಬತ್ತೇಂಟು ಸಾವಿರದ ಎರಡು ನೂರಾ ತೊಂಬತ್ತಾರು ರೂಪಾಯಿ ಮತ್ತು ಏಳು ಏಳು ಪೈಸೆ ಮಾತ್ರ) ಮತ್ತು **ಇ.ಎಮ್.ಡಿ ಮೊತ್ತವು ರೂ.:60,000/-** (ಅರವತ್ತು ಸಾವಿರ ಮಾತ್ರ) ಇದ್ದು, ಕೆಲಸದ ಅವಧಿ ಮಳೆಗಾಲ ಸೇರಿ 4 ತಿಂಗಳು ಇರುತ್ತದೆ.

1)"ಇ"ಪ್ರೊಕ್ಯೂರಮೇಂಟ್‌ನಲ್ಲಿ htpps://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ-ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ **ದಿನಾಂಕ: 16-07-2025 ರಿಂದ 23-07-2025 ರ 16.00 ಘಂಟೆಯವರೆಗೆ.**
2) **ದಿನಾಂಕ: 24-07-2025 ರಂದು 17.00** ಘಂಟೆಯ ನಂತರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು.
3) **ದಿನಾಂಕ: 25-07-2025 ರಂದು 17.30** ಘಂಟೆಯ ನಂತರ ಅಥವಾ ತಾಂತ್ರಿಕ ಬಿಡ್ಡ ಅನುಮೋದನೆಗೊಂಡ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.1, ಬೀದರ.

ವಾ.ಸಾ.ಸಂ.ಇ/ಬೀದರ/100/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾಜ್ಯವಲಯ)
ಮೈಸೂರು

ಸಂಖ್ಯೆ: ತೋಉನಿ:ಹಿಸತೋನಿ:ರಾವ:ಮೈ:ತಾಸ:2025-26 ದಿನಾಂಕ: 15.07.2025

ಟೆಂಡರ್ ಪ್ರಕಟಣೆ

2025-26ನೇ ಸಾಲಿನ ಮೈಸೂರು ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಮೈಸೂರು ಕಛೇರಿ ರವರ ಅಧೀನದ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ/ ನರ್ಸರಿಗಳಲ್ಲಿ ಕ್ಷೇತ್ರದ ನಿರ್ವಹಣೆಗಾಗಿ ವಿವಿಧ ಕೆಲಸಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಒಂದು ವರ್ಷದ ಅವಧಿಗೆ ಸೇವೆಯನ್ನು ಒದಗಿಸಲು ಕರ್ನಾಟಕ ಪಾರದರ್ಶಕತೆ (KTTP) ನಿಯಮಾವಳಿ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ (Two cover system) ಆಸಕ್ತಿಯುಳ್ಳ, ಅರ್ಹ ಏಜೆನ್ಸಿ/ಸಂಸ್ಥೆಗಳ ಮುಖಾಂತರ ಇ-ಟೆಂಡರ್ ಕರೆದಿದ್ದು, ಟೆಂಡರ್‌ಗಳನ್ನು **ದಿನಾಂಕ: 28.07.2025 ಮಧ್ಯಾಹ್ನ 3.00 ಗಂಟೆಯವರೆಗೆ** ಸಲ್ಲಿಸುವುದು. ಭರ್ತಿ ಮಾಡಿದ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 29.07.2025ರ ಮಧ್ಯಾಹ್ನ 3.15 ಗಂಟೆಗೆ** ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 30.07.2025 ಬೆಳಿಗ್ಗೆ 3.30 ರಂದು** ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಮೈಸೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಗೆ ಸಂಪರ್ಕಿಸಲು ತಿಳಿಸಲಾಗಿದೆ. ದೂರವಾಣಿ ಸಂಖ್ಯೆ: 0821-2977572.

ಸಹಿ/- ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ರಾಜ್ಯ ವಲಯ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/649/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-05/2021-22/1571/2025-26 ದಿನಾಂಕ: 17.07.2025

ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3)ರಡಿಯಲ್ಲಿ]

ಶ್ರೀಮತಿ. ಡಿ.ಟಿ.ಮಧುರಮಣಿ ಮತ್ತು ಶ್ರೀ.ಎ.ನಾಗೇಶ್ ರವರು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಚಿಕ್ಕಬಿದರಕಲ್ಲು ಗ್ರಾಮದ ಸರ್ವೆ ನಂ. 23/2 ರಲ್ಲಿ 0ಎಕರೆ-21½ ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಪರಿಸ್ಕೃತ ಮಹಾಯೋಜನೆ-2015ರಲ್ಲಿ ಸಾರ್ವಜನಿಕ/ಅರೆಸಾರ್ವಜನಿಕ ವಲಯದಲ್ಲಿ ನಿಗಧಿಪಡಿಸಲಾಗಿದೆ. ಪರಿಷ್ಕೃತ ಮಹಾಯೋಜನೆ -2015ರಲ್ಲಿ ನಿಗಧಿಪಡಿಸಲಾದ ಭೂಉಪಯೋಗವು ಕೆಟಿಸಿಪಿ ಕಾಯ್ದೆ 1961ರ ಕಲಂ 69(2)ರ ಅಡಿಯಲ್ಲಿ ಅನೂರ್ಜಿತವಾಗಿರುವುದರಿಂದ ವಾಣಿಜ್ಯ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4) ರಡಿಯಲ್ಲಿ ಹೊಸ ಭೂಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ. ಹೊಸದಾಗಿ ಭೂಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಹೊಸದಾಗಿ ಭೂಉಪಯೋಗ ನಿಗದಿಪಡಿಸುವ ಪ್ರಸ್ತಾವನೆ ಬಗ್ಗೆ ಯಾವುದೇ ಸಲಹೆ ಮತ್ತು ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ ಮತ್ತು ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ನಿಗಧಿಪಡಿಸಲು ಕೋರಿರುವ ಹೊಸ ಭೂ ಉಪಯೋಗ
1	ಶ್ರೀಮತಿ ಡಿ.ಟಿ.ಮಧುರಮಣಿ ಮತ್ತು ಶ್ರೀ ಎ.ನಾಗೇಶ್	ಬೆಂಗಳೂರು ಉತ್ತರ	ದಾಸನಪುರ	ಚಿಕ್ಕಬಿದರಕಲ್ಲು	23/2	0-21½	ಸಾರ್ವಜನಿಕ/ ಅರೆಸಾರ್ವಜನಿಕ	ವಾಣಿಜ್ಯ

ಸಹಿ/-ನಗರ ಯೋಜಕ ಸದಸ್ಯರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಜನಿನಿ., ಭಮೇಯೋ, ವಿಭಾಗ ಸಂ.3 ಅಜ್ಜಂಪುರ-577 547

Ph & Fax: 08261-200114 email : eeubp3.1@gmail.com
CIN No. U41000KA2016SGC097260

ಸಂ: ಕಾಇಂ/ವಿಜನಿನಿ/ಭಮೇಯೋ/ವಿ-3/ಯೋಶಾ-1/ಟೆಂಡರ್ ಪ್ರಕಟಣೆ/2025-26/359 ದಿನಾಂಕ:16.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ಕಾಮಗಾರಿಯ ಇಂಡೆಂಟ್ ನಂಬರ್ (VJNL/2025-26/EL/WORK_INDENT284) ಗಳ ಕಾಮಗಾರಿಗೆ ಏಕ ಲಕೋಟೆ ಪದ್ದತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿಪಿಯ hhttp://www.kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ: 18.07.2025 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ: 25.07.2025 ರ 17.30 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ/ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ ಮೊತ್ತ/ ಗುತ್ತಿಗೆದಾರರ ಅರ್ಹತೆ/ ಟೆಂಡರ್ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ http://www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 28.07.2025 ರಂದು ಪೂರ್ವಾಹ್ನ 11.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.03 ಅಜ್ಜಂಪುರ ರವರ ಕಛೇರಿಯಲ್ಲಿ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಭಮೇಯೋ, ವಿಭಾಗ ಸಂ.03 ಅಜ್ಜಂಪುರ.

619

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ-1, ಎನ್.ಆರ್. ಚೌಕ, ಬೆಂಗಳೂರು - 560002

ನಂ.: ಬಿಬಿಎಂಪಿ/ಮು.ಆಯುಕ್ತರು/ಪಿಎಸ್‌ಆರ್(ಜಿ)/775/2025-26 ದಿನಾಂಕ: 05.07.2025

ಸಾರ್ವಜನಿಕ ಪ್ರಕಟಣೆ

ಫಾರಂ-III (ನಿಯಮ-3ರ ಉಪನಿಯಮ(3)ನ್ನು ನೋಡಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14-ಬಿ ರಡಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ, **45.00 ಮೀ. ಅಗಲಕ್ಕೆ** ಮಾಸ್ಟರ್ ಪ್ಲಾನ್-2015ರ ಅನುಮೋದನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು **ಗೇರ್ ಸ್ಕೂಲ್ ರಸ್ತೆಯಿಂದ ಗುಂಜೂರು ಪಾಳ್ಯ, ವರ್ತೂರು ಮೂಲಕ ಪೆರಿಫೆರಲ್ ರಿಂಗ್ ರಸ್ತೆವರೆಗೆ ರಸ್ತೆ ನಿರ್ಮಾಣಕ್ಕಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಹಾಗೂ ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಡೆಪ್ಯೂಟಿ ಕಮಿಷನರ್‌ರವರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಛೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡಿದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲಿಕರ ಪಟ್ಟಿ

Name of the District: **Bengaluru Urban** Name of the Taluk: **Bengaluru East** Name of the Village: **Panathuru**

Sl. No.	Sy. No. / Khata No.	Type of land: Vacant	Type of land: Built up	Nature of Land: Agriculture Converted undeveloped Approved layout / developed land Building site	Dimension of the land / plot and extent in Sq.m: Dimension	Dimension of the land / plot and extent in Sq.m: Extent	Boundaries of the land / plot: East	West	North	South	Building Details: Extent in Sq.m	Type of Construction and No. of floors	Floor Area Ratio	Present activity on land / Building (Specify Specific activity such as shop, office, factory, apartment, individual house etc.,)	Market (guide lines) value of the land per Sq.m	Name and address of the owner of the plot / land for which DRC is to be issued.
1	Sy No: 109/1, Khatha Sl No.9302, Municipal No. 259	Vacant Land		Converted Land	1795.10		Sy. No. 110	Sy. No. 108	Remaining Portion of Sy.No. 109/1 & Sy.No. 109/2	Remaining Portion of Sy.No. 109/1 & Sy.No. 55	None	None	None	Vacant	60,000/-	M/s. Earnest Constructions Private Ltd. Registered Office at No. 10, Vittal Mallya Road, Bengaluru-560001. Represented by its Director Sri. B.M. Jayeshankar

ಗಮನಿಸಿ: ಈ ಆಸ್ತಿಯ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯವನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 137 ಎಂಎನ್‌ಯು 2024 (ಇ), ದಿನಾಂಕ:09.09.2024 ಮತ್ತು ಆದೇಶ ಸಂಖ್ಯೆ ಆಯುಕ್ತರು/ಪಿ.ಎಸ್.ಆರ್.ಜಿ/1802/2024-25, ದಿನಾಂಕ: 21.09.2024ರ ಪ್ರಕಾರ ಶುಲ್ಕ ಪಾವತಿಯ ಷರತ್ತುಗಳಿಗೆ ಒಳಪಟ್ಟಿರುತ್ತದೆ ಎಂದು ಪರಿಗಣಿಸಲಾಗುತ್ತದೆ.
ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿರುವ ವಿಳಾಸಕ್ಕೆ ಸಲ್ಲಿಸಬಹುದು.

ವಿಭಾಗ / ಉಪ-ವಿಭಾಗ / ಶಾಖಾ ಕಛೇರಿಗಳ ಹೆಸರು ಮತ್ತು ವಿಳಾಸ	ಡೆಪ್ಯೂಟಿ ಕಮಿಷನರ್ ಭೂಸ್ವಾಧೀನ & ಟಿಡಿಆರ್, 2ನೇ ಮಹಡಿ, ಕೊಠಡಿ ಸಂ. 208, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು - 560002

ಸಹಿ/-,
ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು - 560024.
ಇ-ಮೇಲ್: jdfarmsahvs@gmail.com ಫೋನ್: 080-23412767

ಸಂಖ್ಯೆ: ಆಪಸಂ/ಪಶು ಆಹಾರ/ ಟೆಂಡರ್/ ವಿವ-1/2025-26 ದಿನಾಂಕ: 17-07-2025

ಟೆಂಡರ್ ಅಧಿಸೂಚನೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಇವರು 2025-26 ನೇ ಸಾಲಿಗೆ ಇಲಾಖೆಯ ಜಾನುವಾರು ಸಾಕಾಣಿಕೆ ಕ್ಷೇತ್ರಗಳಿಗೆ ಜಾನುವಾರು ಆಹಾರಗಳನ್ನು ಪೂರೈಸಲು ಕೆಪಿಪಿ ಪೋರ್ಟಲ್ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆದಿರುತ್ತಾರೆ. ಟೆಂಡರ್‌ನ ಅಂದಾಜು ಮೊತ್ತ ರೂ: 250 ಲಕ್ಷಗಳು.
ಪೂರ್ಣ ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 17-07-2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 17-07-2025 ರಿಂದ ದಿನಾಂಕ: 31-07-2025 ರ ಸಾಯಂಕಾಲ 5.30 ಘಂಟೆಯೊಳಗೆ ಅಪ್ಲೋಡ್ ಮಾಡಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು, (ಮೇವು ಮತ್ತು ಕ್ಷೀರ) ಹಾಗೂ ಸದಸ್ಯ ಕಾರ್ಯದರ್ಶಿಗಳು, ಟೆಂಡರ್ ಆಹ್ವಾನ ಸಮಿತಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/1877/Zen/2025-26

ಸಮಾಚಾರ ಸಣ್ಣದಲ್ಲ

ಲೋ ಬಿಪಿ: ಮಹಿಳಾ ಪೊಲೀಸ್ ಪೇದೆ ಸಾವು

ಬೀದರ್: ಲೋ ಬಿಪಿಯಿಂದ ಮಹಿಳಾ ಪೊಲೀಸ್ ಪೇದೆ ಸಾವನ್ನಪ್ಪಿದ ಘಟನೆ ಬೀದರ್‌ನಲ್ಲಿ ನಡೆದಿದೆ. ಮಹಿಳಾ ಪೊಲೀಸ್ ಪೇದೆ ಸರಿತಾ (28) ಲೋ ಬಿಪಿಯಿಂದ ಸಾವನ್ನಪ್ಪಿದ್ದಾರೆ. ಬೀದರ್‌ನ ಸಬ್

ಅರ್ಬನ್ ಪೊಲೀಸ್ ಠಾಣೆಯ ಪೊಲೀಸ್ ಪೇದೆಯಾಗಿದ್ದ ಸರಿತಾ ಹೆರಿಗೆ ಬಳಿಕ ಲೋ ಬಿಪಿಯಾಗಿ ಸಾವನ್ನಪ್ಪಿದ್ದಾರೆ. ಮೂಲತಃ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ಕೊಂಚಾವರಂ ಗ್ರಾಮದ ಪೊಲೀಸ್ ಪೇದೆಯಾಗಿದ್ದು, ಹಲವು ವರ್ಷಗಳಿಂದ ಬೀದರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಒಂದು ವಾರದ ಹಿಂದೇ ಹೈದರಾಬಾದ್‌ನ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆಯಾಗಿ ಗಂಡು ಮಗುವಿಗೆ ಜನ್ಮ ನೀಡಿದ್ದ ಸರಿತಾ ಹೆರಿಗೆ ಬಳಿಕ ಒಂದು ವಾರ ನಾರ್ಮಲ್ ಆಗಿಯೇ ಇದ್ದರು. ಆದರೆ ಬುಧವಾರ ತಡರಾತ್ರಿ, ಏಕಾಏಕಿ ಲೋ ಬಿಪಿಯಾಗಿ ಮಹಿಳಾ ಪೊಲೀಸ್ ಪೇದೆ ಸಾವನ್ನಪ್ಪಿದ್ದಾರೆ.

ಸುಶೀಲ್ ಕಾಳೆ ಹತ್ಯೆ ಕೇಸ್: ನಾಲ್ವರ ಸೆರೆ

ವಿಜಯಪುರ: ಭೀಮಾತೀರದ ಹಂತಕ ಬಾಗಪ್ಪ ಹರಿಜನ ಮಾಜಿ ಶಿಷ್ಯ ಸುಶೀಲ್ ಕಾಳೆ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ಪೊಲೀಸರು ಪರಾರಿಯಾಗಿದ್ದ ನಾಲ್ವರನ್ನು ಬಂಧಿಸಿದ್ದಾರೆ. ಗೌತಮ್ ಆಲಮೇಲಕರ, ನಾರಾಯಣ ಜಾಧವ್, ಬಸವರಾಜ್ ಮುನ್ನಾಳ, ಪ್ರಜ್ವಲ ಹಳಿಮನಿ ಬಂಧಿತ ಆರೋಪಿಗಳು. ಇದಕ್ಕೂ ಮುನ್ನ ಪೊಲೀಸರು ಅಪ್ರಾಪ್ತ ಸೇರಿ ಇಬ್ಬರನ್ನು ಬಂಧಿಸಿದ್ದರು. ಈ ಕುರಿತು ಎಸ್ಪಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಹತ್ಯೆಯ ಬಳಿಕ ಪರಾರಿಯಾಗಿದ್ದ ಆರೋಪಿಗಳ ಪೈಕಿ ಅಪ್ರಾಪ್ತ ಸೇರಿ ಇಬ್ಬರನ್ನು ಇತ್ತೀಚಿಗೆ ಬಂಧಿಸಲಾಗಿತ್ತು. ಇದೀಗ ಇನ್ನುಳಿದಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಜೊತೆಗೆ ಬಂಧಿತರಿಂದ ಒಂದು ಕಂಟ್ರಿ ಮೇಡ್ ಪಿಸ್ತೂಲ್, ನಾಲ್ಕು ಜೀವಂತ ಗುಂಡುಗಳು, ಮೂರು ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಫೋನ್ ನೋಡಬೇಡ ಎಂದಿದ್ದಕ್ಕೆ ಆತ್ಮಹತ್ಯೆ

ಕಾರವಾರ: ಮೊಬೈಲ್ ನೋಡಬೇಡ ಎಂದು ತಂದೆ ಮಗನಿಗೆ ಬುದ್ಧಿವಾದ ಹೇಳಿದ್ದಕ್ಕೆ ಮನನೊಂದ ಮಗ

ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಮಂಗಳವಾಡ ಗ್ರಾಮದಲ್ಲಿ ನಡೆದಿದೆ. ಹಳಿಯಾಳದ ಸರಕಾರಿ ಪ್ರಾಥಮಿಕ ಶಾಲೆಯ ಏಳನೇ ತರಗತಿ ವಿದ್ಯಾರ್ಥಿ ಓಂ ಕದಂ (13) ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮನೆಯಲ್ಲಿ ಪ್ರತಿದಿನ ಹೆಚ್ಚು ಮೊಬೈಲ್ ನೋಡುತ್ತಾ ಕಾಲ ಕಳೆಯುತ್ತಿದ್ದ ಮಗನಿಗೆ ತಂದೆ ಮನೋಹರ್ ಮೊಬೈಲ್ ನೋಡದಂತೆ ಬುದ್ಧಿವಾದ ಹೇಳುತಿದ್ದರು. ಮಾತು ಕೇಳದೇ ಓಂ ಕದಂ ಹಠಕ್ಕೆ ಬಿದ್ದು ಮೊಬೈಲ್ ನೋಡುತಿದ್ದ. ಮಂಗಳವಾರ ರಾತ್ರಿ ಮೊಬೈಲ್ ನೋಡುತ್ತಾ ಕಾಲ ಕಳೆಯುತಿದ್ದ ಮಗನಿಗೆ ಗದರಿಸಿ ಮೊಬೈಲ್ ಕಸಿದುಕೊಂಡು ಓದಿಕೊಳ್ಳುವಂತೆ ತಂದೆ ಮನೋಹರ್ ಬುದ್ಧಿವಾದ ಹೇಳಿದ್ದರು. ಇದರಿಂದ ಮನನೊಂದು ಓಂ ಕದಂ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಸುನೀಲ್ ಕುಮಾರ್‌ಗೆ ಪಿತೃವಿಯೋಗ

ಉಡುಪಿ: ಮಾಜಿ ಸಚಿವ, ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್ ಅವರ ತಂದೆ, ಆರ್‌ಎಸ್‌ಎಸ್‌ನ ಹಿರಿಯ ಮುಖಂಡ, ನಿವೃತ್ತ ಪ್ರಾಂಶುಪಾಲ ಎಂ. ಕೆ. ವಾಸುದೇವ (87) ಗುರುವಾರ ಮುಂಜಾನೆ

ನಿಧನ ಹೊಂದಿದರು. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮಣಿಪಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಗುರುವಾರ ಮುಂಜಾನೆ ಕೊನೆಯುಸಿರೆಳೆದಿದ್ದಾರೆ. ಮೃತರು ಪತ್ನಿ ಪ್ರಮೋದಾ, ಪುತ್ರ ಸುನಿಲ್ ಕುಮಾರ್, ಸೊಸೆ ಪ್ರಿಯಾಂಕಾ, ಪುತ್ರಿ ಸುಕನ್ಯಾ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರಾಗಿದ್ದ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಸಂಘ ಚಾಲಕರಾಗಿದ್ದರು. ಪ್ರಖರ ವಾಗ್ಮಿಯಾಗಿದ್ದರು. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದರು. ಮೃತರ ಅಂತಿಮ ವಿಧಿ ವಿಧಾನ ಶಾಸಕರ ಮನೆ ಕಲಂಬಾಡಿ ಪದವಿನಲ್ಲಿ ಗುರುವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳಿಂದ ತಿಳಿದುಬಂದಿದೆ.

ವಿಶ್ವವಾಣಿ ಕ್ಲಬ್ ಹೌಸ್
18.07.2025
ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ
vishwavani.news

ಕಾರಜೋಳರನ್ನು ಸಿಎಂ ಅಭ್ಯರ್ಥಿಯಾಗಿ ಘೋಷಿಸಿ | ದಲಿತರಿಗೆ ರಾಜ್ಯಾಧ್ಯಕ್ಷ ಸ್ಥಾನ ಬಿಟ್ಟುಕೊಡಿ

ನಿಮ್ಮ ಸ್ಥಾನ ಭದ್ರಪಡಿಸಿಕೊಳ್ಳಿ; ವಿಜಯೇಂದ್ರಗೆ ಸಿಎಂ ಟಾಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಲಿ ಎನ್ನುವ ಸವಾಲು ಹಾಕಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಗೋವಿಂದ ಕಾರಜೋಳ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ' ಘೋಷಿಸಿ ಎಂದು ಪ್ರತಿಸವಾಲು ಹಾಕಿದ್ದಾರೆ.

ಈ ಸಂಬಂಧ ಸುದೀರ್ಘ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ತಾನು ಕೂತಿರುವ ಕುರ್ಚಿಯ ನಾಲ್ಕು ಕಾಲುಗಳನ್ನು ಭದ್ರವಾಗಿ ಇಟ್ಟುಕೊಳ್ಳಲಾಗದ ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕಾಂಗ್ರೆಸ್ ಪಕ್ಷದ ಪ್ರಧಾನಿ ಅಭ್ಯರ್ಥಿ ಯಾರಾಗಬೇಕೆಂದು ಸಲಹೆ ನೀಡುತ್ತಿರುವುದು ಅವರ ಅಜ್ಞಾನ ಮತ್ತು ಅತ್ಮವಂಚನೆಯನ್ನು ಮಾತ್ರವಲ್ಲ, ದುರಹಂಕಾರವನ್ನೂ ಸೂಚಿಸುತ್ತದೆ. ವಿಜಯೇಂದ್ರ ಅವರಿಗೆ ಓದುವ ಅಭ್ಯಾಸವಿದ್ದರೆ ಈ ದೇಶದ ಹಿಂದುಳಿದ ಜಾತಿಗಳು, ದಲಿತರು ಮತ್ತು ಅಲ್ಪಸಂಖ್ಯಾತರನ್ನು ಬಿಜೆಪಿಯವರು ಯಾವ ಯಾವ ಕಾಲದಲ್ಲಿ ಹೇಗೆಲ್ಲಾ ನಡೆಸಿಕೊಂಡಿದೆ ಎಂಬ ಇತಿಹಾಸವನ್ನು ಓದಿ ತಿಳಿದುಕೊಳ್ಳಲಿ ಎಂದು ಟೀಕಿಸಿದ್ದಾರೆ.

ಬಂಡಾರು ಲಕ್ಷ್ಮಣ ಎಂಬ ಅಮಾಯಕ ದಲಿತ ನಾಯಕನನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿ ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಜೈಲಿಗೆ ತಳ್ಳಿದ್ದು ಮಾತ್ರವಲ್ಲ, ಅದೇ ಕೊರಗಿನಲ್ಲಿ ಅವರು ಸಾಯುವಂತೆ ಮಾಡಿದವರು ಯಾರು? ಮಾತೆತ್ತಿದರೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಹೆಸರನ್ನು ಮೆರೆಸುವ ಬಿಜೆಪಿ ಅವರನ್ನೇ ಪ್ರಧಾನಮಂತ್ರಿ ಯಾಕೆ ಮಾಡಿಲ್ಲ? ಎಪಿಜೆ ಅಬ್ದುಲ್ ಕಲಾಂ ಅವರನ್ನು ರಾಷ್ಟ್ರಪತಿ ಮಾಡಿದ್ದೇ ಸಾಧನೆ ಎಂದು ಹೇಳಿಕೊಳ್ಳುವವರು, ಪ್ರಸಕ್ತ ಲೋಕಸಭೆಯಲ್ಲಿ ಬಿಜೆಪಿಗೆ ಸೇರಿರುವ ಒಬ್ಬನೇ ಒಬ್ಬ ಮುಸ್ಲಿಂ ಸಂಸದ ಯಾಕೆ ಇಲ್ಲ? ಕಳೆದ ಲೋಕಸಭಾ ಚುನಾವಣೆಯಲ್ಲಿ ಒಬ್ಬನೇ ಒಬ್ಬ ಮುಸ್ಲಿಂ ನಾಯಕನಿಗೆ ಯಾಕೆ ಟಿಕೆಟ್ ಕೊಟ್ಟಿಲ್ಲ ಎನ್ನುವ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಹಿಂದುಳಿದ ನಾಯಕರನ್ನು ಬಿಜೆಪಿ ಹೇಗೆ ನಡೆಸಿಕೊಳ್ಳುತ್ತಾ ಬಂದಿದೆ ಎನ್ನುವುದಕ್ಕೆ ರಾಜ್ಯದ ಹಿಂದುಳಿದ ಜಾತಿಗಳ ನಾಯಕ ಎಸ್. ಬಂಗಾರಪ್ಪನವರೇ ಸಾಕ್ಷಿ. ಬಂಗಾರಪ್ಪನವರನ್ನು ನಿಮ್ಮ ತಂದೆ ಬಿ.ಎಸ್. ಯಡಿಯೂರಪ್ಪನವರು ಮುಗಿಸಿದರೆ, ಅವರ ಮಗ ಕುಮಾರ್ ಬಂಗಾರಪ್ಪನವರ ರಾಜಕೀಯವನ್ನು ನೀವು ಮುಗಿಸಲು ಹೊರಟಿದ್ದೀರಿ. ಇದರ ವಿವರವನ್ನು ಅವರು ನೀಡುತ್ತಲೇ ಇದ್ದಾರೆ. ಬಂಗಾರಪ್ಪನವರಿರಲಿ, ನರೇಂದ್ರ ಮೋದಿ ಅವರೇ ಇರಲಿ, ಎಲ್ಲಿಯವರೆಗೆ ಇವರು ವರ್ಣವ್ಯವಸ್ಥೆ ಆಧಾರಿತ ಹಿಂದುತ್ವದ ಅಜೆಂಡಾಕ್ಕೆ ತಲೆ ಬಗ್ಗಿಸುತ್ತಾ ಇರುತ್ತಾರೋ ಅಲ್ಲಿಯವರೆಗೆ ಮಾತ್ರ ಅವರ ತಲೆಗಳು ಸುರಕ್ಷಿತ. ಇದು ಮೋದಿಯವರಿಗೂ ತಿಳಿದಿರಲಿ.

ದಲಿತರಿಗೆ ರಾಜ್ಯಾಧ್ಯಕ್ಷ ಕುರ್ಚಿ ನೀಡಿ: ದಲಿತ ಮತ್ತು ಹಿಂದುಳಿದ ಜಾತಿಗಳ ಬಗ್ಗೆ ವಿಜಯೇಂದ್ರ ಅವರಿಗೆ ಅಷ್ಟೊಂದು ಅಕ್ಕರೆ, ಕಾಳಜಿಗಳಿದ್ದರೆ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನವನ್ನು ಒಬ್ಬ ದಲಿತ ನಾಯಕನಿಗೆ ಬಿಟ್ಟುಬಿಡಿ. ನಿಮಗೆ ಅನುಕೂಲವಾಗಲೆಂದು ಆ ಹೆಸರನ್ನು ನಾನೇ ಸೂಚಿಸುತ್ತೇನೆ. ದಲಿತ ನಾಯಕ ಗೋವಿಂದಪ್ಪ ಕಾರಜೋಳ ಅವರು ಇತ್ತೀಚೆಗೆ ನಿಮ್ಮ ಸಂಗಕ್ಕೆ ಬಿದ್ದು ಇತ್ತೀಚೆಗೆ ಏನೇನೋ ಮಾತನಾಡುತ್ತಿದ್ದಾರೆ. ಆದರೆ ನನ್ನ ಸಹದ್ಯೋಗಿಯಾಗಿದ್ದ ಅವರು ಮೂಲತಃ ಸಜ್ಜನ ವ್ಯಕ್ತಿ. ನಿಮಗೆ ಮತ್ತು ನಿಮ್ಮ ಪಕ್ಷಕ್ಕೆ ದಮ್ಮು ತಾಕತ್ ಇದ್ದರೆ ಕಾರಜೋಳ ಅವರನ್ನು ಪಕ್ಷದ ರಾಜ್ಯಾಧ್ಯಕ್ಷರನ್ನಾಗಿ ಮಾಡಿ ಅವರನ್ನೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿಬೇಡಿ ಎಂದು ಸವಾಲು ಹಾಕಿದ್ದಾರೆ.

ಬೇರೆ ಪಕ್ಷಗಳಲ್ಲಿನ ದಲಿತ ನಾಯಕರ ಚಾರಿತ್ರ್ಯಹನನ ಮಾಡಲಷ್ಟೇ ಬಿಜೆಪಿ ತನ್ನ ದಲಿತ ನಾಯಕರನ್ನು ಬಳಸಿಕೊಳ್ಳುತ್ತದೆಯೇ ಹೊರತು, ಅವರಿಗೆ ಯಾವುದೇ ಗೌರವದ ಮತ್ತು ಪ್ರಮುಖ ಸ್ಥಾನಮಾನ ನೀಡುವುದಿಲ್ಲ. ವಿಜಯೇಂದ್ರ ಅವರೇ, ಛಲವಾದಿ ನಾರಾಯಣ ಸ್ವಾಮಿ ಅವರ ತಲೆ ಮೇಲೆ ಚಡ್ಡಿತುಂಬಿದ ಬುಟ್ಟಿಹೊರಿಸಿ ಕಳಿಸುವ ಬದಲಿಗೆ ನೀವು ಮತ್ತು ನಿಮ್ಮ ತಂದೆಯವರು ಯಾಕೆ ಅದನ್ನು ಹೊತ್ತುಕೊಂಡು ಹೋಗಿಲ್ಲ? ಇದಕ್ಕೆ ಉತ್ತರ ಇದೆಯಾ ನಿಮ್ಮಲ್ಲಿ?.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಿಜೆಪಿಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರು ಮಾತ್ರವಲ್ಲ ದೇಶ ಮೆಚ್ಚುವ ಒಬ್ಬ ಮುತ್ಸದ್ದಿ ನಾಯಕ. ಶ್ರದ್ಧೆ, ಶ್ರಮ ಮತ್ತು ಜನಪಪರಕಾಳಜಿ ಮೂಲಕ ಅವರು ನಾಯಕರಾಗಿ ಬೆಳೆದಿದ್ದಾರೆಯೇ ಹೊರತು, ಎಂದೂ ದಲಿತ ಕಾರ್ಡ್ ಪ್ರದರ್ಶಿಸಿ ರಾಜಕೀಯ ಮಾಡಿಲ್ಲ. ಅವರ ಬೆಳವಣಿಗೆಗೆ ಯಾರ ಶಿಫಾರಸುಗಳ ಅಗತ್ಯವೂ ಇಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಪ್ರಧಾನಮಂತ್ರಿ ಯಾರು ಆಗಬೇಕೆನ್ನುವುದನ್ನು ನಮ್ಮ ಪಕ್ಷ ನಿರ್ಧರಿಸುತ್ತದೆ. ಅದರ ಬಗ್ಗೆ ಬಿಜೆಪಿ ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ. ವಿಜಯೇಂದ್ರ ಅವರೇ ನೀವು ಯೋಚಿಸಬೇಕಾಗಿರುವುದು ನಿಮ್ಮ ಪಕ್ಷದ ಬಗ್ಗೆ. 75 ವರ್ಷ ತುಂಬಿರುವ ನರೇಂದ್ರ ಮೋದಿ ಅವರ ಪದಚ್ಯುತಿಯ ಸೂಚನೆಯನ್ನು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ನೀಡಿದ್ದಾರೆ. ದಲಿತ ಪ್ರಧಾನಮಂತ್ರಿಯನ್ನು ಮಾಡಲು ಬಿಜೆಪಿಗೆ ಇದೊಂದು ಸದಾವಕಾಶ. ಆ ಪ್ರಯತ್ನ ನಿಮ್ಮಿಂದಲೇ ಶುರುವಾಗಲಿ. ಬೇರೆಯವರಿಗೆ ಬೋಧನೆ ಮಾಡುವ ಬದಲಿಗೆ ಬಿಜೆಪಿಯ ಪ್ರಧಾನಮಂತ್ರಿ ಸ್ಥಾನಕ್ಕೆ ಒಬ್ಬ ದಲಿತ ನಾಯಕನನ್ನು ನೀವೇ ಮೊದಲೇ ಸೂಚಿಸಿ ನಿಮ್ಮ ದಲಿತ ಪ್ರೇಮವನ್ನು ಸಾಬೀತುಪಡಿಸಿ. ಆ ಹೆಸರುಗಳು ಗೋವಿಂದಪ್ಪ ಕಾರಜೋಳ ಅವರೋ, ಛಲವಾದಿ ನಾರಾಯಣ ಸ್ವಾಮಿ ಅವರದ್ದಾಗಿದ್ದರೆ ಅವರನ್ನು ಅಭಿನಂದಿಸುವರಲ್ಲಿ ನಾನು ಮೊದಲಿಗನಾಗುತ್ತೇನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

- ಬಿ.ವೈ.ವಿಜಯೇಂದ್ರ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ
- ಬಿಜೆಪಿ ಹಿಂದಿನ ಇತಿಹಾಸದ ಬಗ್ಗೆ ವಿಜಯೇಂದ್ರ ತಿಳಿದುಕೊಳ್ಳಲಿ
- ತಾನು ಕುತಿರುವ ಕುರ್ಚಿ ಭದ್ರವಾಗಿ ಇಟ್ಟುಕೊಳ್ಳಲಿ

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಗೋವಾ ಪ್ರವಾಸೋದ್ಯಮ ಸಚಿವ ರೋಹನ್ ಖಾಉಂಟೆ ಅವರನ್ನು ಭೇಟಿಯಾಗಿ ಪ್ರವಾಸಿ ಪ್ರಪಂಚ ಪತ್ರಿಕೆಯನ್ನು ನೀಡಿದರು. ಕನ್ನಡ ಪತ್ರಿಕೋದ್ಯಮದಲ್ಲಿ ಮೊದಲ ಬಾರಿಗೆ ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರಕ್ಕೆಂದೇ ಮೀಸಲಾಗಿರುವ ಪ್ರವಾಸಿ ಪ್ರಪಂಚ ಪತ್ರಿಕೆ ಪರಿಕಲ್ಪನೆಗೆ ಈ ವೇಳೆ ರೋಹನ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವೈದ್ಯಕೀಯ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಸ್ಪಷ್ಟನೆ

ಸಾವುಗಳಿಗೆ ಹೃದಯಾಘಾತವೇ ಕಾರಣ ಸುಳ್ಳು

ಹಾವೇರಿ: ರಾಜ್ಯದಲ್ಲಿ ಹೃದಯಾಘಾತಗಳಿಂದ ಹೆಚ್ಚು ಸಾವುಗಳಾಗುತ್ತಿವೆ ಎಂಬ ತಪ್ಪು ಸಂದೇಶ ಹೋಗಿದೆ. ಹೃದಯಾಘಾತಗಳಿಂದ ಹೆಚ್ಚು ಸಾವಾಗುತ್ತಿದೆ ಎಂಬುದು ಸುಳ್ಳು ಎಂದು ವೈದ್ಯಕೀಯ

ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಹೃದಯಾಘಾತ ಪ್ರಕರಣಗಳ ಬಗ್ಗೆ ವಿಕಾಸಸೌಧದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೊಂದಿಗೆ ಎರಡು ದಿನಗಳ ಹಿಂದೆ ಜಂಟಿ ಸುದ್ದಿಗೋಷ್ಠಿ ನಡೆಸಿದ್ದೇವೆ. ಈ ಬಗ್ಗೆ ಎಲ್ಲ ಮಾಧ್ಯಮಗಳಲ್ಲೂ ಪ್ರಸಾರ ಕೂಡ ಆಗಿದೆ. ಕಳೆದ ಆರು ತಿಂಗಳ ಅಂಕಿ-ಸಂಖ್ಯೆ ವಿಶ್ಲೇಷಣೆ ಮಾಡಿದ್ದೇವೆ. ಇದಕ್ಕಾಗಿ ಒಂದು ಸಮಿತಿ ಸಹ ಮಾಡಿದ್ದು, ಅದರ ಪ್ರಕಾರ ಮರಣ ಸಂಖ್ಯೆಯಲ್ಲಿ ಹೆಚ್ಚಾಗಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ಆದರೆ, ಜನರಿಗೆ ತಪ್ಪು ಮಾಹಿತಿ ಹೋಗಿದ್ದರಿಂದ ಸಾರ್ವಜನಿಕರು ಭಯಭೀತರಾಗಿದ್ದಾರೆ. ಈ ರೀತಿ ಭಯಭೀತರಾಗಬೇಕಿಲ್ಲ ಎಂದರು.

ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟವರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದಿದ್ದೇವೆ. ಹೃದಯಾಘಾತಗಳಿಂದ ಹೆಚ್ಚು ಸಾವಾಗುತ್ತಿದೆ ಎಂಬುದು ಸುಳ್ಳು. ಜಂಟಿ ಸುದ್ದಿಗೋಷ್ಠಿಯಲ್ಲಿ ವರದಿ ಬಗ್ಗೆ ವಿವರಣೆ ನೀಡಿದ್ದೇವೆ. ಅಲ್ಲದೇ ಜನರಲ್ಲಿ ಕೊರೊನಾ ವ್ಯಾಕ್ಸಿನ್ ಹಾಕಿಸಿಕೊಂಡವರಿಗೆ ಹೃದಯಾಘಾತವಾಗುತ್ತದೆ ಎಂಬ ತಪ್ಪು ನಂಬಿಕೆ ಇದೆ. ಹೃದಯಾಘಾತಕ್ಕೂ ವ್ಯಾಕ್ಸಿನ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಮುಂದೆ ಉ.ಕ ಸಾಧನಾ ಸಮಾವೇಶ

ಮೈಸೂರಲ್ಲಿ ಹಮ್ಮಿಕೊಂಡಿರುವ ಸಮಾವೇಶದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅಧಿಕಾರಕ್ಕೆ ಬಂದು ರಾಜ್ಯ ಸರಕಾರಕ್ಕೆ ಎರಡು ವರ್ಷವಾಗಿದೆ. ಅದಕ್ಕೆ ಸಮಾವೇಶ ಮಾಡುವುದು ಸ್ವಾಭಾವಿಕ. ಅದು ಪಕ್ಷದ ಕೆಲಸ. ಹಾಗಾಗಿ ಮಾಡಲಾಗುತ್ತಿದೆ. ಮೈಸೂರಿನ ಬಳಿಕ ಮುಂದೆ ಉತ್ತರ ಕರ್ನಾಟಕದಲ್ಲಿಯೂ ಮಾಡಲಿದ್ದೇವೆ ಎಂದು ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ತಿಳಿಸಿದರು.

ಪಕ್ಷದ ಹಿತದೃಷ್ಟಿಯಿಂದ ರಾಜಕೀಯವಾಗಿ ಒಂದಾಗುತ್ತೇವೆ

ರೆಡ್ಡಿ ನನ್ನ ನಡುವೆ ಸಂಧಾನದ ಅಗತ್ಯವಿಲ್ಲ

ಗದಗ: ನನ್ನ ಹಾಗೂ ಜನಾರ್ದನ ರೆಡ್ಡಿ ಅವರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ, ಪಕ್ಷದ ಹಿತದೃಷ್ಟಿಯಿಂದ ಯಾವುದೇ ಸ್ವಾರ್ಥವಿಲ್ಲದೇ ರಾಜಕೀಯವಾಗಿ ನಾವು ಒಂದಾಗುತ್ತೇವೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ ನಾವು ಒಂದು

ಇಲ್ಲ ಅಂದರೆ ಒಂದು ಮಾಡಬೇಕು. ನಾವು ಯಾವಾಗಲೂ ಪಕ್ಷ ನೋಡುತ್ತೇವೆ, ವ್ಯಕ್ತಿಗಳ ಬಗ್ಗೆ ಏನೇ ಇದ್ದರೂ, ಪಕ್ಷದ ಹಿತದೃಷ್ಟಿಯಿಂದ ನಾವೆಲ್ಲರೂ ಒಂದಾಗಬೇಕಿದೆ ಎಂದರು.

ನಾನು ಮತ್ತು ಜನಾರ್ದನ ರೆಡ್ಡಿ ಒಂದಾಗುತ್ತೇವೆ. ನಮ್ಮಿಬ್ಬರ ನಡುವೆ ಯಾವುದೇ ಗೊಂದಲಗಳಿಲ್ಲ. ಜನಾರ್ದನ ರೆಡ್ಡಿ, ರಾಮುಲು ಬೇರೆ ಅಲ್ಲ. ನಮ್ಮಲ್ಲಿ ಸ್ವಾರ್ಥವಿಲ್ಲ. ರೆಡ್ಡಿ ಮತ್ತು ತಮ್ಮ ನಡುವೆ ಸಂಧಾನದ ಅಗತ್ಯವಿಲ್ಲ ಎಂದು ಒತ್ತಿಹೇಳಿದರು.

ಪಕ್ಷದ ಹಿತದೃಷ್ಟಿಯಿಂದ ರಾಜಕೀಯವಾಗಿ ಒಂದಾಗುತ್ತೇವೆ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಅಂದಿನ ಪರಿಸ್ಥಿತಿಯಲ್ಲಿ ಒಬ್ಬರಿಗೊಬ್ಬರು ಬಾಯಿ ಮಾಡಿಕೊಂಡಿದ್ದು ನಿಜ. ಅದರ ನಂತರ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರು.

ಬಿಜೆಪಿ ಅಧಿಕಾರಕ್ಕೆ ತರಲು ಒಗ್ಗಟ್ಟು

ಆ ದಿನ ನಾನು ಮಾತನಾಡಿದ್ದು ತಪ್ಪು, ಅವರು (ಜನಾರ್ದನ ರೆಡ್ಡಿ) ಮಾತಾಡಿದ್ದು ತಪ್ಪು. ಆವತ್ತಿನ ಬೆಳವಣಿಗೆ ಎಲ್ಲವೂ ಮರೆತು ಹೋಗಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕಾದರೆ ಮತ್ತೆ ನಾವೆಲ್ಲಾ ಒಂದಾಗಬೇಕಿದೆ. ನಮ್ಮ ವೈಯಕ್ತಿಕ ಏನೇ ಇರಲಿ, ಅದನ್ನು ಮರೆತು ಒಂದಾಗಬೇಕು. ಜನರಲ್ಲಿ ಭರವಸೆ ತುಂಬಬೇಕು ಎಂದರೆ ನಾವು ಒಂದಾಗಬೇಕು. ರೆಡ್ಡಿ-ರಾಮುಲು ಮಾತ್ರವಲ್ಲ, ರಾಜ್ಯದಲ್ಲಿ ಎಲ್ಲರನ್ನೂ ಒಂದು ಮಾಡುತ್ತೇವೆ. ಒಗ್ಗಟ್ಟಾಗಿ ಚುನಾವಣೆ ಎದುರಿಸುತ್ತೇವೆ ಎಂದು ಶ್ರೀರಾಮುಲು ವಿಶ್ವಾಸ ವ್ಯಕ್ತಪಡಿಸಿದರು.

ಸೈಬರ್ ಬೆದರಿಕೆಗೆ ಆತ್ಮಹತ್ಯೆ

ರಾಮನಗರ: ಸೈಬರ್ ವಂಚಕರ ಬೆದರಿಕೆಗೆ ಹೆದರಿ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಕೆಲಗೆರೆ ಗ್ರಾಮದ ವ್ಯಕ್ತಿಯೊಬ್ಬರು ಆತ್ಮಹತ್ಯೆ

ಮಾಡಿಕೊಂಡಿದ್ದಾರೆ. ಕೆ.ಕುಮಾರ್(48) ಮೃತ ವ್ಯಕ್ತಿ. ಇವರು ವಂಚನೆಯ ಬಗ್ಗೆ ಡೆತ್‌ನೋಟ್ ಬರೆದಿಟ್ಟು ತಮ್ಮ ತೋಟದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಮಾರ್ ಮೂಲತಃ ಚನ್ನಪಟ್ಟಣದ ಕೆಲಗೆರೆ ಗ್ರಾಮದವರಾಗಿದ್ದು, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಪತ್ನಿ ಹಾಗೂ ಮಗುವಿನೊಂದಿಗೆ ವಾಸವಾಗಿದ್ದರು. ಬೆಂಗಳೂರಿನಲ್ಲಿ ಬೆಸ್ಕಾಂನಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು.

ವಿಕ್ರಮ್ ಗೋಸ್ವಾಮಿ ಎಂಬ ಹೆಸರಿನ ವ್ಯಕ್ತಿ ಸಿಬಿಐ ಅಧಿಕಾರಿ ಎಂದು ಕರೆ ಮಾಡಿ, ನಿನ್ನ ಮೇಲೆ ಅರೆಸ್ಟ್ ವಾರಂಟ್ ಬಂದಿದೆ ಎಂದು ಹೆದರಿಸಿದ್ದ. ನಿನ್ನನ್ನು ಪ್ರಕರಣವೊಂದರಲ್ಲಿ ಬಂದಿಸುತ್ತೇನೆ ಎಂಬ ಬೆದರಿಕೆ ಹಾಕಿ ನಂತರ ಸಹಾಯದ ನೆಪದಲ್ಲಿ 1.95 ಲಕ್ಷ ರೂ.ಗಳನ್ನು ತನ್ನ ಖಾತೆಗೆ ಹಾಕಿಸಿಕೊಂಡಿದ್ದನು. ಬಳಿಕ ವಿವಿಧ ಬ್ಯಾಂಕ್ ಖಾತೆಗಳಿಗೆ ಸುಮಾರು 11 ಲಕ್ಷ ರು.ವರೆಗೂ ಹಾಕಿಸಿಕೊಂಡಿದ್ದನು. ಇಷ್ಟಕ್ಕೆ ಸುಮ್ಮನಾಗದೆ ಮತ್ತೆ 2.75 ಲಕ್ಷ ರು. ಹಾಕುವಂತೆ ಪೀಡಿಸುತ್ತಿದ್ದ. ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಡೆತ್‌ನೋಟ್‌ನಲ್ಲಿ ಕುಮಾರ್ ಬರೆದಿದ್ದಾರೆ ಎಂದು ತಿಳಿದುಬಂದಿದೆ.

ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಒತ್ತಾಯ

ಶಾಸಕರ ಅಹವಾಲು ಬಹಿರಂಗಪಡಿಸಿ

ಕಲಬುರಗಿ: ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಧೈರ್ಯವಿದ್ದಲ್ಲಿ, ನಿಜವಾಗಿಯೂ ರಾಜ್ಯಕ್ಕೆ ಒಳ್ಳೆಯದಾಗಬೇಕು ಎಂದಾದರೆ, ಸುರ್ಜೇವಾಲ ಬಳಿ ತಮ್ಮ ಶಾಸಕರು ಹೇಳಿರುವ ಅಹವಾಲುಗಳನ್ನು ಬಹಿರಂಗಪಡಿಸಲಿ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಅವುಗಳನ್ನು ರಾಜ್ಯದ ಜನರ ಮುಂದೆ, ಮಾಧ್ಯಮಕ್ಕೆ ಬಿಡುಗಡೆ ಮಾಡಲಿ. ಆಗ ನಾವೇ ಬಿಜೆಪಿ ಪಕ್ಷದಿಂದ ಸಿಎಂ ಸಿದ್ದರಾಮಯ್ಯ ಅವರಿಗೆ ಸನ್ಮಾನ ಮಾಡುತ್ತೇವೆ. ಗುತ್ತಿದ್ದಾರ ಕೆಂಪಯ್ಯ ಬಿಜೆಪಿ ಆಡಳಿತದ ಅವಧಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಿದ್ದಕ್ಕೆ, ಆಗ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆಗೆ ಆಗ್ರಹ ಮಾಡಿದ್ದರು. ಇದೀಗ ನಿಮ್ಮ ಪಕ್ಷದ ಶಾಸಕರೇ ಬಿ.ಆರ್.ಪಾಟೀಲ್, ರಾಜು ಕಾಗೆ, ಬಸವರಾಜ ರಾಯರೆಡ್ಡಿ ಸೇರಿದಂತೆ (ಹಲವು ಕೆಂಪಯ್ಯರು) ದುಡ್ಡು ತಗೊಂಡು ಮನೆ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ.ನೀವು ಯಾವಾಗ ರಾಜೀನಾಮೆ ಕೊಡುತ್ತಿರಾ? ಎಂದು ಪ್ರಶ್ನಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಜಿಲ್ಲೆ ಪಂಜಾಬಿನಂತೆ ಡ್ರಗ್ಸ್ ಸಾಗಾಟದ ಅಡ್ಡೆಯಾಗಿ ಮಾರ್ಪಟ್ಟಿದೆ. ಸಾವಿರಾರು ಯುವಕರು ಮಾದಕ ಚಟಕ್ಕೆ ಬಲಿಯಾಗುತ್ತಿದ್ದಾರೆ.ಇದಕ್ಕೆ ನೇರ ಕಾರಣ ಇಲ್ಲಿಯ ಸಚಿವರು ಹಾಗೂ ಸರಕಾರ. ಸಚಿವರ ಆಪ್ತ ಶಿಷ್ಯಂದಿರೇ ಈ ಡ್ರಗ್ಸ್ ಸಾಗಾಟ ಮಾಡುತ್ತಿದ್ದು, ಇವೆಲ್ಲವೂ ಎಷ್ಟು ದಿನಗಳಿಂದ ನಡೆಯುತ್ತಿದೆ ಎಂಬುದರ ಕುರಿತು ತನಿಖೆಯಾಗಬೇಕು

-ಎನ್.ರವಿಕುಮಾರ್, ವಿಧಾನ ಪರಿಷತ್ ಸದಸ್ಯ

ಕಾಂಗ್ರೆಸ್ ನಾಯಕರ ವಿರುದ್ಧ ಪ್ರತಾಪ್ ಸಿಂಹ ಕಿಡಿ

ಪ್ರಿಯಾಂಕ್, ಲಾಡ್ ಲೆಕ್ಕ ಶೀಘ್ರ ಚುಕ್ತಾ

ಮೈಸೂರು: ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಸಂತೋಷ್ ಲಾಡ್‌ಗೆ ಮುಂದಿನ ವಾರ ಬಡ್ಡಿ ಸಮೇತವಾಗಿ ಎಲ್ಲವನ್ನೂ ಚುಕ್ತಾ ಮಾಡುತ್ತೇನೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಪ್ರಿಯಾಂಕ್ ಖರ್ಗೆ ಸಿಲಬಸ್ ಬಿಟ್ಟು ಔಟ್ ಆಫ್ ಸಿಲಬಸ್ ಮಾತಾಡುತ್ತಾರೆ. ತಮ್ಮ ಖಾತೆ ಬಗ್ಗೆ ಸುದ್ದಿಗೋಷ್ಠಿ ಮಾಡಿ ಎಂದು ಕೇಳಿದರೆ ಬೇರೆ ಏನೇನೋ ಮಾತಾಡುತ್ತಾರೆ. ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ವಿಶ್ವವಿಖ್ಯಾತ ಆರ್ಥಿಕ ತಜ್ಞ, ಮೈನಿಂಗ್ ದೊರೆ ಸಂತೋಷ್ ಲಾಡ್‌ಗೆ ಮುಂದಿನ ವಾರ ಬಡ್ಡಿ ಸಮೇತವಾಗಿ ಎಲ್ಲವನ್ನೂ ಚುಕ್ತಾ ಮಾಡಲಿದ್ದು, ಈ ಇಬ್ಬರು ಸಚಿವರನ್ನು ಮುಂದಿನವಾರ ಎಕ್ಸ್‌ಪೋಸ್ ಮಾಡುವುದಾಗಿ ತಿಳಿಸಿದರು.

ಸಿಂಗದೂರು ಸೇತುವೆ ಡಿಪಿಆರ್ ಮಾಡಿಸಿದ್ದು ನಾನೇ ಎಂದು ಮಹದೇವಪ್ಪ ಹೇಳಿದ್ದಾರೆ. ಆದರೆ, ಬಿ.ಎಸ್. ಯಡಿಯೂರಪ್ಪ ಅವರ ಸತತ ಪ್ರಯತ್ನ ಮತ್ತು ಸಂಸದ ರಾಘವೇಂದ್ರ ಅವರ ಪರಿಶ್ರಮದಿಂದ ಸೇತುವೆ ಆಗಿದೆ. ಮಹದೇವಪ್ಪ ಯಾರೋ ಗೊತ್ತಿಲ್ಲದವರಿಗೆ ಈ ಕಥೆ ಹೇಳಲಿ, ಡಿಪಿಆರ್ ಮಾಡಿಸುವುದು ಕೇಂದ್ರ ಸರಕಾರ ಎಂಬುದು ಎಲ್ಲರಿಗೂ ಗೊತ್ತಿದೆ. ಸಿದ್ದರಾಮಯ್ಯ ಮೈಸೂರಿಗೆ ಬಂದಾಗ ಮಹದೇವಪ್ಪ ಮೈಸೂರಿಗೆ ಬರುತ್ತಾರೆ, ಅಮೇಲೆ ಯಾರ ಕೈಗೂ ಸಿಗಲ್ಲ. ನೀವು ಎಷ್ಟು ಕೆಡಿಪಿ ಸಭೆ ಮಾಡಿದ್ದೀರಾ ಹೇಳಿ? ಎಂದು ಪ್ರಶ್ನಿಸಿದರು.

ಕುರ್ಚಿ ಉಳಿಸೋಕಾಗಿ ಹೋರಾಟ ಮಾಡುತ್ತಾ, ರಾಜಣ್ಣ, ಜಾರಕಿಹೊಳಿ, ಶಾಮನೂರು, ಮಹದೇವಪ್ಪ ಅವರುಗಳನ್ನು ಡಿ.ಕೆ. ಶಿವಕುಮಾರ್ ವಿರುದ್ಧ ಎತ್ತಿ ಕಟ್ಟಿದ್ದೇ ಸಿಎಂ ಸಾಧನೆ. ಡಿ.ಕೆ. ಶಿವಕುಮಾರ್‌ಗೆ ನ್ಯಾಯಯುತವಾಗಿ ಸಲ್ಲಬೇಕಾದ ಕುರ್ಚಿ ಬಿಟ್ಟು ಕೊಡದಿರುವುದೇ ನಿಮ್ಮ ಸಾಧನೆ.

ಪ್ರತಾಪ್ ಸಿಂಹ, ಮಾಜಿ ಸಂಸದ.

ಮೈಸೂರಿನ ನಾಡ ಅಧಿದೇವತೆ ಚಾಮುಂಡೇಶ್ವರಿ ತಾಯಿಯ ವರ್ಧಂತಿ ಉತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ವೈಭವೋಪೇತವಾಗಿ ನೆರವೇರಿತು. ಮೈಸೂರು ರಾಜವಂಶಸ್ಥರ ಕುಲದೇವತೆಯೂ ಅದ ಚಾಮುಂಡೇಶ್ವರಿಯ ವರ್ಧಂತಿ ಉತ್ಸವಕ್ಕೆ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಗಳು ನೆರವೇರಿದವು.

ಐದು ಗ್ಯಾರಂಟಿ ಯೋಜನೆಗಳು ಸಮರ್ಪಕ ಅನುಷ್ಠಾನ ಆಗಲಿ

ಬಾಗಲಕೋಟೆ: ಕಾಂಗ್ರೆಸ್ ಪಕ್ಷ ಪೂರ್ಣ ಬಹುಮತದಿಂದ ಸರಕಾರ ರಚನೆ ಮಾಡಿದೆ. ಮಾತೆತ್ತಿದರೆ ಗ್ಯಾರಂಟಿ ಎನ್ನುವವರು, ಇದುವರೆಗೂ

ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತ ಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸ್ಥಾನದಿಂದ ಯಾರು ಕೆಳಗಿಳಿತಾರೆ? ಯಾರು ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ? ಕೆಪಿಸಿಸಿ ಅಧ್ಯಕ್ಷರ ಕುರ್ಚಿ ಮೇಲೆ ಯಾರು ಕಣ್ಣಿಟ್ಟಿದ್ದಾರೊ? ಅದು ನಮಗೆ ಬೇಕಿಲ್ಲ. ಪ್ರಣಾಳಿಕೆಯಲ್ಲಿ ಹೇಳಿದಂತೆ ಗ್ಯಾರಂಟಿಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರಬೇಕಿದೆ ಎಂದರು.

ಧಾರ್ಮಿಕ ಗುರುಗಳು ಒಂದಷ್ಟು ಸಂದರ್ಭದಲ್ಲಿ ನಮ್ಮ ಸಮುದಾಯ ನಾಯಕರುಗಳಿಗೆ ಮುಂದು ಬಂದ ಕುಳಿತ ಸಂದರ್ಭದಲ್ಲಿ ಅವಕಾಶ ಸಿಗಲಿ ಎನ್ನುವ ಉದ್ದೇಶಕ್ಕೆ ಭಾವನೆ ವ್ಯಕ್ತಪಡಿಸಿದ್ದಲ್ಲಿ ತಪ್ಪೇನಿಲ್ಲ. ಸಿಎಂ ಸಿದ್ದರಾಮಯ್ಯ, ತಾವೇ ಐದು ವರ್ಷ ಮುಂದುವರಿಯುತ್ತೇವೆಂದು ತಮ್ಮ ಬಾಯಿಯಿಂದಲೇ ಹೇಳಿದ್ದಾರೆ. ಡಿಸಿಎಂ ಶಿವಕುಮಾರ್ ಜತೆಗೆ ಇಬ್ಬರು, ಮೂವರು ಶಾಸಕರು ಇದ್ದರೆ ಹೆಚ್ಚು ಎಂದಿದ್ದಾರೆ. ಇದನ್ನು ಸ್ವತಃ ಸಿಎಂ ಹೇಳಿದ್ದಾರೆ ಎಂದರು.

www.pravasiprapancha.com
ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ

ವಿಶ್ವವಾಣಿ

ಸಂಪಾದಕೀಯ

ದೋಣಿ ನಾಯಕನ ಅಪ್ಪಣೆಯೇ?!

ಉಕ್ರೇನ್ ವಿರುದ್ಧದ ಯುದ್ಧವನ್ನು ಮುಂದುವರಿಸಿರುವ ರಷ್ಯಾದ ಜತೆಗಿನ ವ್ಯಾಪಾರ-ವ್ಯವಹಾರಗಳನ್ನು ಕಡಿದುಕೊಳ್ಳುವಂತೆ ಭಾರತ, ಬ್ರೆಜಿಲ್ ಮತ್ತು ಚೀನಾ ದೇಶಗಳ ಮೇಲೆ ಒತ್ತಡ ಹಾಕಿರುವ 'ನ್ಯಾಟೊ' ಒಕ್ಕೂಟ, 'ಒಂದೊಮ್ಮೆ ರಷ್ಯಾದ ಜತೆಗಿನ ವ್ಯಾಪಾರ ಚಟುವಟಿಕೆಗಳನ್ನು ಮುಂದುವರಿಸಿದರೆ ತೀವ್ರ ಸ್ವರೂಪದ ಆರ್ಥಿಕ ನಿರ್ಬಂಧಗಳನ್ನು ಹೇರಲಾಗುತ್ತದೆ' ಎಂದು ಬೆದರಿಕೆ ಹಾಕಿದೆ. ಇದು, 'ಹರಿವ ನೀರಿಗೆ ದೋಣಿ ನಾಯಕನ ಅಪ್ಪಣೆಯೇಕೆ?' ಎಂಬ ಗಾದೆಮಾತನ್ನು ನೆನಪಿಸುವಂತಿದೆ. ಒಂಥರದಲ್ಲಿ ಇದು, ಊರಿನ ಅಂಗಡಿ ಮಾಲೀಕರೊಬ್ಬರು, 'ನಮ್ಮ ಬೀದಿಯಲ್ಲಿರುವ ನೀವು ನಮ್ಮ ಅಂಗಡಿಯಲ್ಲೇ ವಸ್ತುಗಳನ್ನು ಖರೀದಿಸಬೇಕು; ಬದಲಿಗೆ ಪಕ್ಕದ ಬೀದಿಯ ಅಂಗಡಿಯಿಂದ ಖರೀದಿಸಿದರೆ, ಈ ಬೀದಿಯಲ್ಲಿ ನಿಮಗೆ ಓಡಾಡಲಿಕ್ಕೆ ಬಿಡುವುದಿಲ್ಲ' ಎಂದು ಗ್ರಾಹಕರೊಬ್ಬರಿಗೆ ಗೊಡ್ಡು ಬೆದರಿಕೆ ಹಾಕಿದಂತಾಗುತ್ತದೆ ಅಷ್ಟೇ! ವಿಶ್ವದ ಉದ್ದಗಲಕ್ಕೂ ಮೈಚಾಚಿಕೊಂಡಿರುವ ರಾಷ್ಟ್ರಗಳು ತಮ್ಮ ಅಗತ್ಯದ ಕಚ್ಚಾತೈಲ, ಅದಿರು, ಆಹಾರ ಪದಾರ್ಥ, ಹಣ್ಣು-ತರಕಾರಿ, ಔಷಧಿ ಇತ್ಯಾದಿ ವಸ್ತುಗಳನ್ನು ತಮ್ಮ ಅನುಕೂಲ ಹಾಗೂ ಲಭ್ಯ ಸಂಪನ್ಮೂಲಕ್ಕೆ ತಕ್ಕಂತೆ, ತಮ್ಮ ಧೋರಣೆಗೆ ಹೊಂದುವಂತಿರುವ ದೇಶದಿಂದ ಖರೀದಿಸಲು ಸರ್ವತಂತ್ರ ಸ್ವತಂತ್ರವಾಗಿರುತ್ತವೆ. ಇಂಥ ಚಟುವಟಿಕೆಗೂ ನ್ಯಾಟೊ ನಿರ್ಬಂಧ ವಿಧಿಸುವುದಾದರೆ, ಅದು ಅಂಗಡಿಯ ಮಾಲೀಕರೊಬ್ಬರು ಹಾಕಿದ ಗೊಡ್ಡು ಬೆದರಿಕೆಯಂತಾಗದೇ? ಇಲ್ಲಿ ಉಕ್ರೇನ್ ಜತೆಗಿನ ರಷ್ಯಾದ ಯುದ್ಧ ಧರ್ಮಸಮ್ಮತವಾದದ್ದೋ ಅಲ್ಲವೋ ಎಂಬುದು ಪ್ರಶ್ನೆಯಲ್ಲ. ಇದು ವಾಣಿಜ್ಯಿಕ ಬಾಬತ್ತು. ಅತ್ಯಧಿಕ ಪ್ರಮಾಣದ ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸುವ ಭಾರತವು, ದೇಶೀಯ ಕಚ್ಚಾತೈಲದ ಉತ್ಪಾದನೆ ಸದ್ಯಕ್ಕೆ ಕಡಿಮೆಯಿರುವುದರಿಂದ ಶೇ.85ರಷ್ಟು ಭಾಗವನ್ನು ಅನ್ಯದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿದೆ. ಇಂಥ ಭಾರಿ ಅಗತ್ಯವಿದ್ದಾಗ, ಮಿತವ್ಯಯಕಾರಿ ಎನಿಸಿದ ವ್ಯಾಪಾರಿ ಒಡಂಬಡಿಕೆಗೆ ಮಾತ್ರವೇ ಸಮ್ಮತಿಸಬೇಕಾಗುತ್ತದೆ. ಹೀಗಾಗಿ ರಷ್ಯಾ ಜತೆಗಿನ ವ್ಯಾಪಾರ ಅನುಕೂಲಕರ ಎನಿಸಿದಲ್ಲಿ ಆ ನಿಟ್ಟಿನಲ್ಲಿ ಮುಂದುವರಿಯಲು ಭಾರತ ಸ್ವತಂತ್ರವಾಗಿರುತ್ತದೆ. ಇದನ್ನು ನ್ಯಾಟೊ ಅರಿತರೆ ಒಳಿತು.

ಸೊಂಪಾದಕೀಯ

ಹೀಗೊಬ್ಬ ಪ್ರಳಯಾಂತಕ ಜಡ್ಜ್

ನಮ್ಮ ಸಮಾಜದಲ್ಲಿ ಅನೇಕ ನಕಲಿ ಕ್ಯಾರೆಕ್ಟರ್‌ಗಳನ್ನು ನಾವು ನೋಡಿದ್ದೇವೆ. ಸಿನಿಮಾಗಳಲ್ಲಿ ಅಷ್ಟೇ ಅಲ್ಲ, ನಿಜ ಜೀವನದಲ್ಲೂ ನಕಲಿಗಳ ಹಾವಳಿ ಇರುತ್ತದೆ ಎಂಬುದನ್ನು ಇವರು ಪ್ರೂವ್ ಮಾಡಿದ್ದಾರೆ. ಹಾಗಾಗಿ ಆಗಾಗ ನಕಲಿ ಪೊಲೀಸ್ ಇನ್‌ಸ್ಪೆಕ್ಟರ್, ನಕಲಿ ಸಿಐಡಿ ಆಫೀಸರ್, ನಕಲಿ ವೈದ್ಯರು ಹೀಗೆ ಹಲವು ಕಡೆ ನಕಲಿಶಾಮರು ಕಂಡುಬರುತ್ತಾರೆ. ಆದರೆ ಇಲ್ಲೊಂದು ವಿಚಿತ್ರ ಕೇಸ್ ಇದೆ. ಇದನ್ನು ಕೇಸ್ ಎಂದು ಕರೆಯುವುದಕ್ಕೆ, ಇದು ಕೋರ್ಟಿಗೆ ಸಂಬಂಧಿಸಿದ ವಿಷಯ ಎನ್ನುವುದೂ ಒಂದು ಕಾರಣ. ಹೌದು ಗುಜರಾತ್‌ನ ಗಾಂಧಿನಗರದ 37 ವರ್ಷದ ಮಾರಿಸ್ ಸ್ಯಾಮ್ಯುಯಲ್ ಕ್ರಿಶ್ಚಿಯನ್ ಎಂಬಾತ 2019ರಿಂದ ನಕಲಿ ಕೋರ್ಟ್ ಒಂದನ್ನು ನಡೆಸಿ ತಾನೇ ಜಡ್ಜ್ ಮಾದರಿಯಲ್ಲಿ, ವಾದ-ಪ್ರತಿವಾದಗಳನ್ನು ಆಲಿಸಿ ತೀರ್ಪು ನೀಡುತ್ತಿದ್ದ. ಸರಕಾರಿ ಜಾಗದ ಹಕ್ಕು ಪಡೆಯಲು ಆಗ್ರಹಿಸಿದ ವ್ಯಕ್ತಿ ಒಬ್ಬರು ಜಿಲ್ಲಾಧಿಕಾರಿ ವಿರುದ್ಧ ಸಿವಿಲ್ ಪ್ರಕರಣ ಹೂಡಿದ್ದರು. ಈ ಪ್ರಕರಣದಲ್ಲಿ ಸ್ಯಾಮ್ಯುಯಲ್ ಈ ವ್ಯಕ್ತಿಗೆ ನಕಲಿ ಹಕ್ಕುಪತ್ರವನ್ನು ನೀಡಿದ್ದ. ಈ ಪ್ರಕರಣದಿಂದಾಗಿ ಈ ನಕಲಿ ಕೋರ್ಟ್‌ನ ವಿಷಯ ಹೊರಗೆ ಬಂತು. ಈ ನಕಲಿ ಜಡ್ಜನ್ನು ನೋಡಿದರೆ ಈತ ಹಿಂದೆ ಸಿನಿಮಾರಂಗದಲ್ಲಿ ಏನಾದರೂ ಕೆಲಸ ಮಾಡುತ್ತಿದ್ದನಾ ಎಂಬ ಅನುಮಾನ ಬರುತ್ತಿದ್ದುದು ಸಹಜ. ಯಾಕೆಂದರೆ ಕೋರ್ಟ್ ಪರಿಸರವನ್ನೇ ಹೋಲುವ ರೀತಿಯಲ್ಲಿ ಸೆಟ್ ಒಂದನ್ನು ನಿರ್ಮಿಸಿದ್ದ ಈ ಜಡ್ಜ್ ತನ್ನ ಸುತ್ತಲೂ ವಕೀಲರು, ಕೋರ್ಟ್ ಸಿಬ್ಬಂದಿಯ ಮಾದರಿಯಲ್ಲಿ ಉಡುಪು ಧರಿಸಿದವರನ್ನು ಇರಿಸಿಕೊಂಡಿದ್ದ. ಬರುತ್ತಿದ್ದ ಎಲ್ಲ ಕೇಸುಗಳನ್ನು 'ನೌ ದ ಕೇಸ್ ಈಸ್ ಇನ್ ಮೈ ಕೋರ್ಟ್' ಎಂದು ಆತ್ಮವಿಶ್ವಾಸದಿಂದ ನಿಭಾಯಿಸುತ್ತಿದ್ದ. ಇಷ್ಟೂ ವರ್ಷಗಳಲ್ಲಿ ಈತ ವಿವಿಧ ಕೇಸುಗಳಲ್ಲಿ ತನ್ನದೇ ಆದ ಹಲವು ರೀತಿಯ ಜಡ್ಜ್‌ಮೆಂಟ್‌ಗಳನ್ನು ಕೊಟ್ಟು ಕೊನೆಗೊಮ್ಮೆ ಕಾನೂನಿನ ಕೈಗೆ ಸಿಕ್ಕಿಬಿದ್ದ.

ಸಂಪಾದಕರ ಸದ್ಯಶೋಧನೆ

ಇದು ವಿಮಾನವನ್ನು ಕೆಳಗಿಳಿಸುವುದಷ್ಟೇ ಅಲ್ಲ

ವಿಮಾನ ಲ್ಯಾಂಡಿಂಗ್ ಬಗ್ಗೆ ಒಂದು ತಮಾಷೆಯ, ಆದರೆ ವಾಸ್ತವಿಕವಾದ ಮಾತಿದೆ- 'ವಿಮಾನ ಲ್ಯಾಂಡ್ ಆದ ಬಳಿಕ ಪ್ರಯಾಣಿಕರೆಲ್ಲ ಸಲೀಸಾಗಿ ನಡೆದು ಹೋದರೆ ಅದು ಒಳ್ಳೆಯ ಲ್ಯಾಂಡಿಂಗ್. ಅದೇ ವಿಮಾನ ಮರುದಿನವೂ ಹಾರುವಂತಾದರೆ, ಅದು ಅತ್ಯದ್ಭುತ ಲ್ಯಾಂಡಿಂಗ್'. ಲ್ಯಾಂಡಿಂಗ್ ಒಂದು ಅಪರೂಪದ ಕಲೆ. ಈ ಕಲೆಯಲ್ಲಿ ಯಾವತ್ತೂ ಪರಿಣತಿ ಸಾಧಿಸಿದ್ದೇನೆ ಎಂದು ಹೇಳುವ ಪೈಲಟ್ ಇಲ್ಲವಂತೆ. ಲ್ಯಾಂಡಿಂಗ್ (ವಿಮಾನವನ್ನು ಭೂಮಿಗೆ ಇಳಿಸುವುದು) ಎನ್ನುವುದು ಪೈಲಟ್‌ಗಳ ಕೌಶಲ ಮತ್ತು ಪರಿಣತಿಯ ನಿಜವಾದ ಪರೀಕ್ಷೆ. ಇದು ಕೇವಲ ವಿಮಾನವನ್ನು ಕೆಳಗಿಳಿಸುವುದಲ್ಲ, ಬದಲಿಗೆ ಪ್ರಯಾಣಿಕರ ಭದ್ರತೆ, ಸುರಕ್ಷತೆ ಮತ್ತು ಆರಾಮವನ್ನು ಖಚಿತಪಡಿಸಿಕೊಳ್ಳುವುದು ಕೂಡ ಹೌದು. ಅಷ್ಟಕ್ಕೂ ಲ್ಯಾಂಡಿಂಗ್ ಒಂದು ಸಂಕೀರ್ಣವಾದ, ಪೂರ್ವಯೋಜಿತ ಪ್ರಕ್ರಿಯೆಯಾಗಿದ್ದು, ಅದು ಹಲವು ಹಂತಗಳನ್ನು ಒಳಗೊಂಡಿದೆ. ಲ್ಯಾಂಡಿಂಗ್‌ನಲ್ಲಿ ಫ್ಲೇರ್ (Flare)ಎನ್ನುವುದು ನಿರ್ಣಾಯಕ ಹಂತ. ವಿಮಾನವು ರನ್‌ವೇಗೆ ಹತ್ತಿರವಾದಾಗ, ಪೈಲಟ್‌ಗಳು ವಿಮಾನದ ಮೂಗ (nose) ನ್ನು ನಿಧಾನವಾಗಿ ಮೇಲಕ್ಕೆತ್ತುತ್ತಾರೆ. ಇದರಿಂದ ವಿಮಾನದ ಇಳಿಯುವ ವೇಗ (descent rate) ಕಡಿಮೆಯಾಗುತ್ತದೆ. ನಂತರ ವಿಮಾನವು 'ಮೃದುವಾಗಿ' ರನ್‌ವೇಯನ್ನು ಸ್ಪರ್ಶಿಸುತ್ತದೆ. ಇದು 'ಫ್ಲೇರ್'. ಇದರ ನಂತರ, ವಿಮಾನದ ಮುಖ್ಯ ಚಕ್ರಗಳು (main wheels) ಮೊದಲು ರನ್‌ವೇಯನ್ನು ಸ್ಪರ್ಶಿಸುತ್ತವೆ. ನಂತರ ವಿಮಾನದ ಮುಂಭಾಗದ ಚಕ್ರ (nose wheel) ಸ್ಪರ್ಶಿಸುತ್ತದೆ. ಇದು ವಿಮಾನದ ಸಮತೋಲನಕ್ಕೆ ಅತಿ ಮುಖ್ಯ. ಇದನ್ನು ಟಚ್‌ಡೌನ್ (Touchdown) ಅಂತಾರೆ. ವಿಮಾನದ ಚಕ್ರಗಳು ರನ್‌ವೇಯನ್ನು ಸ್ಪರ್ಶಿಸಿದ ತಕ್ಷಣ, ರೆಕ್ಕೆಗಳ ಮೇಲೆ ಇರುವ 'ಸ್ಪಾಯಿಲರ್‌ಗಳು' ಅಥವಾ 'ಗ್ರೌಂಡ್ ಸ್ಪಾಯಿಲರ್'ಗಳು ಸ್ವಯಂಚಾಲಿತವಾಗಿ ಅಥವಾ ಪೈಲಟ್‌ನಿಂದ ಮೇಲಕ್ಕೆ ಏಳುತ್ತವೆ. ಇವುಗಳ ಮುಖ್ಯ ಕಾರ್ಯವೆಂದರೆ ವಿಮಾನದ ರೆಕ್ಕೆಗಳ ಮೇಲೆ ಉತ್ಪತ್ತಿಯಾಗುವ 'ಲಿಫ್ಟ್' ಅನ್ನು ನಿಯಂತ್ರಿಸುವುದು. ಲಿಫ್ಟ್ ಇಲ್ಲದಿದ್ದಾಗ, ವಿಮಾನದ ಸಂಪೂರ್ಣ ತೂಕವು ಚಕ್ರಗಳ ಮೇಲೆ ಬೀಳುತ್ತದೆ. ಇದು ಬ್ರೇಕಿಂಗ್‌ಗೆ ಹೆಚ್ಚು ಪರಿಣಾಮಕಾರಿ. ಸ್ಪಾಯಿಲರ್‌ಗಳು ಗಾಳಿಯ ಪ್ರತಿರೋಧವನ್ನು (air resistance) ಹೆಚ್ಚಿಸುತ್ತವೆ, ಇದರಿಂದ ವಿಮಾನದ ವೇಗ ಬಹುಬೇಗ ಕಡಿಮೆಯಾಗುತ್ತದೆ. ಸ್ಪಾಯಿಲರ್‌ಗಳ ನಿಯೋಜನೆಯ ನಂತರ, ಪೈಲಟ್‌ಗಳು ಕ್ರಮೇಣ ಬ್ರೇಕ್‌ಗಳನ್ನು ಅನ್ವಯಿಸುತ್ತಾರೆ. ಇದರೊಂದಿಗೆ, 'ರಿವರ್ಸ್ ಥ್ರಸ್ಟ್' ಅನ್ನು ಸಹ ಬಳಸುತ್ತಾರೆ. ರಿವರ್ಸ್ ಥ್ರಸ್ಟ್ ಎಂದರೆ ಎಂಜಿನ್‌ನಿಂದ ಹೊರಬರುವ ಗಾಳಿಯ ಹರಿವನ್ನು ಮುಂದಕ್ಕೆ ತಿರುಗಿಸುವುದು. ಇದು ವಿಮಾನವನ್ನು ನಿಲ್ಲಿಸಲು ಸುಮಾರು ಶೇ.30-50ರಷ್ಟು ಬ್ರೇಕಿಂಗ್ ಶಕ್ತಿಯನ್ನು ಒದಗಿಸುತ್ತದೆ. ಹೆಚ್ಚಿನ ವಿಮಾನಗಳಲ್ಲಿ ಚಕ್ರಗಳ ಬ್ರೇಕಿಂಗ್ ಆಂಟಿ-ಲಾಕ್ ಬ್ರೇಕಿಂಗ್ ಸಿಸ್ಟಮ್ (ABS)ನ್ನು ಹೊಂದಿರುತ್ತವೆ. ಇದು ಕಾರುಗಳಲ್ಲಿರುವಂತೆ, ಸ್ಕಿಡ್ ಆಗುವುದನ್ನು ತಡೆಯುತ್ತದೆ ಮತ್ತು ಸುರಕ್ಷಿತ ಬ್ರೇಕಿಂಗ್ ಅನ್ನು ಖಚಿತಪಡಿಸುತ್ತದೆ. ಯಾವತ್ತೂ ಸುಲಲಿತ, ಹಿತವಾದ ಅಥವಾ ಮೃದು ಲ್ಯಾಂಡಿಂಗ್ (Smooth landings)ಗೆ ಆದ್ಯತೆ ನೀಡಲಾಗುತ್ತದೆ. ಅದು ಮೂಲಭೂತವಾಗಿ ಪ್ರಯಾಣಿಕರಿಗೆ ಆರಾಮದಾಯಕ ಅನುಭವ ನೀಡುತ್ತದೆ. ಅತಿ ಕಡಿಮೆ ಅಂತರದಲ್ಲಿ ವಿಮಾನವನ್ನು ನಿಲ್ಲಿಸುವುದಕ್ಕಿಂತ, ಮೃದುವಾದ ಸ್ಪರ್ಶ ಮತ್ತು ಸುಗಮ ನಿಲುಗಡೆ ಮುಖ್ಯ. ಇದು ಪೈಲಟ್‌ನ ಕೌಶಲದ ಸಂಕೇತವೂ ಹೌದು. ಸಾಮಾನ್ಯವಾಗಿ ಒದ್ದೆಯಾದ (wet) ಅಥವಾ ಕಡಿಮೆ ಉದ್ದದ ರನ್‌ವೇಗಳಲ್ಲಿ ವಿಮಾನವನ್ನು ಗಕ್ಕನೆ ನಿಲ್ಲಿಸುತ್ತಾರೆ. ಇದನ್ನು ಹಾರ್ಡ್ ಬ್ರೇಕಿಂಗ್ ಅಂತಾರೆ. ಕೆಲವು ಸಂದರ್ಭಗಳಲ್ಲಿ ಸುರಕ್ಷತೆಗಾಗಿ ಹಾಗೆ ನಿಲ್ಲಿಸುವುದು ಅನಿವಾರ್ಯ. ಅನೇಕ ಆಧುನಿಕ ವಿಮಾನಗಳು ಆಟೋಬ್ರೇಕ್ ವ್ಯವಸ್ಥೆಯನ್ನು ಹೊಂದಿರುತ್ತವೆ. ವಿಮಾನವು ರನ್‌ವೇಯನ್ನು ಸ್ಪರ್ಶಿಸಿದ ತಕ್ಷಣ, ವ್ಯವಸ್ಥೆಯು ಸ್ವಯಂಚಾಲಿತವಾಗಿ ಆಯ್ದ ಮಟ್ಟದ ಬ್ರೇಕಿಂಗ್ ಅನ್ನು ಅನ್ವಯಿಸುತ್ತದೆ. ಇದು ಪೈಲಟ್‌ನ ಕಾರ್ಯಭಾರವನ್ನು ಕಡಿಮೆ ಮಾಡಿ ಸ್ಥಿರ ಬ್ರೇಕಿಂಗ್ ಅನ್ನು ಒದಗಿಸುತ್ತದೆ. ಒಮ್ಮೊಮ್ಮೆ ಬೆಣ್ಣೆಯಂತೆ ನಯವಾದ, ಮೆತ್ತನೆಯ ಬಹುತೇಕ ಅನುಭವಕ್ಕೆ ಬಾರದ ರೀತಿಯಲ್ಲಿ ಲ್ಯಾಂಡಿಂಗ್ ಮಾಡುತ್ತಾರೆ. ಇದನ್ನು Butter-smooth glide ಅಂತಾರೆ. ಕೆಲವೊಮ್ಮೆ ಕಡಿಮೆ ರನ್‌ವೇ ಇದ್ದಾಗ ವೇಗವಾಗಿ ಲ್ಯಾಂಡಿಂಗ್ ಮಾಡುತ್ತಾರೆ. ಇದನ್ನು Short-field performance ಅಂತಾರೆ. ಒಮ್ಮೊಮ್ಮೆ ವಿಮಾನವು ರನ್‌ವೇಯನ್ನು ಸ್ಪರ್ಶಿಸಿದ್ದು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಅದು ಹಾರ್ಡ್ ಲ್ಯಾಂಡಿಂಗ್ ಅಲ್ಲ, ಹಾಗಂತ ಮೃದುವೂ ಅಲ್ಲ. ಅದನ್ನು Firm positive touchdown ಅಂತಾರೆ.

ಮನೆಗೆ ಬಂದು ತಲುಪಿದೆನೆಂಬ ಸಾರ್ವತ್ರಿಕ ಭಾವ

ಕೆಲಸವು ಯಾವುದೇ ಇರಬಹುದು, ಮುಗಿಸಿ ಮನೆಯತ್ತ ಹೊರಡುವ ಆ ಕ್ಷಣ ನಮ್ಮ ಇಡೀ ದೇಹ-ಮನಸ್ಸು ನಿರಾಳವಾಗುತ್ತದೆ. ಆದರೆ ಒಂದನ್ನು ಗ್ರಹಿಸಿದ್ದೀರಾ? ಅಷ್ಟೆಲ್ಲಾ ಧಾವಂತ, ದೌಡಿನಿಂದ ಮನೆಗೆ ಬರಬೇಕೆಂದು- ಬಂದೇನೋ ತಲುಪುತ್ತೇವೆ. ಆದರೆ ತಲುಪಿದಾಗಿನ ಆ ನಿರಾಳತೆ ಅದೆಷ್ಟು ಸಮಯವಿರುತ್ತದೆ? ಬಾಗಿಲು ಮುಚ್ಚಿಕೊಳ್ಳುತ್ತಿದ್ದಂತೆ ಮೊಬೈಲ್ ಹಿಡಿದುಕೊಳ್ಳುತ್ತೇವೆ, ಅಥವಾ ಟಿವಿ. ಮನೆಯೊಳಗೆ ಬರುತ್ತಿದ್ದಂತೆ ಮನೆಯಾಚೆಗೆ ನಮ್ಮನ್ನು ತೆರೆದುಕೊಳ್ಳುತ್ತೇವೆ. ಅಥವಾ ಅಡುಗೆ, ಮನೆಗೆಲಸ, ಪಾತ್ರೆ ತೊಳೆಯುವುದು ಹೀಗೆ ಏನೋ ಒಂದು ನಮ್ಮನ್ನು ಆವರಿಸಿಕೊಂಡುಬಿಡುತ್ತದೆ.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಅದು ಬೆಂಗಳೂರಿನ ಎರಡು ಬೆಡ್‌ರೂಮ್ ಅಪಾರ್ಟ್‌ಮೆಂಟಿನ ಬಾಗಿಲಿರಬಹುದು ಅಥವಾ ಶಿಕಾಗೋದ ಹಿಮ ತುಂಬಿದ ಮನೆಯ ಬಾಗಿಲಿರಬಹುದು. ಅಥವಾ ಅಫ್ಘಾನಿಸ್ತಾನದ ಮರಳುಗಾಡಿನ ಮನೆಯ, ಮುಂಬಯಿ ಸ್ಲಮ್ಮಿನ ಒಂಟಿಖೋಲಿಯ ಬಾಗಿಲಿರಬಹುದು. ಮನೆ ಯಾವುದೇ ಇರಬಹುದು, ಬಂಗಲೆಯಿರಬಹುದು, ಅರಮನೆಯಿರಬಹುದು, ಅಥವಾ ಖಾಲಿ ಸೈಟಿನಲ್ಲಿ ಕೆಲಸಗಾರರು ಕಟ್ಟಿಕೊಂಡ ಶೆಡ್ ಇರಬಹುದು. ಮನೆಯನ್ನು ತಲುಪಿ ಬಾಗಿಲನ್ನು ಹಾಕಿಕೊಂಡಾಗ 'ಮನೆಗೆ ಬಂದು ತಲುಪಿದೆವು' ಎಂಬ ಆ ಭಾವವಿದೆಯಲ್ಲ, ಅದು ಸಾರ್ವತ್ರಿಕ. ಎಲ್ಲಿಗೇ ಹೋಗಲಿ, ನಾವು ಮನೆಯವರಿಗಿಂತ ಮನೆಯನ್ನು ಹೆಚ್ಚಿಗೆ 'ಮಿಸ್' ಮಾಡಿಕೊಳ್ಳುತ್ತೇವೆ. ಮನೆಯ ವಿರಹಬಾಧೆಯೇ ಜಾಸ್ತಿ.

ನಾನು ಭಾರತದ ನಾಲ್ಕಾರು ಮೆಟ್ರೋಪಾಲಿಟನ್ ನಗರಗಳಲ್ಲಿ, ಕುಮಟಾದ ಮೂರೂರು, ಬೆಂಗಳೂರಿನಲ್ಲಿ, ದಕ್ಷಿಣ ಅಮೆರಿಕದ ಉರುಗ್ವೆ, ಅರ್ಜೆಂಟೀನಾ, ಚಿಲಿ, ಉತ್ತರ ಅಮೆರಿಕದ ನಾಲ್ಕಾರು ಊರು ಇಲ್ಲೆಲ್ಲ ವಾಸವಾಗಿದ್ದೆ. ಹೋಗಿ ಉಳಿದಲ್ಲೆಲ್ಲ ಒಂದೊಂದು 'ಮನೆ' ಎನ್ನುವ ಸ್ಥಳವಿತ್ತು. ಊರಿನ ಹಳೆಯ ಅಂಕಣದ ಮನೆ, ಹೊಸ ಆರ್‌ಸಿಸಿ ಮನೆ, ಹಾಸ್ಟೆಲ್ಲಿನ ರೂಮು, ನಗರದ ಬಾಡಿಗೆ ಮನೆ, ಅಪಾರ್ಟ್‌ಮೆಂಟು, ಅಮೆರಿಕದ ಕೊಂಡೋ ಮನೆ, ಸಬರ್ಬನ್ ಮನೆ ಹೀಗೆ. ಅವಕ್ಕೆಲ್ಲ ಹೆಸರು ಬೇರೆ ಬೇರೆ, ಸಾಮಾಜಿಕ ಮರ್ಯಾದೆ, ಆಕಾರ, ಸ್ವರೂಪ, ಗಾತ್ರ ಬೇರೆ ಬೇರೆ. ಆದರೆ ಒಳಹೊಕ್ಕ ಕ್ಷಣದ ಭಾವ ಮಾತ್ರ ಒಂದೇ.

ನನ್ನ ಸಹೋದ್ಯೋಗಿ ಡ್ಯಾನ್ ಮೈಲ್ಸ್. ಅಮೆರಿಕನ್. ಅವನು ನಿರಂತರ 'ವರ್ಕ್ ಫ್ರಮ್ ಹೋಮ್'. ಮನೆಯಿಂದಲೇ ಕೆಲಸ ಮಾಡುತ್ತಾನೆ. ಶಿಕಾಗೋ, ಅಮೆರಿಕದ ಪೂರ್ವಭಾಗದ ಬಹುತೇಕ ಎಲ್ಲಾ ಮನೆಗಳಲ್ಲಿ Basement- ನೆಲಮಾಳಿಗೆಯಿರುತ್ತದೆ. ಆತ ಅಲ್ಲಿಯೇ ತನ್ನ ಗೃಹಕಚೇರಿ ಮಾಡಿಕೊಂಡಿದ್ದಾನೆ. ಅವನೊಂದು ವಿಚಿತ್ರ ಅಭ್ಯಾಸ ಮಾಡಿಕೊಂಡಿದ್ದಾನೆ. ನಿತ್ಯ ಆಫೀಸ್ ಸಮಯ ಮುಗಿಯುತ್ತಿದ್ದಂತೆ ತಾನಿದ್ದ ನೆಲಮಾಳಿಗೆಯಿಂದ ಮನೆಯ ಹೊರಗೆ ನಡೆಯುತ್ತಾನೆ. ಹೋಗುವಾಗ ಮನೆಯವರು ಯಾರು ಸಿಕ್ಕರೂ ಮಾತನಾಡುವುದಿಲ್ಲ, ಹೊರನಡೆದವನೇ ಕಾರು ಹತ್ತಿ ಆರೇಳು ಮೈಲು ಡ್ರೈವ್ ಮಾಡುತ್ತಾನೆ. ಅಷ್ಟು ದೂರದಲ್ಲಿರುವ ಕಾಫಿ ಶಾಪ್‌ಗೆ ಹೋಗಿ, ಅಲ್ಲೊಂದು ಕಾಫಿ ಕುಡಿದು ಮನೆಗೆ ಬರುತ್ತಾನೆ. ಹಾಗೆ ಮನೆಗೆ ವಾಪಸ್ ಬಂದಾದ ಮೇಲೆಯೇ ಅವನು ಮನೆಯವರ ಜತೆ ಮಾತನಾಡುವುದು, ಸಮಯ ಕಳೆಯುವುದು ಇತ್ಯಾದಿ. ಹಾಗೆ ವಾಪಸ್ ಬಂದ ಮೇಲೆ ಜಪ್ಪಯ್ಯ ಅಂದರೂ ಆಫೀಸಿನ ಇ-ಮೇಲ್, ಫೋನ್ ಕರೆ ಯಾವುದನ್ನೂ ಸ್ವೀಕರಿಸುವುದಿಲ್ಲ. ಖುದ್ದು ಕಂಪನಿಯ ಸಿಇಒ ಕರೆ ಮಾಡಿ ಜೀವ ಹೋಗುತ್ತಿದೆ ಎಂದರೂ ಬಿಲ್‌ಕುಲ್ ಲ್ಯಾಪ್‌ಟಾಪ್ ತೆರೆಯುವುದಿಲ್ಲ.

''ಶಿಶಿರ್, ನನಗೆ ಮನೆಯೇ ಆಫೀಸ್ ಆಗಿ 12 ವರ್ಷ ವಾಯಿತು. ಇಷ್ಟೂ ಕಾಲ ನನಗೆ ಆಫೀಸಿಗೆ ಹೋಗುವ ಕೆಲಸ ಬೇಕು ಅನಿಸಿದ್ದೇ ಇಲ್ಲ. ನಾನೆಂದೂ ಆಫೀಸಿಗೆ ಹೋಗುವುದನ್ನು ಮಿಸ್ ಮಾಡಿಕೊಂಡಿಲ್ಲ, ನನಗೆ 'ವರ್ಕ್ ಫ್ರಮ್ ಹೋಂ' ಇಷ್ಟ. ಆದರೆ ನಾನು ಒಂದನ್ನು ಬಹುವಾಗಿ ಮಿಸ್ ಮಾಡಿಕೊಳ್ಳುತ್ತೇನೆ. ಆಫೀಸಿನಿಂದ ಮನೆಗೆ ಬರುವ ಆ ಪ್ರಕ್ರಿಯೆಯನ್ನು. 'ಮನೆಗೆ ಬರುವುದು' ಎಂಬ ನಿತ್ಯ ಸಂಭ್ರಮವನ್ನು. ಹಾಗಾಗಿಯೇ ಕಳೆದ 9 ವರ್ಷದಿಂದ ಆಫೀಸ್ ಕೆಲಸ ಮುಗಿಯುತ್ತಿದ್ದಂತೆ ಮನೆಯಿಂದ ಕಾರು ಹತ್ತಿ ಅದೊಂದು ಹೋಟೆಲ್ಲಿಗೆ ಹೋಗಿಬಿಡುತ್ತೇನೆ. ಅಲ್ಲಿನವರಿಗೆಲ್ಲ ನನ್ನ ಪರಿಚಯವಾಗಿಹೋಗಿದೆ. ಹೋಗಿ ಕೂತರೆ ನನ್ನಿಷ್ಟದ ಕಾಫಿ ತಂದಿಟ್ಟುಬಿಡುತ್ತಾರೆ. ಹಾಗಂತ ನಾನೇನೂ ಕಾಫಿಪ್ರಿಯನಲ್ಲ, ಆ ಕಾಫಿ ಶಾಪ್ ಕೂಡ ಅಷ್ಟಕ್ಕಷ್ಟೆ. ಆದರೆ ನನಗೆ ಅಲ್ಲಿಂದ ಹೊರಟು 'ಮನೆಗೆ ಬರುವುದು' ಇದೆಯಲ್ಲ ಅದು ಬಲು ಇಷ್ಟ. ನಾನು ಆ ಕಾರಣಕ್ಕೇ ಅದೇ ಕಾಫಿ ಶಾಪಿಗೆ ನಿತ್ಯ ಕೆಲಸ ಮುಗಿಸಿ ಹೋಗುವುದು, ಅದೇ ದಾರಿಯಲ್ಲಿ ಮನೆಗೆ ವಾಪಸ್ ಬರುವುದು. ರಜಾ ಹಾಕಿದ ದಿನ ಹೊರತುಪಡಿಸಿ ಇನ್ನೆಲ್ಲಾ ವಾರದ ದಿನಗಳಲ್ಲಿ ಇದನ್ನು ಮಾತ್ರ ತಪ್ಪಿಸಿಲ್ಲ. ಮನೆಯಲ್ಲಿ ನೆಂಟರಿರಲಿ, ಇಷ್ಟರಿರಲಿ. ನಾನು ನಿತ್ಯ ಕೆಲಸ ಮುಗಿಸಿ ಮನೆಗೆ ಹೋಗಲೇಬೇಕು. ನಾನು ಆಫೀಸಿಗೆ ಒಂದೆರಡು ವಾರದ ದೀರ್ಘರಜಾ ತೆಗೆದುಕೊಂಡರೆ ಕಾಫಿ ಶಾಪ್‌ನವರಿಗೂ ಮೊದಲೇ ಹೇಳಿರಬೇಕು!''- ಡ್ಯಾನ್ ಮೈಲ್ಸ್‌ನ ಈ ಕಥೆ ಕೇಳಿ ನಾನು ಮತ್ತು ಅವನು ಏಕೋ ಹತ್ತು ನಿಮಿಷ ಹೊಟ್ಟೆ ನೋವಾಗುವಷ್ಟು ನಕ್ಕೆವು. ಆದರೆ ನನ್ನನ್ನು ಇದು ಬಹುವಾಗಿ ಕಾಡಿತು. ಕೆಲಸ ಮುಗಿಸಿ ಮನೆಗೆ ಹೋಗುವುದೆಂದರೆ ಏನೆಂಬುದನ್ನು ಕಲಿಸಿತು. ಆ ಕಥೆ ಕೇಳಿದಾಗಿನಿಂದ ಡ್ಯಾನ್ ಮೇಲಿನ ನನ್ನ ಗೌರವ ಇನ್ನಷ್ಟು ಹೆಚ್ಚಿತು.

ಕೆಲಸವು ಯಾವುದೇ ಇರಬಹುದು, ಮುಗಿಸಿ ಮನೆಯತ್ತ ಹೊರಡುವ ಆ ಕ್ಷಣ ನಮ್ಮ ಇಡೀ ದೇಹ-ಮನಸ್ಸು ನಿರಾಳವಾಗುತ್ತದೆ. ಆದರೆ ಒಂದನ್ನು ಗ್ರಹಿಸಿದ್ದೀರಾ? ಅಷ್ಟೆಲ್ಲಾ ಧಾವಂತ, ದೌಡಿನಿಂದ ಮನೆಗೆ ಬರಬೇಕೆಂದು- ಬಂದೇನೋ ತಲುಪುತ್ತೇವೆ. ಆದರೆ ತಲುಪಿದಾಗಿನ ಆ ನಿರಾಳತೆ ಅದೆಷ್ಟು ಸಮಯವಿರುತ್ತದೆ? ಬಾಗಿಲು ಮುಚ್ಚಿಕೊಳ್ಳುತ್ತಿದ್ದಂತೆ



ಮೊಬೈಲ್ ಹಿಡಿದುಕೊಳ್ಳುತ್ತೇವೆ, ಅಥವಾ ಟಿವಿ. ಮನೆಯೊಳಗೆ ಬರುತ್ತಿದ್ದಂತೆ ಮನೆಯಾಚೆಗೆ ನಮ್ಮನ್ನು ತೆರೆದುಕೊಳ್ಳುತ್ತೇವೆ. ಅಥವಾ ಅಡುಗೆ, ಮನೆಗೆಲಸ, ಮಗುವಿಗೆ ಹೋಂ ವರ್ಕ್, ಪಾತ್ರೆ ತೊಳೆಯುವುದು ಹೀಗೆ ಏನೋ ಒಂದು ನಮ್ಮನ್ನು ಆವರಿಸಿಕೊಂಡುಬಿಡುತ್ತದೆ. ಇನ್ನು ಕೆಲವರಿರುತ್ತಾರೆ. ಮನೆಗೆ ಬಂದಾಕ್ಷಣ ಬಬ್ರುರ್ಯ, ಪಂಜುರ್ಲಿ ಅವತಾರ ತಾಳುತ್ತಾರೆ. ಬಂದ ಅರ್ಧಗಂಟೆ ಕಂಡವರ ಮೇಲೆಲ್ಲ ಎಗರಾಡುತ್ತಾರೆ. ಗುರ್ ಅನ್ನುತ್ತಾರೆ. ಇನ್ನು ಕೆಲವರು ಮನೆಗೆ ಬಂದಾಕ್ಷಣ ತಮ್ಮ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡುಬಿಡುತ್ತಾರೆ. ಅವರಿಗೆ ಮನೆಯೊಳಗೂ ಮನೆಯ ಭಾವ ಹುಟ್ಟುವುದು ತಮ್ಮ ಕೋಣೆಯ ನಾಲ್ಕು ಗೋಡೆಯ ಮಧ್ಯೆ. ಒಟ್ಟಾರೆ, ಹೇಗೆಲ್ಲ ಹಂಬಲಿಸಿ ಮನೆಗೆ ಬರುವುದು, ಬಂದಿದ್ದೇನೆ ಎಂದು ಕೆಲವೇ ಕ್ಷಣಗಳಲ್ಲಿ ಮರೆಯಲು!!

ನಿತ್ಯ ಮನೆಗೆ ಬಂದು ತಲುಪುವ ಪ್ರಕ್ರಿಯೆ ಬದುಕಿನ ಯಾಂತ್ರಿಕತೆಯ ಭಾಗ ಎಂದೂ ಅನಿಸಬಹುದು. ಆದರೆ ಇದರಲ್ಲೊಂದು ಬ್ರಹ್ಮ ರಹಸ್ಯ ಅಡಗಿದೆ. ನಾವು ಪ್ರತಿ ಬಾರಿ ಮನೆಗೆ ಬಂದು ತಲುಪಿದಾಗಲೂ ಹೊರಜಗತ್ತಿನಲ್ಲಿ, ಬದುಕಿನಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿ ತಲುಪಿರುತ್ತೇವೆ. ಪ್ರಯಾಣ ಮುಗಿಸಿಯೇ ಮನೆಗೆ ಬಂದಿರುತ್ತೇವೆ. ಅದೆಲ್ಲಿಯೋ ಮುಟ್ಟಿರುತ್ತೇವೆ. ಕೇವಲ ಹುಟ್ಟಿದ ಹಬ್ಬ ಮಾತ್ರವಲ್ಲ, ನಿತ್ಯ ಮನೆಗೆ ಬಂದು ತಲುಪುವುದೂ ಒಂದೊಂದು ಪುಟ್ಟ ಮೈಲಿಗಲ್ಲು. ಈ ನೊಬೆಲ್ ಅಥವಾ ಗ್ರ್ಯಾಮಿ ಮೊದಲಾದ ಮಹೋನ್ನತವೆನಿಸಿಕೊಂಡ ಪ್ರಶಸ್ತಿ ಪಡೆದವರಿಗೆ arrived in life ಎನ್ನುತ್ತಾರೆ. ಸಾಧನೆಯ ಔನ್ನತ್ಯಕ್ಕೆ 'ಬಂದು ಮುಟ್ಟಿದ್ದಾನೆ' ಎಂಬರ್ಥದಲ್ಲಿ. ಆದರೆ ಅದು ಮಾತ್ರ ಸಾಧನೆಯಲ್ಲ, ಅದು ಅವನು ತಲುಪಿದ ಮನೆ. ಅವನ ಮನೆ. ಪ್ರತಿಯೊಬ್ಬನ ಬದುಕಿನಲ್ಲೂ ಅವನದೇ ಕೈ ಅಳತೆಯ ಸಾಧನೆಯಿರುತ್ತದೆ, ಮುಂದೆ ತಲುಪಬೇಕಾದ ಜಾಗವಿರುತ್ತದೆ. ಅದೇ ಸಮಯದಲ್ಲಿ ಬಂದು ಅಲ್ಲಿಗೆ ಮುಟ್ಟಿದ ಭಾವ ಕ್ಷಣಮಾತ್ರದಲ್ಲಿ ಮರೆತುಹೋಗಿರುತ್ತದೆ.

ಆದರೆ ಅವೆಲ್ಲವೂ ಕೇವಲ ಮುಂದಿನ ನಿಲ್ದಾಣಗಳು ಮಾತ್ರ. ಶಿಕ್ಷಕನಿಗೆ ಹೆಡ್ ಮಾಸ್ತರ್ ಆಗಬೇಕು. ಹೆಡ್ ಮಾಸ್ತರಿಗೆ ರಿಟೈರ್ ಆಗಬೇಕು. ಮ್ಯಾನೇಜರಿಗೆ ವೈಸ್ ಪ್ರೆಸಿಡೆಂಟ್ ಆಗಬೇಕು, ವಿಪಿಗೆ ಕಂಪನಿಯ ಸಿಇಒ ಆಗಬೇಕು. ಕ್ಷೌರಿಕನಿಗೆ ಇನ್ನೊಂದು ಅಂಗಡಿ ಇಡಬೇಕು, ಪ್ರೈಮರಿ ಶಾಲೆಯ ಮಗುವಿಗೆ ಹೈಸ್ಕೂಲ್ ತಲುಪುವಷ್ಟು ಬೆಳೆದುಬಿಡಬೇಕು, ಕಾಲೇಜಿನ ಯುವಕ-ಯುವತಿಗೆ ಕೆಲಸಕ್ಕೆ ಸೇರಬೇಕು, ದುಡಿಯಬೇಕು, ಸೈಟು, ಸ್ವಂತದ ಮನೆ, ಮಕ್ಕಳ ಮದುವೆಯಾಗಬೇಕು, ಮೊಮ್ಮಕ್ಕಳನ್ನು ನೋಡಬೇಕು ಹೀಗೆ. ಯಾವಯಾವಾಗ ಮುಂದಿನ ನಿಲ್ದಾಣ ತಲುಪುತ್ತೇವೋ, ಅಲ್ಲಿ ಬಂದು ತಲುಪುವುದು ಕೂಡ ತಲುಪಿದ್ದೇನೆ ಎಂಬುದನ್ನು ಮರೆಯಲು. ಬೌದ್ಧ ಧರ್ಮದಲ್ಲಿ ಇದನ್ನು 'ಭೂತದ ಹಸಿವು' ಎನ್ನುತ್ತಾರೆ. ಸನಾತನ ಧರ್ಮದಲ್ಲಿ 'ಮಾಯೆ'. ಯಾವುದೋ ಮಾರಣಾಂತಿಕ ರೋಗ ಬಂದಾಗ, ಬದುಕಿನ ಕೊನೆಯಲ್ಲಿ, ನಮ್ಮವರೇ ಯಾರೋ ತೀರಿಕೊಂಡಾಗ, ಸ್ಮಶಾನ ವೈರಾಗ್ಯ ಅನುಭವಕ್ಕೆ ಬಂದಾಗ ಮಾತ್ರ ನಮಗೆ ಯಾವುದು ಅವಶ್ಯಕವಿತ್ತೋ ಅದೆಲ್ಲವೂ ಇಲ್ಲಿಯೇ ನಮ್ಮೆದುರಿಗೆ, ಈ ಕ್ಷಣದಲ್ಲಿ ಇದೆ ಎಂದೆನಿಸುವುದು. ನಾನು ಇಷ್ಟೂ ಕಾಲ ಮನೆಯಲ್ಲಿಯೇ ಇದ್ದೆ, ಯಾವತ್ತೋ ಬಂದು ತಲುಪಿದ್ದೆ ಎಂಬುದು ಸ್ಪಷ್ಟವಾಗುವುದು.

ಬದುಕಿನಲ್ಲಿ 'ಬಂದುಮುಟ್ಟುವುದು', ಮನೆಗೆ ತಲುಪುವುದು ಎಂದರೆ ಅದು ಹಣ ಸಂಪಾದನೆಯ ಅಥವಾ ಯಾವುದೋ ಹುದ್ದೆ ಪಡೆಯುವ ವಿಷಯವಲ್ಲ. ಮನೆ ಎಂದರೇನು? ಎಲ್ಲಿ ನಾವು ನಾವಾಗಿಯೇ ಇರಬಹುದೋ ಅದುವೇ ಮನೆ. ಇಲ್ಲಿಯವರೆಗೆ ಬಂದು ಮುಟ್ಟಿದವನಿಗೆ ತಲುಪಿದ್ದೇನೆ ಅನಿಸದಿದ್ದರೆ ಅವನಿಗೆ ಅದೆಲ್ಲಿ ಹೋದರೂ 'ಬಂದು ಮುಟ್ಟಿದ್ದೇನೆ' ಎಂದೆನಿಸುವುದಿಲ್ಲ. ಕೊನೆಯಲ್ಲಿ ಬೂದಿಯಾದಾಗ, ಮಣ್ಣುಸೇರಿದಾಗಲೇ ಅಂಥವರು 'ಹೋಗಿಮುಟ್ಟುವುದು'. ನೀವು ಯಾವುದೋ ಒಂದು ಊರಿಗೆ ಹೋಗಿ ಅಲ್ಲಿನ ಲಾಡ್ಜ್ ಒಂದರಲ್ಲಿ ಎರಡು ವಾರದಿಂದ ಉಳಿದುಕೊಂಡಿದ್ದೀರಿ ಎಂದುಕೊಳ್ಳಿ, ನಿತ್ಯ ಹೊರಗಡೆ ಓಡಾಡಿ, ಸುಸ್ತಾಗಿ ವಾಪಸ್ ಬಂದರೆ ಆ ಲಾಡ್ಜಿನ ರೂಮು ಕೂಡ ಮನೆಗೆ ಬಂದು ತಲುಪಿದ ಭಾವ ಕೊಡಬಲ್ಲದು. ಹೆಚ್ಚಿನವರ ಬದುಕು ಲಾಡ್ಜಿನಿಂದ ಲಾಡ್ಜಿಗೆ. ಭಾರದ ಲಗೇಜ್ ಹೊತ್ತು ಇಲ್ಲಿಂದಲ್ಲಿಗೆ, ಅಲ್ಲಿಂದಿಲ್ಲಿಗೆ. ಅವರೆಂದೂ ಮನೆಗೆ ಬಂದೇ ಮುಟ್ಟುವುದಿಲ್ಲ. ಹಾಗಾಗಿ ಅವರ ಭಾರ ಹೆಗಲಿನಿಂದ ಇಳಿಯುವುದೇ ಇಲ್ಲ.

ಕೆಲವರಿದ್ದಾರೆ. ಅದೇನೋ ಒಂದು ಘಟಿಸಿದ ನಂತರ ನನಗೆ ಬೇಕಾದದ್ದನ್ನು ಮಾಡುತ್ತೇನೆ ಎನ್ನುತ್ತ ಬದುಕುವವರು. ಒಬ್ಬ ಪರಿಚಯದವರಿದ್ದಾರೆ. ಅವರು ಮೂರ್ನಾಲ್ಕು ವರ್ಷದ ಹಿಂದೆ ನನ್ನ ಬಳಿ ಬಂದು ''ನೀವು ಲೇಖನ ಬರೆಯುತ್ತೀರಂತೆ. ನನಗೂ ಕನ್ನಡ ಓದುವುದು ಖುಷಿ. ಆದರೆ ಪುರುಸೊತ್ತೇ ಆಗುವುದಿಲ್ಲ ನೋಡಿ. ಮುಂದಿನ ವರ್ಷ ರಿಟೈರ್ ಆಗುತ್ತಿದ್ದೇನೆ. ಆಗುತ್ತಿದ್ದಂತೆ ನಾನು ಓದಿನಲ್ಲಿ ತೊಡಗಿಸಿಕೊಳ್ಳುತ್ತೇನೆ'' ಎಂದರು. ಇವರೆಲ್ಲ ರಿಟೈರ್ ಆದಮೇಲೆ ಮಡುಕುವವರು. ಅವರು ರಿಟೈರ್ ಆಗಿ ಎರಡು ವರ್ಷವಾದರೂ, ಕಾಳು ಅಕ್ಷರವನ್ನೂ ಓದಿದ ಕುರುಹುಗಳಿಲ್ಲ, ಈಗಲೂ ಅವರು ಬ್ಯುಸಿ. 'ಮಾಡಬೇಕು' ಎಂದೇ ಓಡಾಡಿಕೊಂಡಿದ್ದಾರೆ. ಈ ನಿರಂತರ ಪುರುಸೊತ್ತಿಲ್ಲದಂತೆ ಬದುಕುವವರು ಎಂದೂ ಎಲ್ಲಿಗೂ ಬಂದು ತಲುಪುವುದಿಲ್ಲ. ಅಂಥವರು ಅಲ್ಲಿಯೂ ಇರುವುದಿಲ್ಲ, ಹೊರಡುವುದೂ ಇಲ್ಲ, ಹಾಗಾಗಿ ಎಲ್ಲಿಗೂ ಹೋಗಿ ಮುಟ್ಟುವುದೂ ಇಲ್ಲ, ಹೋಗಬೇಕು ಎನ್ನುತ್ತಲೇ ಇರುತ್ತಾರೆ, ಆಮೇಲೆ ಹೋಗಿಬಿಡುತ್ತಾರೆ.

ಮುಲ್ಲಾ ನಸ್ರುದ್ದೀನ್‌ನ ಈ ಕಥೆ ಜನಪ್ರಿಯ, ಕೇಳಿರಬಹುದು. ಒಮ್ಮೆ ಮುಲ್ಲಾ ನಸ್ರುದ್ದೀನ್ ಒಂದು ರಾತ್ರಿ ಮನೆಯಿಂದ ಸ್ವಲ್ಪ ದೂರದಲ್ಲಿರುವ ಬೀದಿದೀಪದ ಬುಡದಲ್ಲಿ ಏನನ್ನೋ ಹುಡುಕುತ್ತಿದ್ದಂತೆ. ಸ್ವಲ್ಪ ಹೊತ್ತು ಅವನನ್ನು ಕಂಡ ಊರಿನ ನಾಲ್ಕಾರು ಮಂದಿ ಬಂದು, ''ಮುಲ್ಲಾ ಇಲ್ಲೇನು ಹುಡುಕುತ್ತಿದ್ದೀಯಾ?'' ಎಂದು ಕೇಳಿದ್ದಕ್ಕೆ ಮುಲ್ಲಾ ''ಏನಿಲ್ಲ, ಮನೆಯ ಬೀಗದಕೈ ಕಳೆದುಹೋಗಿದೆ, ಹುಡುಕುತ್ತಿದ್ದೇನೆ' ಎಂದನಂತೆ. ಮುಲ್ಲಾ, ''ಎಲ್ಲಿ ಕಳೆದುಕೊಂಡೆ ಕೀಲಿಯನ್ನ? ಇಲ್ಲಿಯೇ ಅದು ಕಳೆದದ್ದು ಹೌದಾ?'' ಎಂದು ಜನರು ಕೇಳಿದ್ದಕ್ಕೆ ಮುಲ್ಲಾ ''ಇಲ್ಲ, ಕೀಲಿ ಕಳೆದಿರುವುದು ಮನೆಯೊಳಗೆ. ಆದರೆ ಮನೆಯಲ್ಲಿ ದೀಪವಿಲ್ಲವಲ್ಲ, ಇಲ್ಲಿ ಬೆಳಕಿದೆ ಹಾಗಾಗಿ ಇಲ್ಲಿ ಹುಡುಕುತ್ತಿದ್ದೇನೆ'' ಎಂದನಂತೆ. ನಮ್ಮಲ್ಲಿಯೂ ಹಲವರ ಕಥೆ ಇದುವೆ. ಮನೆಯ ಕೀಲಿಯೇ ಕಳೆದಿದೆ, ಕೀಲಿ ಮನೆಯಲ್ಲೇ ಇದೆ, ಹುಡುಕಾಟ ಮಾತ್ರ ಬೀದಿಯಲ್ಲಿ, ಹೊರಗೆ.

ಹಾಗಂತ ಬದುಕೆಂದರೆ ಯಾವತ್ತೂ ನಾಜೂಕಲ್ಲ. ದುಃಖ, ಅನಾರೋಗ್ಯ ಅಪ್ಪಳಿಸುತ್ತವೆ, ಸಂಬಂಧಗಳು ಒಡೆಯುತ್ತವೆ, ಕನಸುಗಳು ನುಚ್ಚು ನೂರಾಗುತ್ತವೆ. ಬಂದು ಮುಟ್ಟುವುದು ಎಂದರೆ ಇದೆಲ್ಲ ಕಷ್ಟ ಕಾರ್ಪಣ್ಯಗಳಿಲ್ಲದ ಬದುಕು ಮಾತ್ರ ಗುರಿ ಎಂದಲ್ಲ. ನೋವಿನಲ್ಲಿ ಎರಡು ವಿಧ. ಅದನ್ನು ಬುದ್ಧ ಎರಡು ಬಾಣಕ್ಕೆ ಹೋಲಿಸುತ್ತಾನೆ. ಮೊದಲನೆಯದು ಬದುಕು ಕೊಡುವ ನೋವಿನ ಬಾಣ. ಎರಡನೆಯದು ನಮಗೆ ನಾವೇ ಕೊಟ್ಟುಕೊಳ್ಳುವ ನೋವು. ನಮ್ಮ ಅಹಂ, ನಿಂದನೆ, ಅಸಮಾಧಾನ ಇತ್ಯಾದಿಗಳಿಂದ. ಬದುಕಿನಲ್ಲಿ ಬಂದುಮುಟ್ಟುವುದೆಂದರೆ ದುಃಖವೇ ಇಲ್ಲದ ಬದುಕನ್ನು ನಡೆಸುವುದು ಎಂದಲ್ಲ, ಬದುಕು ಕೊಡುವ ದುಃಖ, ಕಷ್ಟವನ್ನು ಗುರುತಿಸುವುದು, ಗೌರವದಿಂದ ಅನುಭವಿಸುವುದು, ಆ ಕ್ಷಣವನ್ನೂ ತಲುಪಿದ್ದೇನೆ ಎಂಬ ಭಾವದಲ್ಲಿಯೇ ಸ್ವೀಕರಿಸುವುದು. ಅಂತರ್ಯದಲ್ಲಿನ ನಿಶ್ಚಲತೆ.

ನಾವು ಸಾಮಾನ್ಯವಾಗಿ ಇವತ್ತೇನು ಮಾಡಲಾಗಲಿಲ್ಲ? ನಾಳೆ, ಮುಂದೆ ಏನು ಮಾಡಬೇಕು? ಎಂಬ ಪ್ರಶ್ನೆಗಳನ್ನೇ ಕೇಳಿಕೊಳ್ಳುತ್ತಿರುತ್ತೇವೆ. ಏನೇ ಮಾಡಿದರೂ ಮುಂದೇನೆಂಬ ಪ್ರಶ್ನೆ. ಬದಲು 'ಇವತ್ತು ಎಲ್ಲಿಗೆ ಬಂದು ತಲುಪಿದೆ' ಎಂದು ಪ್ರಶ್ನಿಸಿಕೊಳ್ಳುವುದೇ ಇಲ್ಲ, ಆದರೆ ಆಗೀಗ ಈ ಪ್ರಶ್ನೆಯನ್ನು ಕೇಳಿಕೊಂಡಾಗ ಮಾತ್ರ 'ನಾವು ಎಲ್ಲಿಗೆ ಬಂದು ಮುಟ್ಟಿದ್ದೇವೆ' ಎಂಬುದರ ಅನುಭವವಾಗುವುದು. ಬಂದು ಮುಟ್ಟಿರುವುದು ಅಸಲಿ ಮನೆಗೇ ಇರಬಹುದು, ಅಥವಾ ಬದುಕಿನ ಮುಂದಿನ ನಿಲ್ದಾಣಕ್ಕಿರಬಹುದು. ಮುಂದೆಲ್ಲಿ ಎಂಬ ಪ್ರಶ್ನೆ ನಿರಂತರ ಇರಬೇಕು, ಅದು ಇದ್ದೇ ಇರುತ್ತದೆ. ಆದರೆ ಇದೆಲ್ಲದರ ನಡುವೆ 'ಈಗ ಎಲ್ಲಿಗೆ ಬಂದು ಮುಟ್ಟಿದೆ' ಎಂಬ ಪ್ರಶ್ನೆ ಮಾತ್ರ ಬದುಕಿನಲ್ಲಿ ಸಮಾಧಾನ ಕೊಡಬಲ್ಲದು. ಆ ಪ್ರಶ್ನೆಯನ್ನು ನಿರಂತರ ನಮಗೆ ನಾವೇ ಕೇಳುತ್ತಿದ್ದರೆ ಕ್ರಮೇಣ ಮನೆಗೆ ಬಂದ ಭಾವ ನಮ್ಮೊಳಗೆ ನಿರಂತರ ಜಾಗೃತವಾಗಿರುತ್ತದೆ. ನಾವಿದ್ದಲ್ಲಿಯೇ, ನಾವಿದ್ದ ಸ್ಥಿತಿಯೇ ಮನೆಯಾಗಿ ನಮ್ಮೊಳಗೇ ಮನೆ ಸಂಭವಿಸುತ್ತದೆ. ಎನ್ನ ಕಾಲೇ ಕಂಬ, ದೇಹವೇ ದೇಗುಲ ಅದಾಗುವುದು ಆಗ.

ಹಮ್, ಅಂದಹಾಗೆ ನೀವು ಎಲ್ಲಿಗೆ ಬಂದು ಮುಟ್ಟಿದ್ದೀರಿ? ಮನೆಗೆ ಬಂದು ತಲುಪಿದಿರೋ? ಅಥವಾ ಮನೆಯಲ್ಲೇ ಇದ್ದೀರೋ? ಮನೆ ಮುಟ್ಟಿದಾಗ ಮಾತ್ರ ಹೊರಜಗತ್ತಿನ ಗದ್ದಲಗಳೆಲ್ಲ ಗೌಣವಾಗುವುದು, ಶಾಂತವಾಗುವುದು. ಮನೆಗೆ ಬಂದು ಮುಟ್ಟಿದಾಗ ಮಾತ್ರ ಬೆನ್ನ ಮೇಲಿನ ಎಲ್ಲ ಭಾರವನ್ನು ಕೆಳಕ್ಕಿಳಿಸಲಾಗುವುದು. ಮನೆಗೆ ಬಂದು ಮುಟ್ಟಿದ ಮೇಲೆ ಮಾತ್ರ ಮನೆಯಲ್ಲಿದ್ದೇನೆ ಎಂದೆನಿಸುವುದು. ಯಾರದೋ ಮನೆಯಲ್ಲ, ನಮ್ಮ ಮನೆ ಮಾತ್ರ ನಮ್ಮ ಮನೆ. ಅದು ಮಾತ್ರ ಸ್ವಂತದ್ದು, ಸ್ನೇಹಿತನ, ಸಹವರ್ತಿಯ, ಸಂಬಂಧಿಯ ಮನೆ ನಮ್ಮದಲ್ಲ, ಅವನು ನಮ್ಮ ಮನೆಗೆ ಬಂದರೆ ಅದು ಅವನ ಮನೆಯಾಗುವುದಿಲ್ಲ. ಎಲ್ಲರೂ ಹೋಗಬೇಕಾಗಿರುವುದು, ತಲುಪಬೇಕಾಗಿರುವುದು, ಈಗಾಗಲೇ ತಲುಪಿರುವುದು ಅವರವರ ಸ್ವಂತದ ಮನೆಗೆ. ಮನೆಯಲ್ಲೇ ಇದ್ದೀರಿ.

40 ಲಕ್ಷಕ್ಕೂ ಹೆಚ್ಚು ವ್ಯಾಪಾರ ಸಣ್ಣದೇ? ಯುಪಿಐ, ಜಿಎಸ್‌ಟಿ ಬೇಡವೇ?!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಈ ಗೂಗಲ್ ಪೇ, ಫೋನ್ ಪೇ, ಪೇಟಿಎಂ ಎಷ್ಟು ಜನಪ್ರಿಯವಾಗಿವೆ ಎಂದರೆ, ಕೈಯಲ್ಲಿ ಮೊಬೈಲ್ ಇದ್ದರೆ ಸಾಕು, ಏನನ್ನಾದರೂ ಖರೀದಿಸಬಹುದು. ಬಿಎಂಟಿಸಿ ಬಸ್ಸಿನಲ್ಲೂ ಕಂಡಕ್ಟರ್ ಈಗ ಚಿಲ್ಲರೆಗೆ ಜಗಳವಾಡುವ ದೃಶ್ಯ ಕಾಣಿಸುತ್ತಿಲ್ಲ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆಯಬಹುದು. ಆದರೆ ಈಗ ಕೆಲವು ಮಂದಿ ತಮ್ಮ ಅಂಗಡಿಯಲ್ಲಿ 'ಯುಪಿಐ ಬೇಡ, ನಗದು ಕೊಡಿ' ಎಂಬ ಬೋರ್ಡ್ ಹಾಕಿ ನಿಂತರೆ ಯಾರಿಗೆ ನಷ್ಟ? ಸ್ವತಃ ಅವರಿಗೇ ಅಲ್ಲವೇ? ಯುಪಿಐ ಇದ್ದಲ್ಲಿಗೆ ಆ ಗ್ರಾಹಕರು ಹೋಗುತ್ತಾರೆ ಅಷ್ಟೇ.

ರಾಜ್ಯ ವಾಣಿಜ್ಯ ಇಲಾಖೆ ಸಾವಿರಾರು ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ಜಾರಿಗೊಳಿಸಿರುವುದು ಸಂಚಲನ ಮೂಡಿಸಿದೆ. ಬೇಕರಿ, ಕಾಂಡಿಮೆಂಟ್ಸ್‌ಗಳಿಗೆ, ಚಹಾ ಮಾರಾಟ ಮಾಡುವವರಿಗೆ 20-30 ಲಕ್ಷ ಕಟ್ಟಿ ಎಂದರೆ ಪಾಪ, ಅವರು ಎಲ್ಲಿಂದ ತಂದಾರು? ಇದು ಅನ್ಯಾಯವಲ್ಲವೇ ಎಂಬ ಕಾಳಜಿ ಸಹಜ. ಆದರೆ ವಾಸ್ತವವೇನು?

ಯುಪಿಐ ಮೂಲಕ ನಡೆದಿರುವ ಹಣಕಾಸು ವರ್ಗಾವಣೆಗಳ ಆಧಾರದಲ್ಲಿ ಇಲಾಖೆ ನೋಟಿಸ್ ಕಳಿಸಿದ್ದು, 40 ಲಕ್ಷ ರುಪಾಯಿಗೂ ಹೆಚ್ಚು ಹಣದ ವರ್ಗಾವಣೆಗಳ ಬಗ್ಗೆ ವಿವರಗಳನ್ನು ಕೋರಿದೆ. ಇದನ್ನು ವಿರೋಧಿಸಿ ವರ್ತಕರು ಅಂಗಡಿಗಳನ್ನು ಮುಚ್ಚಿ ಬಂದ್ ನಡೆಸುವ ಬೆದರಿಕೆ ಹಾಕಿದ್ದಾರೆ. ಆದರೆ ಇದು ಅಂಥ ಪರಿಣಾಮಕಾರಿಯೂ ಆಗದು. ಏಕೆಂದರೆ ಯುಪಿಐ ಈಗ ಪ್ರತಿ ದಿನವೂ 65 ಕೋಟಿಗೂ ಹೆಚ್ಚು ಹಣಕಾಸು ವರ್ಗಾವಣೆಗಳನ್ನು ನಿರ್ವಹಿಸುವ ಮೂಲಕ ವೀಸಾವನ್ನೂ ಹಿಂದಿಕ್ಕಿ, ಜಗತ್ತಿನಲ್ಲೇ ಮುಂಚೂಣಿಯಲ್ಲಿರುವ ರಿಯಲ್ ಟೈಮ್ ಪೇಮೆಂಟ್ ಸಿಸ್ಟಮ್ ಆಗಿದೆ. ಮತ್ತೆ ಹಳೆಯ ನಗದು ವ್ಯವಹಾರಕ್ಕೆ ಮರಳುವುದು ಕನಸಿನ ಮಾತಷ್ಟೇ. ಈಗಾಗಲೇ ಇಷ್ಟೊಂದು ಅನುಕೂಲಕರವಾಗಿರುವ ಯುಪಿಐ ಬಳಕೆ ಮುಂದಿನ 10 ವರ್ಷಗಳಲ್ಲಿ ಎಷ್ಟೊಂದು ವ್ಯಾಪಕವಾಗಬಹುದು ಎಂದು ಆಲೋಚಿಸಿ. ಆಗ ಅಸಂಘಟಿತ ವಲಯದ ಅಸಂಖ್ಯಾತ ವ್ಯಾಪಾರಿಗಳ ಲೆಕ್ಕಗಳು ಸಿಗಲಿವೆ. ಜಿಎಸ್‌ಟಿಯಿಂದ ತಪ್ಪಿಸಿಕೊಂಡರೂ, ಆದಾಯ ತೆರಿಗೆ ಇಲಾಖೆ ಪತ್ತೆ ಹಚ್ಚಬಹುದು.

ಯುಪಿಐ ಕ್ರಾಂತಿ ಸಂಭವಿಸುವುದಕ್ಕೆ ಮುನ್ನ ಭಾರತದಲ್ಲಿ ನಗದು ವ್ಯವಹಾರ 'ಕಿಂಗ್' ಆಗಿತ್ತು. ಹೀಗಾಗಿ ಯಾರ ಬಳಿ ಎಷ್ಟು ಆದಾಯ ಇದೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟವಾಗುತ್ತಿತ್ತು. ಈಗಲೂ ಕ್ಯಾಶ್ ವ್ಯವಹಾರವನ್ನೇ ಹೆಚ್ಚು ನಡೆಸುವವರ ಆದಾಯ ಮೂಲ ಪತ್ತೆ ಹಚ್ಚುವುದು ಕಷ್ಟ. ಆದರೆ ಭವಿಷ್ಯದ ದಿನಗಳಲ್ಲಿ ಎಲ್ಲಾದರೊಂದು ಕಡೆ ಮಾಡುವ ಖರ್ಚುಗಳನ್ನು ಸರಕಾರಿ ಇಲಾಖೆಗಳು ಸುಲಭವಾಗಿ ಪತ್ತೆ ಹಚ್ಚಲಿವೆ. ಈಗಾಗಲೇ ಉದ್ಯೋಗಿಗಳು ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ವೇಳೆಯಲ್ಲಿ, ಫಾರ್ಮ್ 16 ಇಲ್ಲದಿದ್ದರೂ, ಪರ್ವಾಗಿಲ್ಲ ಎನ್ನುತ್ತಾರೆ ಚಾರ್ಟರ್ಡ್ ಅಕೌಂಟೆಂಟ್‌ಗಳು. ಏಕೆಂದರೆ ನಿಮ್ಮ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಲ್ಲಿ ಆದಾಯದ ಲೆಕ್ಕ ಸಿಗುತ್ತದೆ. ಷೇರುಗಳ ಕೊಡು-ಕೊಳ್ಳುವಿಕೆ, ಪ್ರಾಪರ್ಟಿಗಳ ಖರೀದಿ-ಮಾರಾಟ, ಚಿನ್ನದ ಶಾಪಿಂಗ್, ಹೀಗೆ ಎಲ್ಲ ಕಡೆಯಲ್ಲೂ ನಗದು ಬಳಕೆಗೆ ಮಿತಿಯನ್ನು ವಿಧಿಸಲಾಗುತ್ತಿದೆ. ಉದಾಹರಣೆಗೆ ನೀವೊಂದು ಸೈಟ್ ಅಥವಾ ಫ್ಲಾಟ್ ಅನ್ನು, ಇಲ್ಲವೇ ಬಂಗಾರವನ್ನು ಖರೀದಿಸುತ್ತೀರಿ ಎಂದು ಭಾವಿಸಿ. 2 ಲಕ್ಷ ರುಪಾಯಿಗಿಂತ ಹೆಚ್ಚು ಮೊತ್ತವನ್ನು ನಗದು ರೂಪದಲ್ಲಿ ನೀಡಲು ಸಾಧ್ಯವಿಲ್ಲ. ಒಂದೋ ಚೆಕ್, ಬ್ಯಾಂಕ್ ಡ್ರಾಫ್ಟ್ ಅಥವಾ ಆನ್‌ಲೈನ್ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಅಕೌಂಟ್‌ನಿಂದ ವರ್ಗಾಯಿಸಬೇಕು. ಹೀಗಾಗಿ ತೆರಿಗೆಯಿಂದ ನುಣುಚಿಕೊಳ್ಳಲಾಗದು. 10 ಲಕ್ಷ ರುಪಾಯಿಗಿಂತ ಹೆಚ್ಚಿನ ಪ್ರಾಪರ್ಟಿ ಖರೀದಿಸುವಾಗ ನಿಮ್ಮ ಪ್ಯಾನ್ ವಿವರವನ್ನು ನಮೂದಿಸಲೇಬೇಕು.

ಭಾರತದಲ್ಲಿ ರಾತ್ರೋರಾತ್ರಿ ಈ ಬೆಳವಣಿಗೆ ಆಗಿದ್ದಲ್ಲ. ಹಾಗಂತ ತೀರಾ ಹಳೆ ಕಾಲದ್ದೂ ಅಲ್ಲ. ದೇಶದಲ್ಲಿ ಯುನಿಫೈಡ್ ಪೇಮೆಂಟ್ ಇಂಟರ್ಫೇಸ್ (ಯುಪಿಐ) ಮೊದಲ ಬಾರಿಗೆ 2016ರಲ್ಲಿ ಪರಿಚಯವಾಯಿತು. ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಇದರ ನೇತೃತ್ವ ವಹಿಸಿದೆ. ಬಳಿಕ ಬ್ಯಾಂಕುಗಳು ಯುಪಿಐ ಆಧಾರಿತ ಅಪ್ಲಿಕೇಶನ್‌ಗಳನ್ನು ಗೂಗಲ್ ಪ್ಲೇ ಸ್ಟೋರ್‌ಗಳಲ್ಲಿ ಅಪ್‌ಲೋಡ್ ಮಾಡಿದವು. 2010ರಲ್ಲಿ ಪೇಟಿಎಂ, 2015ರಲ್ಲಿ ಫೋನ್ ಪೇ, 2016ರಲ್ಲಿ 'ಭೀಮ್' (ಭಾರತ್ ಇಂಟರ್‌ಫೇಸ್ ಫಾರ್ ಮನಿ), 2017ರಲ್ಲಿ ಗೂಗಲ್ ಪೇ ಬಿಡುಗಡೆಯಾಗಿ, ಜನರಿಗೆ ಹಣಕಾಸು ವರ್ಗಾವಣೆಗಳನ್ನು ಸುಲಭವಾಗಿಸಿದವು. ಇದು ಕಳೆದ ದಶಕದ ಅತಿ ದೊಡ್ಡ ಕ್ರಾಂತಿಗಳಲ್ಲೊಂದು ಎಂದರೆ ಅತಿಶಯವಲ್ಲ. ಹತ್ತು ವರ್ಷದ ಹಿಂದೆ ಇದನ್ನು ಯೋಚಿಸಲೂ ಸಾಧ್ಯವಿರಲಿಲ್ಲ!

ಭಾರತವು ಕಳೆದೊಂದು ದಶಕದಲ್ಲಿ ನಗದು ಬಳಕೆಯ ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ಡಿಜಿಟಲ್ ಪೇಮೆಂಟ್ ಹೆಚ್ಚಿಸಲು ನೀತಿಗಳನ್ನು ರಚಿಸಿದೆ. 2016ರ ಡಿಮಾನಿಟೈಸೇಶನ್‌ನ ಉದ್ದೇಶಗಳಲ್ಲಿ ಡಿಜಿಟಲ್ ಪೇಮೆಂಟ್‌ಗಳನ್ನು ಪ್ರೋತ್ಸಾಹಿಸುವುದೂ ಸೇರಿತ್ತು. ಈಗಲೂ ಕೆಲ ವ್ಯಾಪಾರಿಗಳು ಒಂದಕ್ಕಿಂತ ಹೆಚ್ಚು ಯುಪಿಐಗಳು, ಸಂಬಂಧಿಕರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ಬಳಸುವ ಮೂಲಕ ಜಿಎಸ್‌ಟಿಯನ್ನು ತಪ್ಪಿಸಲು ಯತ್ನಿಸುತ್ತಾರೆ. ಆದರೆ ಭವಿಷ್ಯದ ದಿನಗಳಲ್ಲಿ ಇದಕ್ಕೂ ಕಡಿವಾಣ ಬೀಳುವ ನಿರೀಕ್ಷೆ ಇದೆ.

ಹೀಗಾಗಿ ವೃಥಾ ತೊಂದರೆಗೆ ಸಿಲುಕುವುದಕ್ಕಿಂತ, 40 ಲಕ್ಷ ರುಪಾಯಿಗಿಂತ ಹೆಚ್ಚಿನ ವಹಿವಾಟು ಆದಾಗ ಜಿಎಸ್‌ಟಿ ಅಡಿಯಲ್ಲಿ ನೋಂದಣಿಯಾಗಿ ಸಂಘಟಿತ ಚೌಕಟ್ಟಿನಲ್ಲಿ ಮುಂದುವರಿಯುವುದು ಉತ್ತಮವಲ್ಲವೇ ಎಂಬ ಆತ್ಮಾವಲೋಕನವನ್ನು ವ್ಯಾಪಾರಿಗಳು ಮಾಡಿಕೊಳ್ಳಬೇಕಾಗಿದೆ. ಅಷ್ಟಕ್ಕೂ 40 ಲಕ್ಷಕ್ಕೂ ಹೆಚ್ಚು ವ್ಯಾಪಾರವೇ ಆಗಿರಲಿ, ಹಣಕಾಸು ವರ್ಗಾವಣೆಯೇ ಆಗಿರಲಿ, ಅದು ಸಣ್ಣದೇ? ಖಂಡಿತಾ ಅಲ್ಲ, ಆದ್ದರಿಂದ ಯುಪಿಐ, ಜಿಎಸ್‌ಟಿ ಬೇಡ ಎಂದರೆ ಅದು ಹೇಗೆ ಸಾಧ್ಯ?

ರಾಜ್ಯ ವಾಣಿಜ್ಯ ಇಲಾಖೆ ಏಕೆ ಸಾವಿರಾರು ವ್ಯಾಪಾರಿಗಳಿಗೆ ನೋಟಿಸ್ ಕಳಿಸಿದೆ? ಇದು ತೆರಿಗೆ ಭಯೋತ್ಪಾದನೆಯಲ್ಲವೇ? ಎಂಬ ವಾದವಿದೆ. ಆದರೆ ಅದು ಚರ್ಚೆಗೆ ಸೀಮಿತ ಪ್ರಶ್ನೆಯಾಗಬಹುದು. ನೋಟಿಸ್ ಪಡೆದಿರುವವರು ಏನು ಮಾಡಬೇಕು? ಎಂಬ ಅರಿವು ಈಗ ನಿರ್ಣಾಯಕ. ಮೊದಲನೆಯದಾಗಿ, ನೋಟಿಸ್ ಕಂಡು ಟೆಲಿಗ್ರಾಂ ಕಂಡ ಹಾಗೆ ಭಯಪಡಬೇಕಿಲ್ಲ. ಇದು ಯುಪಿಐ ವರ್ಗಾವಣೆ ಅಧರಿಸಿ ಇಷ್ಟು ಜಿಎಸ್‌ಟಿ ಕಟ್ಟಬೇಕು ಎಂದು ಕೇಳಿರುವ ನೋಟಿಸ್ ಅಷ್ಟೇ. ನೀವು ಒಂದು ವೇಳೆ ಕಲ್ಲಂಗಡಿ, ಬಾಳೆಹಣ್ಣು, ಮಾವು, ಸೀಬೆ ಕಾಯಿ, ತರಕಾರಿ ಮಾರಿದ್ದರೆ, ಒಂದು ಕೋಟಿ ವ್ಯವಹಾರವನ್ನು ಯುಪಿಐನಲ್ಲಿ ಮಾಡಿದ್ದರೂ,



ಜಿಎಸ್‌ಟಿ ಅನ್ವಯಿಸುವುದಿಲ್ಲ. ಜಿಎಸ್‌ಟಿಯಲ್ಲೂ ಶೇಕಡಾ 5, ಶೇ.12, ಶೇ.18, ಶೇ.28 ಎಂಬ ಸ್ತರಗಳಿವೆ. ನೀವು ಮಾರಾಟ ಮಾಡಿದ ಉತ್ಪನ್ನ ಯಾವ ಕೆಟಗರಿಯಲ್ಲಿ ಇದೆ ಎಂಬುದನ್ನು ತಿಳಿಸಬಹುದು. ಅಥವಾ ವ್ಯಾಪಾರೇತರ ಸಾಲದ ವರ್ಗಾವಣೆಯಾಗಿದ್ದರೆ, ಅದರ ವಿವರಗಳನ್ನು ನೀಡಿದರೆ ಸಾಕು. ವಿವರಣೆಯನ್ನು ನೀಡಲು ಕಾಲಾವಕಾಶವೂ ಇದೆ.

ಎರಡನೆಯದಾಗಿ, 40 ಲಕ್ಷ ರು. ಮೀರಿದ ಹಣಕಾಸು ವರ್ಗಾವಣೆಯಾಗಲಿ, ವಹಿವಾಟಾಗಲಿ ಸಣ್ಣದಲ್ಲ. ಹೀಗಾಗಿಯೇ ಜಿಎಸ್‌ಟಿ ವ್ಯವಸ್ಥೆಯಲ್ಲಿ ವಸ್ತುಗಳ ಮಾರಾಟಕ್ಕೆ ಸಂಬಂಧಿಸಿ ವಾರ್ಷಿಕ 40 ಲಕ್ಷ ರು. ದಾಟಿದ ವ್ಯವಹಾರಕ್ಕೆ ಶೇಕಡಾ 5ರಿಂದ 28ರ ತನಕ ತೆರಿಗೆ ಇರುತ್ತದೆ. ಸೇವೆಗಳ ಮಾರಾಟಗಾರರಿಗೆ 20 ಲಕ್ಷ ರುಪಾಯಿ ದಾಟಿದ ಬಳಿಕ ತೆರಿಗೆ ಇರುತ್ತದೆ. ಸೇವೆಗಳ ಮಾರಾಟ ಎಂದರೆ, ಅಕೌಂಟಿಂಗ್, ಕನ್ಸಲ್ಟೆನ್ಸಿ, ಸಾರಿಗೆ ಇತ್ಯಾದಿಗಳು ಸೇವೆಗಳಲ್ಲಿ ಬರುತ್ತವೆ.

ಬೀದಿ ಬದಿಯಲ್ಲಿ ಹಣ್ಣು-ತರಕಾರಿಗಳನ್ನು ಮಾರಾಟ ಮಾಡುವವರಿಗೆ ಜಿಎಸ್‌ಟಿ ಬರುತ್ತದೆಯೇ? ಎಂಬ ಪ್ರಶ್ನೆಯನ್ನು ಅನೇಕ ಮಂದಿ ಕೇಳುತ್ತಿದ್ದಾರೆ. ಬೀದಿ ಬದಿಯಲ್ಲಿ ಮಾರಾಟ ಮಾಡುವ ಹಲವಾರು ಹಣ್ಣು-ತರಕಾರಿಗಳಿಗೆ ಜಿಎಸ್‌ಟಿ ಇರುವುದಿಲ್ಲ. ಅಂಥ ತರಕಾರಿ ಮತ್ತು ಹಣ್ಣುಗಳ ಮೂಲಕ ನೀವು ಲಕ್ಷಗಟ್ಟಲೆ ಅಥವಾ ಕೋಟಿ ರುಪಾಯಿ ಆದಾಯ ಗಳಿಸಿದರೂ. ಅದಕ್ಕೆ ಜಿಎಸ್‌ಟಿ ಅನ್ವಯವಾಗುವುದಿಲ್ಲ. ತಾಜಾ ತರಕಾರಿಗಳು, ಆಲೂಗಡ್ಡೆ, ಟೊಮೆಟೊ, ಈರುಳ್ಳಿ, ಬೆಳ್ಳುಳ್ಳಿ, ಕ್ಯಾಬೇಜ್, ಕ್ಯಾರೆಟ್, ಬೀಟ್‌ರೂಟ್, ತೆಂಗಿನಕಾಯಿ, ಆಪಲ್, ಚೆರ್ರಿ, ಪೀಚ್, ಬಾಳೆ ಹಣ್ಣು, ಮಾವಿನ ಹಣ್ಣು , ಪೈನಾಪಲ್, ಸೀಬೆಕಾಯಿ, ಕಿತ್ತಳೆ, ಮ್ಯಾಂಡರಿನ್, ದ್ರಾಕ್ಷಿ, ಬಾದಾಮಿ, ವಾಲ್‌ನಟ್, ಪಿಸ್ತಾಗಳಿಗೆ ಜಿಎಸ್‌ಟಿ ಇರುವುದಿಲ್ಲ.

ಒಣಗಿದ ಹರ್ಬಲ್, ಡ್ರೈ ಪ್ಲಾಂಟ್, ಪ್ರಿಸರ್ವ್‌ಡ್ ತರಕಾರಿಗಳು, ಒಣಗಿಸಿದ ತೊಗಟೆಗಳು, ಬೇರುಗಳು, ನೀರಿನಲ್ಲಿ ಕುದಿಸಿದ, ಶೈತ್ಯೀಕರಿಸಿದ, ಹೆಚ್ಚುವರಿ ಸಕ್ಕರೆ ಪಾಕದಲ್ಲಿರುವ, ಉಪ್ಪಿನಲ್ಲಿ ಹಾಕಿರುವ, ಹೆಪ್ಪುಗಟ್ಟಿಸಿದ ತರಕಾರಿಗಳ ಮಾರಾಟಕ್ಕೆ ಶೇಕಡಾ 5 ಜಿಎಸ್‌ಟಿ ಇರುತ್ತದೆ. ಹಣ್ಣುಗಳ ಜ್ಯೂಸ್ ಮತ್ತು ತರಕಾರಿಗಳ ಜ್ಯೂಸ್ ಮೇಲೆ ಶೇಕಡಾ 12 ಜಿಎಸ್‌ಟಿ ಅನ್ವಯವಾಗುತ್ತದೆ. ಜೆಲ್ಲಿಗಳು, ಫ್ರೂಟ್ ಜ್ಯಾಮ್ ಮೇಲೆ ಶೇಕಡಾ 12-18 ಜಿಎಸ್‌ಟಿ ಇರುತ್ತದೆ. ದಿನಸಿ ಅಂಗಡಿಯಲ್ಲಿ ಮಾರುವ ಸಾಮಾನ್ಯ ಅಕ್ಕಿ ಇರಬಹುದು, ಬಾಸ್ಮತಿ ಇರಬಹುದು, 5 ಪರ್ಸೆಂಟ್ ಜಿಎಸ್‌ಟಿ ಇರುತ್ತದೆ. ಈ ರೀತಿಯ ಅರಿವು ಅಗತ್ಯ. ಎಷ್ಟೋ ಮಂದಿಗೆ ಇದು ಒಟ್ಟು ವಹಿವಾಟಿನ ಮೇಲಿನ ತೆರಿಗೆಯೇ ಹೊರತು, ಆದಾಯ ಅಥವಾ ಲಾಭದ ಮೇಲಿನದ್ದಲ್ಲ ಎಂಬುದೂ ತಿಳಿದಿಲ್ಲ. ಲಾಯರ್, ಡಾಕ್ಟರ್‌ಗಳಿಗೆ ಜಿಎಸ್‌ಟಿ ಇಲ್ಲ ಎಂಬುದೂ ಗೊತ್ತಿಲ್ಲ!

ನೋಡಿ, ಜಿಎಸ್‌ಟಿ ಕಂಪೋಸಿಷನ್ ಕಾಯಿದೆ ಅಡಿಯಲ್ಲಿ ವರ್ಷಕ್ಕೆ 1.50 ಕೋಟಿ ರು. ವ್ಯಾಪಾರ ನಡೆಸಿದರೂ, ಕೇವಲ 1ರಿಂದ 6 ಪರ್ಸೆಂಟ್ ಜಿಎಸ್‌ಟಿ ಕಟ್ಟಿದರೆ ಸಾಕು. ವರ್ಷಕ್ಕೆ ಒಂದೂವರೆ ಕೋಟಿ ರುಪಾಯಿಗಳಷ್ಟು ವಹಿವಾಟು ನಡೆಸಿದರೂ, ಒಂದು ಪರ್ಸೆಂಟ್ ಲೆಕ್ಕದಲ್ಲಿ ಒಂದೂವರೆ ಲಕ್ಷ ರುಪಾಯಿ ಜಿಎಸ್‌ಟಿ ಕಟ್ಟಿದರೆ ಸಾಕಾಗುತ್ತದೆ. ರೆಸ್ಟೋರೆಂಟ್ ನಡೆಸುವವರಿಗೆ ಶೇಕಡಾ 6 ಬರಬಹುದು. ಅದಕ್ಕಿಂತ ಹೆಚ್ಚು ಇರುವುದಿಲ್ಲ. ಹೀಗಾಗಿ ಬಹುಪಾಲು ಚಿಲ್ಲರೆ ವ್ಯಾಪಾರಿಗಳಿಗೆ ಇದು ಅನುಕೂಲಕರ. ಬೆಂಗಳೂರಿನಲ್ಲೇ 66,000ಕ್ಕೂ ಹೆಚ್ಚು ಕಾಂಡಿಮೆಂಟ್ಸ್, ಬೇಕರಿಗಳು ಇವೆ. ಅಸಂಘಟಿತ ವಲಯದ ಅನೇಕ ಬೇಕರಿ, ಟೀ-ಕಾಫಿ ಶಾಪ್‌ಗಳು, ರಸ್ತೆ ಬದಿಯ ದೋಸೆ ಕ್ಯಾಂಟೀನ್‌ಗಳು ಲಕ್ಷಗಟ್ಟಲೆ ವ್ಯವಹಾರ ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಅಂಥವರು ಜಿಎಸ್‌ಟಿ ಪರಿಧಿಗೆ ಬಂದು ಸಂಘಟಿತರಾಗುವುದು ಒಳ್ಳೆಯದಲ್ಲವೇ? ಇವತ್ತು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಜಿಎಸ್‌ಟಿ ಪ್ರಮುಖ ಆದಾಯ ಮೂಲವಾಗಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಜಿಎಸ್‌ಟಿಗೆ ಮುನ್ನ 2016ರಲ್ಲಿ ಇಡೀ ವರ್ಷದಲ್ಲಿ ಕೇವಲ 8.63 ಲಕ್ಷ ಕೋಟಿ ರುಪಾಯಿ ಪರೋಕ್ಷ ತೆರಿಗೆ ಸಂಗ್ರಹವಾಗಿತ್ತು. 2024ರಲ್ಲಿ 22.08 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು! ಈ ವರ್ಷ ಮಾಸಿಕ ಸರಾಸರಿ ಸಂಗ್ರಹ 1.84 ಲಕ್ಷ ಕೋಟಿ ರುಪಾಯಿ! ಈಗ ಹೇಳಿ ಜಿಎಸ್‌ಟಿ, ಯುಪಿಐ ಬೇಡವೇ?

ಭಟ್ಟರ್ ಸ್ಕಾಚ್

- ರಾಘುರಾಯ, ಕೃಷ್ಣಮೂರ್ತಿಪುರ
ಭಟ್ರೇ, ನರ್ಸರಿಯಲ್ಲಿ ಬೇಕಿದ್ದ ಕಸಿ ಸಸಿ ಸಿಗದೇ ಹೋದರೆ ಗ್ರಾಹಕನಿಗೆ ಉಂಟಾಗುವ ಚಡಪಡಿಕೆಗೆ ಏನನ್ನುತ್ತಾರೆ?
– **ಕಸಿವಿಸಿ!**

- ಘಂಟಿ ವೇದವ್ಯಾಸಾಚಾರ್, ಮೈಸೂರು
'ಸಂಪಾದಕರ ಸದ್ಯಶೋಧನೆ' ಯಲ್ಲಿ ಭಟ್ಟರು ವಿಮಾನಯಾನದ ಬಗ್ಗೆ ಸತತ ಬರೆಯುತ್ತಿರುವುದನ್ನು ನೋಡಿ ಓದುಗರು ಏನೆಂದು ಅನುಮಾನಿಸುತ್ತಿದ್ದಾರೆ?
– **ಭಟ್ಟರು ವಿಮಾನದಲ್ಲಿ ಬ್ಯುಸಿನೆಸ್ ಕ್ಲಾಸಿನಲ್ಲಿ ಕುಳಿತು ಪಯಣಿಸುತ್ತಿದ್ದಾರೋ, ಇಲ್ಲ ಕಾಕ್‌ಪಿಟ್‌ನಲ್ಲೋ?!**

- ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)
ಭಟ್ರೇ, ಮಾಜಿ ಲವರ್‌ಗೆ ಇನ್ನೊಂದು ಚಾನ್ಸ್ ಕೊಡಬಹುದಾ?
– **ಮಾಜಿ ಸಚಿವರಿಗೆ, ಶಾಸಕರಿಗೆ ಕೊಡ್ತಾರಂತೆ?!**

- ಕಲಮಂಗಿ ಆಚಾರ್ಯ, ಬೆಂಗಳೂರು
'ಭಟ್ಟರ್ ಸ್ಕಾಚ್'ನಲ್ಲಿ ಹೊಸ ನಾಯಕರು ಆಗಾಗ ಉದ್ಭವಿಸುತ್ತಲೇ ಇರುತ್ತಾರಲ್ಲ?
– **ಸದ್ಯದ ಹೊಸ ಎಂಟ್ರಿ 'ಸುಳ್ಳು ಸುಬ್ಬಣ್ಣ'ನದು!**

- ರಾಜೀವ ಕ್ಷೇತ್ರಪಾಲ, (ಇಮೇಲ್ ಮೂಲಕ)
ಭಟ್ರೇ, ಚಪ್ಪಡಿ ಕಲ್ಲಿನ ಉಪಯೋಗ ಏನು?
– **ನಮ್ಮ ಮೈ ಮೇಲೆ ಎತ್ತಾಕಿಕೊಳ್ಳಲು ಅದರಂಥ ಕಲ್ಲು ಮತ್ತೊಂದಿಲ್ಲ!**

- ಎಂ ಪರಮೇಶ್ವರ, ಮದ್ದಿಹಳ್ಳಿ
ಭಟ್ರೇ, ಟ್ರಬಲ್ ಶೂಟರ್‌ಗೆ ಟ್ರಬಲ್ ಏನಿದು?
– **ಅದು ಶೂಟ್ ಮಾಡುವವರು ಯಾರು ಎಂಬುದನ್ನು ಅವಲಂಬಿಸಿರುತ್ತದೆ!**

- ಮಧುರಾ ಶರ್ಮ, ಮೈಸೂರು
ಭಟ್ರೇ, ಅಪರಿಚಿತ ಹೆಣ್ಣಿನ ಸಹವಾಸ ಮಾಡಬಾರದು ಅಂತಾರಲ್ಲ?
– **ಸಹವಾಸ ಮಾಡಬಹುದು, ಆದರೆ ಅವಳ ಜತೆ ವಾಸ ಮಾಡಬಾರದು ಅಂದಿರಬೇಕು!**

- ಎಸ್. ಗಜಾನನ ಮಹಾಲೆ, ಬೆಂಗಳೂರು
ಭಟ್ರೇ, ಕೂಗಿದರೂ ಅವಳಿಗೆ ಕೇಳುವುದಿಲ್ಲವಲ್ಲ?
– **ಒಂದು ಮಿಸ್ ಕಾಲ್ ಕೊಡಬೇಕಿತ್ತು!**

- ಸುಜಾತ, ಮಂಡ್ಯ
ಭಟ್ರೇ, ನೆಮ್ಮದಿಯ ಜೀವನಕ್ಕೆ ಕಂಟಕ ಯಾವುದು?
– **ಗಂಡನ ಗೊರಕೆ!**

- ಪಿ. ಪುಟ್ಟಣ್ಣ, ತುಮಕೂರು
ಭಟ್ರೇ, ಮಧ್ಯರಾತ್ರಿ ಎದ್ದು ಐಸ್ ಕ್ರೀಮ್ ತಿನ್ನಿಸು ಅಂತಾಳಲ್ಲ?
– **ಗ್ಲಾಸಿಗೆ ವಿಸ್ಕಿ ಸುರಿದಿದ್ದೇನೆ, ಸೋಡಾ ಎಲ್ಲಿ ಅಂತ ಕೇಳಲಿಲ್ಲವಲ್ಲ?!**

ಮಳೆ ಕೋಂಗಿಲ ಹಕ್ಕಿಗೆ ಹಾಡಲು ಬರುವುದಿಲ್ಲ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ನಮ್ಮ ಜನಪದರು, ಗ್ರಾಮೀಣ ಜನರು ಕೆಲವು ಹಕ್ಕಿಗಳಿಗೆ ಇಟ್ಟಿರುವ ಹೆಸರನ್ನು ಕಂಡರೆ ಒಮ್ಮೊಮ್ಮೆ ಚೋದ್ಯ ಎನಿಸುತ್ತದೆ. 'ಮಳೆ ಕೋಂಗಿಲ' ಎಂಬುದು ನಮ್ಮ ಹಳ್ಳಿಯಲ್ಲಿ ಕಾಣಸಿಗುವ ವಿಶಿಷ್ಟ ಮತ್ತು ದೊಡ್ಡ ಗಾತ್ರದ ಹಕ್ಕಿ. ಮಳೆಗಾಲದ ದಿನಗಳಲ್ಲಿ ಇವುಗಳು ಅತ್ತಿಂದಿತ್ತ, ಮರದಿಂದ ಮರಕ್ಕೆ ಹಾರಾಡುವುದನ್ನು ನೋಡಬಹುದು. ಸಂಜೆಯ ಹೊತ್ತಿನಲ್ಲಿ ಒಮ್ಮೆಗೇ ಮನೆಯ ಹಿಂದಿನ ಹಾಡಿಯಲ್ಲೋ, ಗದ್ದೆಯಾಚೆಗಿನ ಹಕ್ಕಲಿನಲ್ಲೋ ಆರೆಂಟು ಹಕ್ಕಿಗಳು ಸದ್ದು ಮಾಡುತ್ತಾ ಪ್ರತ್ಯಕ್ಷವಾಗುತ್ತವೆ. ಬರಬರ ಸದ್ದು ಮಾಡುತ್ತಾ ಹಾರುವ ಅವುಗಳ ಸಂಚಾರವನ್ನು ಕಂಡು 'ಹಾಂ, ಮಳೆ ಕೋಂಗಿಲ ಬಂದೊ ಕಾಣಿ, ನಾಳೆ ಇನ್ನೂ ಜಾಸ್ತಿ ಮಳೆ ಬತ್ತತಾ ಕಾಣತ್' ಎನ್ನುತ್ತಿದ್ದರು ನಮ್ಮ ಹಳ್ಳಿಯ ಜನ.

ಇಲ್ಲಿ ಅವುಗಳ 'ಸಂಚಾರ' ಎಂದು ಕರೆದದ್ದು ಸುಮ್ಮನೆ ಅಲ್ಲ, ಹಾಗಿರುತ್ತದೆ ಅವುಗಳ ಆಗಮನ, ನಿರ್ಗಮನ! ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಸ್ಥಳೀಯವಾಗಿ ವಲಸೆ ಹೋಗಲು ಅವು ಆರಿಸಿಕೊಳ್ಳುವುದು ಇದೇ ಶ್ರಾಯವನ್ನು. ಮಳೆ ಕೋಂಗಿಲ ಹಕ್ಕಿಗಳು ಒಂದು ರೀತಿಯಲ್ಲಿ ಪಕ್ಷಿ ಲೋಕದ ವಿದೂಷಕರು. ಇಂಗ್ಲಿಷಿನಲ್ಲಿ ಅವುಗಳನ್ನು ಮಲಬಾರ್ ಪೈಡ್ ಹಾರ್ನ್‌ಬಿಲ್ ಎಂದು ಕರೆದಿದ್ದಾರೆ. ಅವುಗಳನ್ನು ನಮ್ಮ ಹಳ್ಳಿಯ ಜನಪದರು 'ಮಳೆ ಕೋಂಗಿಲ' ಎಂದು ಕರೆದರೂ, ಈ ಹಕ್ಕಿಗಳು ಹಾಡಲಾರವು! ಏಕೆಂದರೆ, ಅವುಗಳ ದನಿ ಕರ್ಕಶ. ಅದಕ್ಕೇ, ವಿರುದ್ಧಾರ್ಥಕವಾಗಿ 'ಮಳೆ ಕೋಂಗಿಲ' ಎಂದು ಗ್ರಾಮೀಣರು ಕರೆದರೋ ಏನೋ. ಇನ್ನು ಅವುಗಳ ಕೊಕ್ಕು ಸಹ ವಿದೂಷಕನ ಸ್ವರೂಪಕ್ಕೆ ಅನ್ವರ್ಥಕ. ನಸು ಹಳದಿ ಬಣ್ಣದ ಉದ್ದನೆಯ, ಡೊಂಕಾದ ಕೊಕ್ಕು, ಆ ದೊಡ್ಡ ಕೊಕ್ಕಿನ ತುದಿಯಲ್ಲೊಂದು ಕೊಂಬು, ಆ ಕೊಂಬಿನಲ್ಲಿ ಕರಿಬಣ್ಣದ ಅಲಂಕಾರ. ಕೊಕ್ಕಿನ ಮೇಲೊಂದು ಕೊಕ್ಕು ಹೊಂದಿರುವುದು ಈ ಹಕ್ಕಿಯ ಹೆಗ್ಗಳಿಕೆಯಾದರೂ, ನೋಡುವುದಕ್ಕೆ ಅದು ಅಷ್ಟೊಂದು ಚಂದವಲ್ಲ. ತಲೆಯ ಮೇಲೆ ಅರ್ಧ ಅಡಿಗಿಂತಲೂ ದೊಡ್ಡದಾದ ಕೊಕ್ಕನ್ನು ಹೊತ್ತು ಹಾರುವುದೇ ಆ ಹಕ್ಕಿಗೆ ಒಂದು ದೊಡ್ಡ ಕೆಲಸ!

ನಮ್ಮ ಹಳ್ಳಿಯವರು ಅದನ್ನು ಮಳೆ ಕೋಂಗಿಲ ಎಂದು ಕರೆದರೂ, ಅವುಗಳ ವರ್ತನೆಯ ಕುರಿತು ಹೆಚ್ಚಿನ ಮಾಹಿತಿ ಅವರಲ್ಲಿ ಇಲ್ಲ ಎನಿಸುತ್ತದೆ. ಎರಡು ಅಡಿಗೂ ಉದ್ದ ಇರುವ, ಕಪ್ಪನೆಯ ಬಣ್ಣದ ಆ ಹಕ್ಕಿಗಳು ನಮ್ಮೂರಿನ ಕಾಡು ಪ್ರದೇಶದಲ್ಲಿ ಸ್ಥಳೀಯವಾಗಿ ವಲಸೆಹೋಗುವುದನ್ನು ಗುರುತಿಸಿದ್ದಾರಾದರೂ, ಅವುಗಳ ನಡವಳಿಕೆಗೆ ಯಾವುದೇ ಕಥೆಗಳನ್ನು ಕಟ್ಟಿದಂತಿಲ್ಲ. ಜತೆಗೆ, ಇವು ಗೂಡು ಕಟ್ಟುವ ಪರಿ, ಗಂಡು ಹಕ್ಕಿಯು ತನ್ನ ಕುಟುಂಬಕ್ಕಾಗಿ ಆಹಾರ ತರಲು ಶ್ರಮಿಸುವುದು, ಹೆಣ್ಣು ಹಕ್ಕಿಯು ಮರದ ಪೊಟರೆಯಲ್ಲಿ ತನ್ನನ್ನು ತಾನೇ ಬಂದಿಯನ್ನಾಗಿಸಿಕೊಂಡು ಮರಿಯನ್ನು ಸಲಹುವುದು ಇವೇ ವಿಚಾರಗಳ ಕುರಿತು ನಮ್ಮ ಹಳ್ಳಿಯವರು ಮಾತನಾಡಿದ್ದನ್ನು ನಾನೆಂದೂ ಕೇಳಿಲ್ಲ.

ಇವುಗಳನ್ನೇ ಹೋಲುವ, ತುಸು ಚಿಕ್ಕದಾದ, ಮೈಪೂರ್ತಿ ಬೂದು ಬಣ್ಣದ ಇನ್ನೊಂದು ಹಾರ್ನ್‌ಬಿಲ್ ಹಕ್ಕಿಯನ್ನು 'ಚಪ್ಪು ಕೋಂಗಿಲ' ಎಂದು ಕರೆಯುತ್ತಾರೆ. ಇವೆರಡೂ ಒಂದಕ್ಕೊಂದು ದೂರದ ಸಂಬಂಧಿಗಳು, ಈ ಕುಟುಂಬದ ಎಲ್ಲಾ ಪ್ರಭೇದದ ಹಕ್ಕಿಗಳು ಮರಿಮಾಡುವ ಕ್ರಮವೇ ಬಹು ವಿಭಿನ್ನ; ಹೆಣ್ಣು ಹಕ್ಕಿಯು ದೊಡ್ಡ ಮರದ ಪೊಟರೆಯೊಳಗೆ ತನ್ನನ್ನು ತಾನೇ ಬಂಧನಕ್ಕೆ ಒಳಪಡಿಸಿಕೊಂಡು, ಮೊಟ್ಟೆಯಿಟ್ಟು, ಕಾವುಕೊಟ್ಟು ಮರಿಮಾಡುತ್ತದೆ. ಆ ಪೊಟರೆಯ ಸಂದಿಯಲ್ಲಿ ಕೊಕ್ಕು ತೂರಿಸಿ ಆ ತಾಯಿ ಹಕ್ಕಿಗೆ ನಿರಂತರವಾಗಿ ಆಹಾರ ನೀಡುವುದು ಗಂಡು ಹಕ್ಕಿಯ ಕೆಲಸ. ಚಪ್ಪು ಕೋಂಗಿಲಗಳು ಸಾಮಾನ್ಯವಾಗಿ ಜೋಡಿಯಾಗಿ ಕಾಣಿಸಿಕೊಳ್ಳುತ್ತವೆ; ಮೈಬಣ್ಣವು ಒಣರೆಂಬೆಯ ಬಣ್ಣವನ್ನು ಹೋಲುತ್ತದೆ. ಆದ್ದರಿಂದಲೇ, ನಮ್ಮ ಹಳ್ಳಿಗರು ಅದನ್ನು ಚಪ್ಪು (ಒಣರೆಂಬೆ) ಕೋಂಗಿಲ ಎಂದು ಕರೆದರು! ಈ ಹಕ್ಕಿಗಳು ನಮ್ಮ ರಾಜ್ಯದ ಬಯಲು ಸೀಮೆಯಲ್ಲೂ ಸಾಕಷ್ಟು ಕಾಣಸಿಗುತ್ತವೆ.

ಆದರೆ, ದೊಡ್ಡ ಗಾತ್ರದ ಮಳೆ ಕೋಂಗಿಲಗಳು, ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್‌ಗಳು ಕಷ್ಟದ ದಿನಗಳನ್ನು ಎದುರಿಸುತ್ತಿವೆ. ಕೆಲವೇ ದಶಕಗಳ ಹಿಂದೆ ಸಾಕಷ್ಟು ಸಂಖ್ಯೆಯ ಮಳೆ ಕೋಂಗಿಲಗಳು ನಮ್ಮ ಹಳ್ಳಿಯ ಸುತ್ತಮುತ್ತಲೂ ಇದ್ದವು; ಅವುಗಳಿಗೆ ಆಶ್ರಯ ನೀಡಲು ಅಂದು ನೂರಾರು ಹಳೆಯ, ಬೃಹದಾಕಾರದ ಮರಗಳು ತಮ್ಮಷ್ಟಕ್ಕೆ ತಾವೇ ಬೆಳೆದುಕೊಂಡಿದ್ದವು. ಆದರೆ ಈಚಿನ ವರ್ಷಗಳಲ್ಲಿ ಅಂಥ ಹಳೆಯ ಮರಗಳು ಬಹುಮಟ್ಟಿಗೆ ಕಣ್ಮರೆಯಾಗಿ, ಅಲ್ಲೆಲ್ಲಾ ಅಕೇಶಿಯಾ ಕಾಡು ಬೆಳೆದಿರುವುದರಿಂದ, ನಮ್ಮ ಹಳ್ಳಿಯಲ್ಲಿದ್ದ ಹೆಚ್ಚಿನ ಮಳೆ ಕೋಂಗಿಲಗಳು ಬೇರೆ ಕಡೆ ಹೊರಟುಹೋಗಿವೆ ಅಥವಾ ನಿಧಾನವಾಗಿ ಕಣ್ಮರೆಯಾಗುತ್ತಿವೆ.

ನಮ್ಮ ಹಳ್ಳಿಯಲ್ಲಿ ಅತಿ ಹೆಚ್ಚು ಕಣ್ಣಿಗೆ ಬೀಳುವ ಹಕ್ಕಿಗಳೆಂದರೆ, ನಾನಾ ರೀತಿಯ ಕೊಕ್ಕರೆಗಳು! ಗದ್ದೆ ಕೊಯ್ಲಾದ ನಂತರ, ಗದ್ದೆಯಂಚಿನ ಉದ್ದಕ್ಕೂ ಅವು ಕುಳಿತು, ಆ ಪರಿಸರಕ್ಕೆ ರಂಗೋಲಿ ಬರೆದ ಅನುಭವವನ್ನು ನೀಡುತ್ತವೆ! ಬತ್ತದ ಬೆಳೆಗಾಗಿ ಗದ್ದೆ ಹೂಟಿ ನಡೆದು, ಇನ್ನೂ ನಾಟಿಯಾಗದೇ ಇರುವ ದಿನಗಳಲ್ಲಿ, ಗದ್ದೆಯ ತುಂಬಾ ನೀರು ನಿಂತು, ಪ್ರತಿಯೊಂದು ಗದ್ದೆಯೂ ಒಂದೊಂದು ವಿಶಾಲ ಕನ್ನಡಿಯಾಗುತ್ತದೆ, ಆಗಸದ ನೀಲಿಯನ್ನು ಪ್ರತಿಫಲಿಸುತ್ತಿರುತ್ತದೆ. ಆ ಗದ್ದೆಯ ಅಂಚಿನಲ್ಲಿ ಸಾಲಾಗಿ ಕುಳಿತುಕೊಳ್ಳುವ ಬಿಳಿ ಕೊಕ್ಕರೆಗಳ ಪ್ರತಿಬಿಂಬವು ನೀರಿನಲ್ಲಿ ಮೂಡಿ, ಸುಂದರ ಭಾವಚಿತ್ರವನ್ನೇ ಕಟ್ಟಿಕೊಡುತ್ತವೆ. ಏನಾದರೂ ಸದ್ದಾದಾಗ, ಒಮ್ಮೆಗೇ ಎದ್ದು ಹಾರುವ ಹತ್ತಾರು ಕೊಕ್ಕರೆಗಳು, ನೀರಿನಲ್ಲೂ ಹಾರುತ್ತಾ ಹೋಗುವ ಅವುಗಳ ಪ್ರತಿಬಿಂಬಗಳು ಪುಟ್ಟ ಕಾವ್ಯವನ್ನೇ ರೂಪಿಸುವ ಪರಿ ಅನನ್ಯ, ಅದ್ಭುತ. ಅವು ಗದ್ದೆಯಲ್ಲಿನ ಮೀನು, ಏಡಿ, ಕಪ್ಪೆಗಳನ್ನು, ಕೊಯ್ಲಾದ ನಂತರ ಗದ್ದೆಗಳಲ್ಲಿರುವ ಮಿಡತೆ, ಕೀಟಗಳನ್ನು ಹಿಡಿದು ತಿನ್ನುತ್ತವೆ.

ಆದರೆ, ನಮ್ಮ ಹಳ್ಳಿಯ ಕೊಕ್ಕರೆಗಳನ್ನು ಕೆಲವರು ಸಾಯಿಸುತ್ತಿದ್ದ ದಿನಗಳೂ ಇದ್ದವು! ಚರೆ ಕೋವಿಯಿಂದ ಒಂದು ಢಂ ಎನಿಸಿದರೆ, ಸಾಲಾಗಿ ಗದ್ದೆಯಂಚಿನಲ್ಲಿ ಕುಳಿತಿದ್ದ ನಾಲ್ಕಾರು ಕೊಕ್ಕರೆಗಳು ಒಮ್ಮೆಗೇ ಸತ್ತುಬಿದ್ದಾವು! ಸಂಜೆಯ ಹೊತ್ತಿನಲ್ಲಿ ಒಮ್ಮೊಮ್ಮೆ ಢಂ ಎಂದು ಈಡು ಮಾಡಿದ ಸದ್ದು ಅಪರೂಪಕ್ಕೆ ಕೇಳಿಬರುತ್ತಿತ್ತು. ಆಗ 'ಹಾಂ, ಯಾರೋ ಕೊಕ್ಕಾನಕ್ಕಿಗೆ ಈಡು ಹೊಡೆದರು!' ಎಂದು ನಮ್ಮ ಅಮ್ಮಮ್ಮ ಉದ್ಗರಿಸುತ್ತಿದ್ದರು. 1970ರ ದಶಕದಲ್ಲಿ ಜಾರಿಗೊಂಡ ವನ್ಯಜೀವಿ ಸಂರಕ್ಷಣಾ ಕಾಯಿದೆಯಿಂದಾಗಿ ಹಕ್ಕಿಗಳಿಗೂ ರಕ್ಷಣೆ ದೊರಕಿದೆ, ಹಿಂದೆ ನಡೆಯುತ್ತಿದ್ದ ಅಂಥ ಹಕ್ಕಿಬೇಟೆ ಬಹುಮಟ್ಟಿಗೆ ನಮ್ಮೂರಲ್ಲಿ ನಿಂತುಹೋಗಿದೆ.

ಆದರೇನು ಮಾಡುವುದು, ಸರಿಸುಮಾರು ಅದೇ ಸಮಯದಲ್ಲಿ, ಅಂದರೆ 1970ರ ದಶಕದಲ್ಲಿ ಆರಂಭಗೊಂಡ ಕ್ರಿಮಿನಾಶಕಗಳ ವ್ಯಾಪಕ ಬಳಕೆಯಿಂದಾಗಿ, ತಮ್ಮ ಬದುಕಿಗೆ ಗದ್ದೆಯನ್ನೇ ಆಶ್ರಯಿಸಿದ್ದ ಕೊಕ್ಕರೆಗಳ ಸಂತತಿಗೆ ಬೇರೊಂದೇ ತೆರನ ಅಪಾಯ ಒದಗಿದೆ ಎನ್ನಬಹುದು. ಕ್ರಿಮಿನಾಶಕ ಬಳಸಿದ ಗದ್ದೆಯಲ್ಲಿನ ಮೀನುಗಳನ್ನು ತಿಂದರೆ, ಹಕ್ಕಿಗಳ ಮೊಟ್ಟೆಯ ಕವಚ ತೆಳುವಾಗುತ್ತದೆ ಎಂದಿದ್ದಾರೆ ವಿಜ್ಞಾನಿಗಳು. ಹಲವು ದಶಕಗಳಿಂದ ಕೊಕ್ಕರೆಗಳು ಅದೇ ಗದ್ದೆಗಳಲ್ಲಿ ಮೀನು, ಕಪ್ಪೆ ಹಿಡಿದು ತಿನ್ನುತ್ತಿವೆ; ನಿಧಾನವಾಗಿ ಅವುಗಳ ಮೊಟ್ಟೆಯ ಕವಚ ಕಡಿಮೆಯಾಗಿರಬಹುದೋ ಏನೋ! ಈ ಕುರಿತು ಇನ್ನಷ್ಟು ಸಂಶೋಧನೆ ಅಗತ್ಯ. ಆದರೂ ಈಗಲೂ ನಮ್ಮ ಹಳ್ಳಿಯಲ್ಲಿ ಸಾಕಷ್ಟು ಸಂಖ್ಯೆಯ ಕೊಕ್ಕರೆಗಳಿವೆ.

ಹಿಂದೆ ನಮ್ಮೂರಿನಲ್ಲಿ ಬಿಳೀ ರೆಕ್ಕೆಯ ಸ್ಮಾಲ್ ಈಗ್ರೆಟ್, ಬಿಗ್ ಈಗ್ರೆಟ್, ಕ್ಯಾಟಲ್ ಈಗ್ರೆಟ್‌ಗಳು, ಪಾಂಡ್ ಹೆರಾನ್‌ಗಳು ಅಧಿಕ ಸಂಖ್ಯೆಯಲ್ಲಿದ್ದವು. ಈಗ ಅವುಗಳೂ ಸಾಕಷ್ಟು ಸಂಖ್ಯೆಯಲ್ಲಿವೆ; ಜತೆಗೆ, ಓಪನ್ ಬಿಲ್, ಬಣ್ಣದ ಕೊಕ್ಕರೆ, ಕಪ್ಪು ಐಬೀಸು, ಅಡುಜಾಂಟ್ (ಅಪೂರ್ವಕ್ಕಿ), ಗ್ರೇ ಪೆಲಿಕನ್‌ಗಳು ಸಹ ಆಗಾಗ ಕಾಣಿಸಿಕೊಳ್ಳುತ್ತಿವೆ. ನಮ್ಮ ಪರಿಸರದಲ್ಲಿ ಕಳೆದ ಐದು ದಶಕದಲ್ಲಿ ಅದೇನು ಬದಲಾವಣೆಯಾಯಿತೋ ಗೊತ್ತಿಲ್ಲ, ದೊಡ್ಡ ದೊಡ್ಡ ಕೊಕ್ಕರೆಗಳು ಸಹ ನಮ್ಮ ಹಳ್ಳಿಗೆ ಈಗ ಪ್ರಾದೇಶಿಕವಾಗಿ ವಲಸೆ ಬರತೊಡಗಿವೆ. ಈ ಹಕ್ಕಿಗಳನ್ನು ನಮ್ಮೂರಿನಲ್ಲಿ ಕಂಡು ಸಣ್ಣಗೆ ಸಂತೋಷವಾದರೂ, ಹಿಂದೆ ಒಮ್ಮೆಯೂ ಬಾರದೇ ಇದ್ದ ಈ ಹಕ್ಕಿಗಳು, ಈಚಿನ ವರ್ಷಗಳಲ್ಲಿ ನಮ್ಮ ಹಳ್ಳಿಗೆ ಬರುತ್ತಿವೆ ಅಂದರೆ, ಅವುಗಳ ಜೀವನಕ್ರಮದಲ್ಲಿ ವ್ಯತ್ಯಯವಾಗಿರಬಹುದು ಅಥವಾ ಅವುಗಳಿಗೆ ಹಿಂದೆ ಆಶ್ರಯ ನೀಡಿದ್ದ ಜಲಾಶ್ರಯಗಳು ಕಣ್ಮರೆಯಾಗಿರಬೇಕು ಎಂದು ತರ್ಕಿಸಬಹುದು ಮತ್ತು ಅದು ನಿಜವಾಗಿದ್ದಲ್ಲಿ, ಒಟ್ಟೂ ಪರಿಸರದ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಂತೂ ಅಲ್ಲ.

ನಮ್ಮ ಹಳ್ಳಿಯ ಜನರು ಹಕ್ಕಿಗಳ ಬೇಟೆ ಮಾಡುವುದು, ಅವುಗಳನ್ನು ತಿನ್ನುವುದು ಬಹಳ ಕಡಿಮೆ. ಮಳೆಗಾಲದಲ್ಲಿ, ಆಹಾರಕ್ಕೆ ತೀರಾ ಕೊರತೆಯಾಗುವ ದಿನಗಳಲ್ಲಿ, ಗೆರೆ ಹಕ್ಕಿಗಳು (ಗೀಜುಗ, ಬಾಯಾ ವೀವರ್ ಬರ್ಡ್) ಒಮ್ಮೊಮ್ಮೆ ಬೇಟೆಗೆ ಬಲಿಯಾಗುವುದುಂಟು. ಅಂಥ ಹಕ್ಕಿಬೇಟೆಯನ್ನು ನಮ್ಮ ಮನೆಯ ಹತ್ತಿರ ಕಂಡ ನೆನಪಿದೆ. ಅವು ಆಷಾಢದ ದಿನಗಳು. ಮನೆಯ ಹಿಂದಿನ ಗದ್ದೆಯಂಚಿನಲ್ಲಿದ್ದ ನಾಲ್ಕು ತೆಂಗಿನ ಮರಗಳ ಗರಿಗಳ ತುದಿಯಲ್ಲಿ ಹತ್ತೈವತ್ತು ಗೆರೆಹಕ್ಕಿಗಳು ತಮ್ಮ ಸುಂದರ, ನಾಜೂಕಾದ ಗೂಡುಗಳನ್ನು ಕಟ್ಟುತ್ತಿದ್ದವು. ಪ್ರತಿ ದಿನ ಮಳೆ ಸುರಿಯುವಂಥ ಕಾಲವದು; ಅಂಥ ದಿನಗಳಲ್ಲಿ ಆ ಹಕ್ಕಿಗಳಿಗೂ ಪಾಪ ಆಹಾರದ ಕೊರತೆ. ಮನೆಯಂಗಳದಲ್ಲಿದ್ದ ಹುಲ್ಲುಕುತ್ರಿಯ ಬಳಿ ಬಂದು, ಬತ್ತ ಬಡಿದ ನಂತರ ಒಣಹುಲ್ಲಿನಲ್ಲಿ ಉಳಿದುಕೊಂಡಿರುವ ಬತ್ತದ ಕಾಳುಗಳನ್ನು ಹುಡುಕಿ ಹುಡುಕಿ ತಿನ್ನುತ್ತಿದ್ದವು. ಹಸುಗಳಿಗೆ ಹಾಕಲೆಂದು ಮನೆಯವರು ಹುಲ್ಲನ್ನು ಕುತ್ರಿಯ ಬುಡದಿಂದಲೇ ತೆಗೆಯುವುದರಿಂದ, ಆ ಹುಲ್ಲಿನಿಂದ ಉದುರಿದ ಒಂದಷ್ಟು ಬತ್ತ, ಹೊಟ್ಟು ಬತ್ತವು ಅಲ್ಲೇ ನೆಲದ ಮೇಲೆ ಬಿದ್ದಿರುತ್ತಿತ್ತು. ಹತ್ತಾರು ಗೆರೆ ಹಕ್ಕಿಗಳು ಅಲ್ಲಿ ಹುಲ್ಲನ್ನು ಕೆದಗಿ, ಬತ್ತವನ್ನು ಹುಡುಕುತ್ತಿರುವಾಗ, ಅಲ್ಲೊಂದು ಬುಟ್ಟಿಯನ್ನು ಓರೆಯಾಗಿಟ್ಟು, ದೂರದಲ್ಲಿ ಕುಳಿತ ಕುಯಿರ ನಾಯಕನು ಬುಟ್ಟಿಗೆ ಕಟ್ಟಿದ್ದ ಹಗ್ಗವನ್ನು ಸದ್ದಿಲ್ಲದೇ ಎಳೆಯುತ್ತಿದ್ದ. ಹೆಚ್ಚಿನ ಹಕ್ಕಿಗಳು ಗಾಬರಿಯಿಂದ ಹಾರಿಹೋದರೂ, ನಾಲ್ಕಾರು ಅಬ್ಬೆಪಾರಿಗಳು ಬುಟ್ಟಿಯೊಳಗೆ ಸಿಕ್ಕಿಬೀಳುತ್ತಿದ್ದವು! ಆ ಪುಟಾಣಿ ಹಕ್ಕಿಗಳನ್ನು ಹಿಡಿದುಕೊಂಡು ಆತ ಹೋಗುತ್ತಿದ್ದ. ಒಂದು ಬೆರಳಿನಷ್ಟು ಉದ್ದದ ಆ ಹಕ್ಕಿಗಳನ್ನು ಹಿಡಿದು ತಿಂದರೆ, ಅದೆಷ್ಟು ತಾನೆ ಹಸಿವು ನೀಗೀತು ಎಂದು ಅದನ್ನು ಕಂಡವರು ಉದ್ಗರಿಸುತ್ತಿದ್ದರೂ, ಈ ವಿದ್ಯಮಾನವು ಅಂದು ಕೃಷಿಕಾರ್ಮಿಕರಿಗಿದ್ದ ಹಸಿವು ಮತ್ತು ಸಂಕಷ್ಟಗಳನ್ನು ಪ್ರತಿನಿಧಿಸುತ್ತದೆ ಎಂದೇ ನನ್ನ ಅಭಿಪ್ರಾಯ. ಈಚಿನ ದಶಕಗಳಲ್ಲಿ ಸರಕಾರವು ಅಕ್ಕಿಯನ್ನು ಉಚಿತವಾಗಿಯೋ ಅಥವಾ ತೀರಾ ಕಡಿಮೆ ಬೆಲೆಗೋ ಹಂಚುತ್ತಿರುವುದರಿಂದ, ಅಂಥ ಕಡುಬಡತನ ತುಸು ಕಡಿಮೆಯಾಗಿದೆ, ಮಳೆಗಾಲದಲ್ಲೂ ಕೃಷಿ ಕಾರ್ಮಿಕರಿಗೆ ಸರಳವಾದ ಊಟ ಸಿಗುತ್ತಿದೆ, ಅವರು ಗೆರೆ ಹಕ್ಕಿಯಂಥ ಪುಟಾಣಿ ಹಕ್ಕಿಗಳನ್ನು ಹಿಡಿದು ತಿನ್ನುವ ಅನಿವಾರ್ಯ ಸ್ಥಿತಿ ದೂರಾಗಿದೆ.

ಹಗಲಿಡೀ ಹಾಡಿಯ ಮರದ ನೆರಳಿನಲ್ಲಿ ಕುಳಿತು ಕಾಲಕಳೆದು, ಸಂಜೆಯಾಗುತ್ತಲೇ ಬೇಟೆಗೆ ಹೊರಡುವ ಗುಮ್ಮ ಅಥವಾ ಗೂಬೆಗಳು ನಮ್ಮ ಹಳ್ಳಿಯ ಬದುಕಿನ ಮೇಲೆ ಪರಿಣಾಮ ಬೀರಿದ ರೀತಿ ವಿಶಿಷ್ಟ. ಮನುಷ್ಯನಂತೆಯೇ ಕಣ್ಣುಗಳನ್ನು ಹೊರಳಿಸಿ ಅತ್ತಿತ್ತ ನೋಡುವ ಅವುಗಳನ್ನು ಕಂಡರೆ ಮಕ್ಕಳಿಗೆಲ್ಲಾ ಬಹಳ ಭಯ; ಮಕ್ಕಳನ್ನು ಹೆದರಿಸಲು ದೊಡ್ಡವರು ಗುಮ್ಮದ ಹೆಸರನ್ನು ಪದೇ ಪದೆ ಹೇಳಿ, ಬೆದರಿಸಿ ಇಟ್ಟಿದ್ದರಿಂದ, ಗುಮ್ಮ ಎಂದರೆ ಅಶುಭ ಸೂಚಕ ಎಂಬ ಭಾವನೆಯೇ ನಮ್ಮೂರಲ್ಲಿದೆ. ಗೂಬೆಯ ಇನ್ನೊಂದು ಪ್ರಭೇದ ಎನಿಸಿರುವ 'ಭೂತ ಹಕ್ಕಿ'ಯ ಕೂಗು ಭಯ ಹುಟ್ಟಿಸುವಂತಿದ್ದು, ಬೆಳಗಿನ ಜಾವ ಅದು ಕೂಗಿದರೆ ಸನಿಹದ ಮನೆಯಲ್ಲಿ ಮರಣ ಸಂಭವಿಸುತ್ತದೆ ಎಂಬ ಮೂಢನಂಬಿಕೆಯೂ ಇದೆ!

ಚೌಳಿಹರ ಎಂಬ ಇನ್ನೊಂದು ಪ್ರಭೇದದ, ದೊಡ್ಡ ಗಾತ್ರದ ಗೂಬೆ ನಡುರಾತ್ರಿಯಲ್ಲಿ ಕೂಗಿದರೆ, ಅದನ್ನು ಕೇಳಿದ ಧೈರ್ಯಶಾಲಿಗಳೂ ಒಮ್ಮೆಗೆ ನಡುಗಬೇಕು! ತೀಕ್ಷ್ಣ ಸ್ವರ, ದೀರ್ಘ ಪ್ರಲಾಪದ ಆ ಕೂಗು ಅಷ್ಟು ವಿಶಿಷ್ಟ, ರಾತ್ರಿ ಹೊತ್ತಿನಲ್ಲಿ ದಿಗಿಲು ಹುಟ್ಟಿಸುವಂಥದ್ದು. ನಮ್ಮೂರಿನಲ್ಲಿ ಮೀನು ಗೂಬೆ, ಕೊಂಬಿನ ಗೂಬೆ, ಚಿಟ್ಟು ಗೂಬೆ, ಭೂತ ಹಕ್ಕಿ, ಚೌಳಿ ಹರ ಎಂಬ ಹೆಸರಿನ ಐದು ಪ್ರಭೇದದ ಗೂಬೆಗಳಿರುವುದನ್ನು ನಾನು ಗುರುತಿಸಿದ್ದೇನೆ. ಆದರೆ, ಈಚಿನ 2–3 ದಶಕಗಳಲ್ಲಿ, ನಮ್ಮ ಹಳ್ಳಿಯ ಸುತ್ತಲಿನ ಸಹಜ ಕಾಡು ಸಾಕಷ್ಟು ಕಡಿಮೆಯಾಗಿ, ಅಲ್ಲೆಲ್ಲಾ ಅಪಾರ ಪ್ರಮಾಣದಲ್ಲಿ ಅಕೇಶಿಯಾ ಕಾಡು ಹಬ್ಬಿರುವುದರಿಂದ, ಎಲ್ಲಾ ಜೀವಿಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿರುವುದಂತೂ ನಿಜ. ಹಕ್ಕಿಗಳೂ ಅಂಥ ಒಂದು ಬಿಕ್ಕಟ್ಟಿಗೆ ಸಿಲುಕಿರಲೇಬೇಕು.

ಆದರೆ, ದೂರದ ಜಾಗವನ್ನು ಹುಡುಕಲು ಅನುಕೂಲವಾಗುವಂತೆ ಹಕ್ಕಿಗಳಿಗೆ ರೆಕ್ಕೆಗಳಿವೆ ಹಾರಬಹುದು ಎಂದು ಒಂದು ಸಮಾಧಾನ ಹೇಳಿಕೊಳ್ಳಬಹುದಾದರೂ, ಅದು ಕ್ಷಣಿಕ ಸಮಾಧಾನವೇ ಆದೀತು! 'ಧರೆಯೆ ಹೊತ್ತಿ ಉರಿಯುವಾಗ, ಬದುಕಲೆಲ್ಲಿ ಓಡುವೆ' ಎಂದಂತೆ, ಎಲ್ಲಾ ಕಡೆ ಕಾಡು, ಕುರುಚಲು ಕಾಡು, ಹಾಡಿ, ಹಕ್ಕಲು, ಬಳ್ಳಿ, ಗಿಡ, ಹುಲ್ಲುಗಾವಲುಗಳು ನಾಶವಾಗುತ್ತಿರುವಾಗ, ರೆಕ್ಕೆ ಕಟ್ಟಿಕೊಂಡ ಹಕ್ಕಿಯೊಂದು ಎಷ್ಟು ದೂರ ತಾನೆ ಹಾರಲು ಸಾಧ್ಯ?

ವಿತ್ತಲೋಕ

ರಮಾನಂದ ಶರ್ಮಾ

ಬ್ಯಾಂಕ್ ರಾಷ್ಟ್ರೀಕರಣದ ಐವತ್ತಾರು ವರ್ಷಗಳು

1969ರ ಜುಲೈ 19ರಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಸುಗ್ರೀವಾಜ್ಞೆಯ ಮೂಲಕ, 50 ಕೋಟಿ ರುಪಾಯಿಗೂ ಮಿಕ್ಕಿದ ಠೇವಣಿಯಿರುವ 14 ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದರು. ನಂತರ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ ಅವರು, ಸದರಿ ರಾಷ್ಟ್ರೀಕರಣದ ಹಿಂದಿನ ಉದ್ದೇಶ ಮತ್ತು ಯೋಜನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದರು. ರಾಷ್ಟ್ರೀಕರಣದ ಮಹತ್ವ ಮತ್ತು ಉದ್ದೇಶವನ್ನರಿಯದ ಜನಸಾಮಾನ್ಯರು, ಕೆಲ ಮಾಧ್ಯಮದವರು ಈ ಕ್ರಮವನ್ನು ತೀವ್ರವಾಗಿ ವಿರೋಧಿಸಿದ್ದರು. ತಮ್ಮೆಲ್ಲಾ ಠೇವಣಿಯನ್ನು ಸರಕಾರ ತೆಗೆದುಕೊಂಡಿತೇ? ಎಂದು ಠೇವಣಿದಾರರು ಭಯಪಟ್ಟಿದ್ದರು. ತಾವಿನ್ನು ಸರಕಾರಿ ನೌಕರರೆಂದು ಬ್ಯಾಂಕ್ ಸಿಬ್ಬಂದಿಗಳು ಸಂತಸಪಟ್ಟರು.

'ಇದೊಂದು ರಾಜಕೀಯ ಮಸಲತ್ತು, ಆಡಳಿತದ ವೈಫಲ್ಯವನ್ನು ಮರೆಮಾಚಿಸಲು ತೆಗೆದುಕೊಂಡ ಕ್ರಮ' ಎಂದು ವಿಪಕ್ಷಗಳು ಇಂದಿರಾರನ್ನು ತರಾಟೆಗೆ ತೆಗೆದುಕೊಂಡಿದ್ದವು. ಪಕ್ಷದಲ್ಲಿ ಕೃಷ್ಣಕಾಂತರಂಥ ಹಲವು ಸೋಷಲಿಸ್ಟ್ 'ಯಂಗ್‌ಟರ್ಕ್'ಗಳು ಇದ್ದರೂ, ಕೆಲವು ಹಿರಿಯ ನಾಯಕರಿಗೆ ಇಂದಿರಾರ ಈ ಕ್ರಾಂತಿಕಾರಿ ಆರ್ಥಿಕ ಸುಧಾರಣೆಯ ವಿಷಯದಲ್ಲಿ ಸಹಮತವಿರಲಿಲ್ಲ. ಇದನ್ನರಿತಿದ್ದ ಇಂದಿರಾ, ತಮ್ಮ ನಂಬುಗೆಯ ಹಲವು ಹಿರಿಯ ಅಧಿಕಾರಿಗಳು, ರಾಜಕಾರಣಿಗಳನ್ನಷ್ಟೇ ವಿಶ್ವಾಸಕ್ಕೆ ತೆಗೆದುಕೊಂಡಿದ್ದರಂತೆ. ಇಂಥ ಮಹತ್ವದ ಕ್ರಮದ ಬಗ್ಗೆ ರಿಸರ್ವ್ ಬ್ಯಾಂಕ್ ಗವರ್ನರ್‌ಗೂ ಸುಳಿವು ನೀಡಿರಲಿಲ್ಲವಂತೆ. ಇಂದಿರಾ ಮತ್ತು ಮೊರಾರ್ಜಿ ದೇಸಾಯಿಯವರ ನಡುವೆ ಶೀತಲ ಸಮರ ಶುರುವಾಗಿ ಕಾಂಗ್ರೆಸ್ ಇಬ್ಭಾಗವಾಗಲು ಇದೂ ಒಂದು ಕಾರಣ ಎನ್ನಲಾಗುತ್ತದೆ. ರಾಷ್ಟ್ರೀಕರಣಕ್ಕೆ ಸಹಮತವಿರದಿದ್ದರೆ ಹಣಕಾಸು ಇಲಾಖೆ ಬಿಟ್ಟು ಕೇವಲ ಉಪಪ್ರಧಾನಿಯಾಗಿ ಮುಂದುವರಿಯುವಂತೆ ಮೊರಾರ್ಜಿಯವರಿಗೆ ಇಂದಿರಾ ಖಡಕ್ಕಾಗಿ ಸೂಚಿಸುವಷ್ಟು ವಿಷಯ ಗಂಭೀರವಾಗಿತ್ತಂತೆ. ಈ ಸುಗ್ರೀವಾಜ್ಞೆಯನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ವಕೀಲ ನಾನಿ ಪಾಲ್ಕೀವಾಲಾ ಇದನ್ನು ವಿರೋಧಿಸಿ ಸುದೀರ್ಘವಾಗಿ ವಾದಿಸಿದ್ದರು. ಆರಂಭದಲ್ಲಿ 34 ತಿಂಗಳ ಮಧ್ಯಂತರ ತಡೆಯಾಜ್ಞೆಯೂ ಬಂದಿತ್ತು. ರಾಷ್ಟ್ರೀಕರಣವು ಉದ್ದೇಶಿತ ಸಾಫಲ್ಯ ನೀಡುತ್ತಿರುವುದನ್ನು ಕಂಡ ಇಂದಿರಾ, ತುರ್ತು ಪರಿಸ್ಥಿತಿಯ ನಂತರದ ಸೋಲಿನ ಬಳಿಕ 1980ರಲ್ಲಿ ಪುನಃ ಅಧಿಕಾರಕ್ಕೆ ಬಂದಾಗ 200 ಕೋಟಿ ರು.ಗೂ ಮಿಕ್ಕಿ ಠೇವಣಿಯಿರುವ 6 ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದರು. ಮೊದಲನೇ ಸುತ್ತಿನಲ್ಲಿ ದೇಶದ ಶೇ.85ರಷ್ಟು ಬ್ಯಾಂಕಿಂಗ್ ವ್ಯವಹಾರವು ಸರಕಾರಿ ಬ್ಯಾಂಕುಗಳಿಗೆ ದಕ್ಕಿದರೆ, ಎರಡನೇ ಸುತ್ತಿನಲ್ಲಿ ಶೇ.91ರವರೆಗೆ ದಕ್ಕಿತು. ಈಗ ಮೂರನೇ ಸುತ್ತಿನ ರಾಷ್ಟ್ರೀಕರಣದ ಕುರಿತು ಕೂಗು ಕೇಳತೊಡಗಿದ್ದು, ಆಯಾ ಬ್ಯಾಂಕುಗಳ ಸಿಬ್ಬಂದಿಗಳು ಮುಷ್ಕರದ ಚಿಂತನೆಯಲ್ಲಿದ್ದಾರೆ.

ಇಂದಿರಾರು 14 ಬ್ಯಾಂಕುಗಳನ್ನು ರಾಷ್ಟ್ರೀಕರಿಸುವಾಗ, ದೇಶಾದ್ಯಂತ 73 ಷೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್‌ಗಳಿದ್ದು 8262 ಶಾಖೆಗಳನ್ನು ಹೊಂದಿದ್ದವು. 4,646 ಕೋಟಿ ರು. ಠೇವಣಿ ಹೊಂದಿದ್ದ ಅವು 3,599 ಕೋಟಿ ರು.ನಷ್ಟು ಸಾಲ ನೀಡಿದ್ದವು. ಆಗ ಬ್ಯಾಂಕಿಂಗ್ ವಲಯದಲ್ಲಿ 2.20 ಲಕ್ಷದಷ್ಟು ಸಿಬ್ಬಂದಿಯಿದ್ದರು. ಇಂದು ದೇಶಾದ್ಯಂತ 1,65,501 ಬ್ಯಾಂಕ್ ಶಾಖೆಗಳಿದ್ದು, ಅವುಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಪಾಲು 85,116ರಷ್ಟಿದೆ. ಠೇವಣಿಯು 225.70 ಲಕ್ಷ ಕೋಟಿ ರು.ನಷ್ಟಿದ್ದರೆ, ಸಾಲನೀಡಿಕೆಯ ಪ್ರಮಾಣ 182.40 ಲಕ್ಷ ಕೋಟಿ ರು.ನಷ್ಟಿದೆ. ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ 7.56 ಲಕ್ಷ, ಖಾಸಗಿ ಬ್ಯಾಂಕುಗಳಲ್ಲಿ 8.45 ಲಕ್ಷ ಉದ್ಯೋಗಿಗಳಿದ್ದಾರೆ.

ರಾಷ್ಟ್ರೀಕರಣದ ಮೊದಲು ಖಾಸಗಿ ಒಡೆತನದಲ್ಲಿದ್ದ ಬ್ಯಾಂಕುಗಳು, ಜನಸಾಮಾನ್ಯರಿಂದ ಠೇವಣಿಯನ್ನು ಸ್ವೀಕರಿಸಿ ಪ್ರಭಾವಿಗಳಿಗೆ ಮತ್ತು ಸಮಾಜದ ಕೆಲವೇ ವರ್ಗದವರಿಗೆ ಅದರ ಪ್ರಯೋಜನವನ್ನು ನೀಡುತ್ತಿವೆ ಎಂಬ ಆರೋಪವಿತ್ತು. ದೇಶದ ಸಂಪತ್ತು ಹೀಗೆ ಕೆಲವೇ ವರ್ಗದಲ್ಲಿ ಕೇಂದ್ರೀಕೃತವಾಗುವುದು ರಾಷ್ಟ್ರದ ಹಿತದೃಷ್ಟಿಯಲ್ಲಿ ಒಳ್ಳೆಯ ಬೆಳವಣಿಗೆಯಲ್ಲ ಎಂಬ ಚಿಂತನೆಯಿದ್ದ ಚಂದ್ರಶೇಖರ್, ಕೃಷ್ಣಕಾಂತ್ ಮತ್ತು ಮೋಹನ್ ಧಾರಿಯಾ ಮುಂತಾದ ಪಕ್ಷದ ಯುವನೇತಾರರು ಇಂದಿರಾರ ಮೇಲೆ ಒತ್ತಡ ಹಾಕುತ್ತಿದ್ದರು. ಖಾಸಗಿ ಒಡೆತನವನ್ನು ವಿರೋಧಿಸುವ ಕಮ್ಯುನಿಸ್ಟರು ತಮ್ಮ ಅಜೆಂಡಾ ಪೂರೈಸಿಕೊಳ್ಳಲು ಇಂದಿರಾರಿಗೆ ಸಾಥ್ ನೀಡಿದರು; ಕಾಂಗ್ರೆಸ್‌ನಲ್ಲಿ 'ಸಿಂಡಿಕೇಟ್' ಎಂದು ಕರೆಯಲ್ಪಡುತ್ತಿದ್ದ, ತಮಗೆ ಅಡಚಣೆ ನೀಡುತ್ತಿದ್ದ ಕೆಲವು ಹಿರಿಯ ಕಾಂಗ್ರೆಸ್ಸಿಗರನ್ನು ನಿಯಂತ್ರಿಸಲು ಇಂದಿರಾರಿಗೆ ತುರ್ತಾಗಿ ಒಂದು ಜನಪರ ಆರ್ಥಿಕ ಕಾರ್ಯಕ್ರಮ ಬೇಕಿತ್ತು. ಬ್ಯಾಂಕ್ ಕಾರ್ಮಿಕ ಸಂಘಗಳು ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಒತ್ತಾಯಿಸುತ್ತಲೇ ಇದ್ದವು. 'ಶ್ರೀಸಾಮಾನ್ಯರ ಉಳಿತಾಯದ ಹಣವು ಬ್ಯಾಂಕ್ ಮೂಲಕ ಉಳ್ಳವರ ಉದ್ಧಾರಕ್ಕೆ ಸೀಮಿತವಾಗದೆ, ಶ್ರೀಸಾಮಾನ್ಯರ ಆರ್ಥಿಕ ಬೆಳವಣಿಗೆಗೆ ಬಳಕೆಯಾಗುವಂತಾಗಲು ರಾಷ್ಟ್ರೀಕರಣವೊಂದೇ ಮಾರ್ಗ' ಎಂದು ಅವು ಮುಷ್ಕರ ನಡೆಸುತ್ತಿದ್ದವು. ಆ ಕಾಲಕ್ಕೆ lucrative job ಎನ್ನಲಾಗುತ್ತಿದ್ದ ಬ್ಯಾಂಕ್ ಉದ್ಯೋಗಗಳು ಪ್ರಭಾವಿಗಳ, ಸಂಪರ್ಕ ಉಳ್ಳವರ ಸ್ವತ್ತಾಗಿ, ಶ್ರೀಸಾಮಾನ್ಯರಿಗೆ ಮರೀಚಿಕೆಯಾಗಿದ್ದವು. 'ಟ್ರೇಡ್ ಫೈನಾನ್ಸ್'ನಲ್ಲಿ ತೊಡಗಿದ್ದ ಬಹುತೇಕ ಬ್ಯಾಂಕುಗಳು ದೇಶದ ಸರ್ವೋನ್ನತ ಅಭಿವೃದ್ಧಿಗೆ ಅವಶ್ಯವಾದ ಕೃಷಿ ಮತ್ತು ಸಣ್ಣ ಉದ್ದಿಮೆಗಳನ್ನು ಸಂಪೂರ್ಣ ನಿರ್ಲಕ್ಷಿಸಿದ್ದವು. ಈ ವಾಸ್ತವವೇ ಬ್ಯಾಂಕ್ ರಾಷ್ಟ್ರೀಕರಣಕ್ಕೆ ಪ್ರೇರಣೆ ಎನ್ನಲಾಗುತ್ತದೆ.

ಕೆಲವೇ ಪ್ರದೇಶಗಳಿಗೆ ಸೀಮಿತವಾಗಿದ್ದ ಬ್ಯಾಂಕ್ ಶಾಖೆಗಳ ಜಾಲವು ರಾಷ್ಟ್ರೀಕರಣದಿಂದಾಗಿ ದೇಶದ ಮೂಲೆಮೂಲೆಗೂ ಪಸರಿಸಿತು. ಅಲ್ಲಿಯವರೆಗೆ ನಿರ್ಲಕ್ಷಿಸಲ್ಪಟ್ಟಿದ್ದ ಗ್ರಾಮೀಣ ಜನರಿಗೂ ಬ್ಯಾಂಕಿಂಗ್ ಸೌಲಭ್ಯ ದೊರಕುವಂತೆ ಮಾಡಲು, ಬ್ಯಾಂಕ್ ಶಾಖೆಯನ್ನು ತೆರೆಯುವ ನಿಯಮಾವಳಿಗೆ ತಿದ್ದುಪಡಿ ಮಾಡಿ, 'ಗ್ರಾಮಾಂತರದಲ್ಲಿ 3 ಶಾಖೆಗಳನ್ನು ತೆರೆದರೆ ಮಾತ್ರ ಒಂದು ಶಾಖೆಯನ್ನು ಪಟ್ಟಣ-ನಗರಗಳಲ್ಲಿ ತೆರೆಯಬಹುದು' ಎಂಬ ನಿಬಂಧನೆ ವಿಧಿಸಲಾಯಿತು. ಇದರಿಂದಾಗಿ ಕ್ರಾಂತಿಯೇ ಆಗಿ ಬಹುತೇಕ 'ಬ್ಯಾಂಕ್-ರಹಿತ' ಪ್ರದೇಶಗಳು ಬ್ಯಾಂಕುಗಳನ್ನು ಕಂಡವು. ಬ್ಯಾಂಕುಗಳಿಗಿದ್ದ 'ಕಮರ್ಷಿಯಲ್' ಹಣೆಪಟ್ಟಿ ಕಳಚಿ 'ಸೋಷಿಯಲ್' ಹಣೆಪಟ್ಟಿ ಏರಿಕೊಂಡಿತು. ಬ್ಯಾಂಕುಗಳಿರುವುದು ಕೇವಲ ಲಾಭಗಳಿಕೆಗಷ್ಟೇ ಅಲ್ಲ ಎಂಬ ಪರಿಕಲ್ಪನೆ ಅನಾವರಣಗೊಂಡು ಅವು ಸಾಮಾನ್ಯ ಗ್ರಾಹಕರ ಮನೆಬಾಗಿಲನ್ನು ಬಡಿಯುವಂತಾಯಿತು. ಅಲ್ಲಿಯವರೆಗೆ ನಿರ್ಲಕ್ಷಿಸಲ್ಪಟ್ಟಿದ್ದ ಕೃಷಿ, ಸಣ್ಣ-ಮಧ್ಯಮ ಗಾತ್ರದ ಉದ್ದಿಮೆಗಳು ಇಂದು ಉಚ್ಛ್ರಾಯ ಸ್ಥಿತಿಯಲ್ಲಿದ್ದರೆ, ತನ್ಮೂಲಕ ಉದ್ಯೋಗ ಸೃಷ್ಟಿಯಾಗುತ್ತಿದ್ದರೆ, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಮೈಚಳಿ ಬಿಟ್ಟು ಸಾಲ ನೀಡುವ ಅವುಗಳ ಧೋರಣೆಯೇ ಅದಕ್ಕೆ ಕಾರಣ. ಸರಕಾರದ ಯಾವುದೇ ಜನಪರ ಯೋಜನೆಯನ್ನು ಇವು ನಿಷ್ಠೆಯಿಂದ ಅನುಷ್ಠಾನಕ್ಕೆ ತರುತ್ತವೆ. ಪ್ರಧಾನ ಮಂತ್ರಿಗಳ 'ಜನಧನ' ಯೋಜನೆಯಡಿ ಇವು 55.02 ಕೋಟಿ ಖಾತೆಗಳನ್ನು ತೆರೆದಿದ್ದು ಖಾಸಗಿ ಬ್ಯಾಂಕುಗಳು ಈ ಬಾಬತ್ತಿನಲ್ಲಿ ಭಾರಿ ಹಿಂದಿವೆ. ದೇಶವಿಂದು 4 ಲಕ್ಷ ಕೋಟಿ ಡಾಲರ್ ಆರ್ಥಿಕತೆಯಾಗಿದ್ದು 2026ರ ಹೊತ್ತಿಗೆ 5 ಲಕ್ಷ ಕೋಟಿ ಡಾಲರ್ ಮಟ್ಟವನ್ನು ಮುಟ್ಟುವುದಿದ್ದರೆ, ಅದರಲ್ಲಿ ಈ ಬ್ಯಾಂಕುಗಳ ಪಾತ್ರ ಮಹತ್ವದ್ದಾಗಿದೆ. ಉದ್ಯೋಗ ಸೃಷ್ಟಿಯಲ್ಲೂ ಇವುಗಳ ಕೊಡುಗೆ ಅನನ್ಯವಾದದ್ದು.

ಆದರೆ, ರಾಷ್ಟ್ರೀಕರಣವು ಹಲವು ನಕಾರಾತ್ಮಕ ಬೆಳವಣಿಗೆಗಳನ್ನೂ ಹೊತ್ತು ತಂದಿದೆ. ಬ್ಯಾಂಕುಗಳಲ್ಲಿ ಏರುತ್ತಿರುವ ಸುಸ್ತಿಸಾಲ ಇದಕ್ಕೊಂದು ಉದಾಹರಣೆ. ರಾಷ್ಟ್ರೀಕರಣದ ನಂತರ ಬ್ಯಾಂಕುಗಳು ಉದಾರವಾಗಿ ಸಾಲ ನೀಡಿದ್ದೇ ಈ ಪರಿಸ್ಥಿತಿಗೆ ಕಾರಣ ಎನ್ನುತ್ತಾರೆ ಬ್ಯಾಂಕಿಂಗ್ ವಿಶ್ಲೇಷಕರು. ಸುಮಾರು 15 ಲಕ್ಷ ಕೋಟಿ ರು.ನಷ್ಟು ಸುಸ್ತಿ ಸಾಲವನ್ನು 'ರೈಟ್ ಆಫ್' ಮಾಡಲಾಗಿದ್ದು, 'ಇದು ರಾಷ್ಟ್ರೀಕರಣದ ಫಲಶ್ರುತಿ' ಎಂದು ಕೆಲವರು ಆಡಿಕೊಳ್ಳುತ್ತಾರೆ. ಇದು 'ಸಾಲ ಮನ್ನಾ' ಅಲ್ಲದಿದ್ದರೂ ಬ್ಯಾಂಕಿಂಗ್ ಉದ್ಯಮವನ್ನೇ ನಡುಗಿಸುತ್ತಿದೆ ಎನ್ನುತ್ತಾರೆ ಬಲ್ಲವರು. ಬ್ಯಾಂಕುಗಳಿಗೆ ಷೇರು ಬಂಡವಾಳ ನೀಡಲು ಏದುಸಿರು ಬಿಡುತ್ತಿರುವ ಸರಕಾರವು, ಮುಂದಿನ ದಿನಗಳಲ್ಲಿ ತನ್ನ ಷೇರು ಬಂಡವಾಳದ ಪ್ರಮಾಣವನ್ನು ಶೇ.51ಕ್ಕಿಂತ ಕಡಿಮೆ ಮಾಡಲು ಚಿಂತನೆ ನಡೆಸುತ್ತಿದೆಯಂತೆ. 'ಏರುತ್ತಿರುವ ಸುಸ್ತಿ ಸಾಲವನ್ನು ನಿಯಂತ್ರಿಸಲು ಖಾಸಗೀಕರಣದ ಮಾತು ಕೇಳಿಬರುತ್ತಿದೆ' ಎಂಬುದು ಕಾರ್ಮಿಕ ಸಂಘಗಳ ಆಕ್ರೋಶ (ಸರಕಾರಿ ನಿಯಂತ್ರಿತ ಐಡಿಬಿಐ ಬ್ಯಾಂಕ್‌ನ ಖಾಸಗೀಕರಣದ ಮಾತು ವರ್ಷಗಳಿಂದ ಕೇಳಿಬರುತ್ತಿದೆ). ರಾಷ್ಟ್ರೀಕರಣದ 56ನೇ ವರ್ಷದಲ್ಲಿ ಖಾಸಗೀಕರಣದ ಮಾತು, ಸರಕಾರಿ ಬಂಡವಾಳವನ್ನು ಕ್ರಮೇಣ ತಗ್ಗಿಸುವ ಹೆಸರಿನಲ್ಲಿ ಆಗಾಗ ಸುದ್ದಿಮಾಡುತ್ತಿರುವುದು ವಿಪರ್ಯಾಸ. ಇದು ರಾಷ್ಟ್ರೀಕರಣವನ್ನು ಸರಿಯಾಗಿ ನಿಭಾಯಿಸಲಾಗದ್ದರ ಫಲಶ್ರುತಿಯೇ ವಿನಾ, ಈ ವೈಫಲ್ಯವು ರಾಷ್ಟ್ರೀಕರಣದ ಪರಿಕಲ್ಪನೆಯದಲ್ಲ ಎನ್ನುತ್ತಾರೆ ಕಾರ್ಮಿಕ ಸಂಘಗಳವರು ಮತ್ತು ಪ್ರಗತಿಪರರು.

(ಲೇಖಕರು ರಾಜಕೀಯ ಮತ್ತು ಆರ್ಥಿಕ ವಿಶ್ಲೇಷಕರು)

ಡಾ.ಹೆಡ್ಗೆವಾರ್ ಪ್ರತಿರೂಪ ಬಾಳಾಸಾಹೇಬ್ ದೇವರಸ್

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಗುರೂಜಿಯವರಿಂದ ಹಿಡಿದು ಹಾಲಿ ಸರಸಂಘಚಾಲಕರಾದ ಮೋಹನ್ ಭಾಗವತ್‌ರವರೆಗೆ ಎಲ್ಲರನ್ನೂ ಕಂಡಿರುವ ಮತ್ತು ಅವರ ವಿದ್ವತ್ಪೂರ್ಣ 'ಬೌದ್ಧಿಕ್' ಕೇಳಿರುವ ಅದೃಷ್ಟ ನನ್ನದು. ಸಾಮಾನ್ಯವಾಗಿ ಆರೆಸ್ಸೆಸ್ ಎಂದ ಕೂಡಲೇ ಅದರ ಸಂಸ್ಥಾಪಕ ಡಾ.ಹೆಡ್ಗೆವಾರ್ (ಡಾಕ್ಟರ್‌ಜೀ) ಮತ್ತು ಗುರೂಜಿಯವರ ಹೆಸರು ಮಾತ್ರ ಪ್ರಮುಖವಾಗಿ ಕೇಳಿಬರುತ್ತವೆ. ಅದರೆ ಆರೆಸ್ಸೆಸ್‌ನ ಮೂರನೆಯ ಸರಸಂಘಚಾಲಕರಾದ ಮಾನನೀಯ ಮಧುಕರ ದತ್ತಾತ್ರೇಯ ದೇವರಸ್‌ರವರ (ಬಾಳಾಸಾಹೇಬ್) ಕುರಿತು ಹೆಚ್ಚಿನ ಮಾಹಿತಿ ಹೊರಗಿನ ಬಹುತೇಕರಿಗೆ ತಿಳಿದಿಲ್ಲ. 1925ರಲ್ಲಿ ಕೇಶವ ಬಲಿರಾಂ ಹೆಡ್ಗೇವಾರ್ ಅವರು ಸಂಘವನ್ನು ಸ್ಥಾಪನೆ ಮಾಡಿದ ದಿನದಿಂದ ತಮ್ಮ ಜೀವನದ ಕೊನೆಯ ಉಸಿರು ಇರುವ ತನಕವೂ, ಸಂಘದ ಕಾರ್ಯವನ್ನು ಈಶ್ವರೀಯ ಕೆಲಸವೆಂದು ನಿರಂತರವಾಗಿ ವ್ರತದಂತೆ ನಿರ್ವಹಿಸಿ, ಸಮಾಜಕ್ಕಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡವರು ಬಾಳಾಸಾಹೇಬರು.

ಐವತ್ತು ವರ್ಷಕ್ಕೂ ಹೆಚ್ಚಿನ ಕಾಲ ಆರೆಸ್ಸೆಸ್‌ನ ಸಂಪರ್ಕವಿರುವ ನನಗೂ, ಬಾಳಾಸಾಹೇಬ್ ದೇವರಸ್‌ರವರ ಬದುಕಿನ ಕುರಿತು ಸಂಪೂರ್ಣ ಗೊತ್ತಿರಲಿಲ್ಲ; ಮರಾಠಿ ಭಾಷೆಯಲ್ಲಿರುವ ಅವರ ಪರಿಚಯ ಪುಸ್ತಕದ ಕನ್ನಡ ಭಾವಾನುವಾದವನ್ನು (ಶ್ರೀ ಬಾಳಾಸಾಹೇಬ ದೇವರಸ್: ಸಾರ್ಥಕ ಬದುಕಿನ ಪರಿಚಯ) ಓದಿದ ನಂತರವೇ ಅವರ ಜೀವನದ ಪರಿಚಯವಾಗಿದ್ದು. ಈ ಪುಸ್ತಕವು ಬಾಳಾಸಾಹೇಬರ ಜೀವನದ ಮೇಲಷ್ಟೇ ಬೆಳಕು ಚೆಲ್ಲುವುದಿಲ್ಲ, ಅದರೊಂದಿಗೆ 1925ರಲ್ಲಿ ಪ್ರಾರಂಭವಾದ ಆರೆಸ್ಸೆಸ್‌ನ ಹಂತಹಂತದ ಬೆಳವಣಿಗೆ, ಬದಲಾವಣೆ ಮತ್ತು ಸುಧಾರಣೆಯ ಬಗ್ಗೆಯೂ ಅದು ಮಾಹಿತಿ ನೀಡುತ್ತಾ ಹೋಗುತ್ತದೆ. ಮೋಹಿತೆವಾಡದಲ್ಲಿ ಡಾಕ್ಟರ್‌ಜೀ ಸಂಘವನ್ನು ಆರಂಭಿಸಿದ ಮೊದಲ ದಿನವೇ ಬಾಳಾಸಾಹೇಬರು ಅದರ ಸಂಪರ್ಕಕ್ಕೆ ಬರುತ್ತಾರೆ. ಆಗ ಅವರ ವಯಸ್ಸು ಕೇವಲ 11 ವರ್ಷ. ಅಂದು ಆರಂಭವಾದ ಸಂಘದ ಜತೆಗಿನ ಅವರ ಪಯಣ, ಅವರ ಕೊನೆಯುಸಿರಿನ ತನಕ ಮುಂದುವರಿಯಿತು; ಸ್ವಯಂಸೇವಕರಾಗಿ ಆರಂಭವಾದ ಅವರ 'ಸಂಘಪಯಣ', ಅವರು ಸರಸಂಘಚಾಲಕರಾಗುವ ತನಕ ನಿರಂತರವಾಗಿ ನಡೆಯುತ್ತದೆ. ತಂದೆಯವರಿಗೆ ಮಗ ಐಸಿಎಸ್ ಓದಿ ಸರಕಾರಿ ಅಧಿಕಾರಿಯಾಗಲಿ ಎಂಬ ಹಂಬಲವಿತ್ತು; ಆದರೆ ಡಾಕ್ಟರ್‌ಜೀ ಅವರ ಪ್ರಭಾವಕ್ಕೆ ಬಂದ ಮೇಲೆ ಮಗನ ಬದುಕು ಭಾರತಮಾತೆಯ ಸೇವೆಗೆ ಮುಡಿಪಾಗಿಹೋಯಿತು.

ಬಾಳಾಸಾಹೇಬರ ಸಂಘಕಾರ್ಯವು ಘಟನಾಯಕನ ಸ್ತರದಿಂದ ಪ್ರಾರಂಭವಾಯಿತು. ಮೆಟ್ರಿಕ್ ಪರೀಕ್ಷೆ ಮುಗಿದ ತರುವಾಯ, ಸಂಘಕಾರ್ಯವು ತಮ್ಮ ಜೀವನದ ವ್ರತವಾಗಬೇಕು ಎಂದು ಅವರು ನಿಶ್ಚಯಿಸಿದರು. ಡಾಕ್ಟರ್‌ಜೀ ಅವರಿಗೆ, 'ಸ್ವಯಂಸೇವಕರು ವಾಲಂಟಿಯರ್ಸ್ ಎಂದು ಕರೆಸಿಕೊಳ್ಳಬಾರದು, ಅವರು ಉನ್ನತ ಶಿಕ್ಷಣವನ್ನು ಪಡೆದು ಸಂಘಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು' ಎಂಬ ಸ್ಪಷ್ಟವಾದ ಕಲ್ಪನೆಯಿತ್ತು. ಸ್ವಯಂಸೇವಕನೆಂದರೆ ಸುಶಿಕ್ಷಿತ, ಸದ್ಗುಣಿ, ಸಮಾಜಕ್ಕೆ ಆಧಾರವಾಗುವಂತಿರಬೇಕು ಎಂದು ಡಾಕ್ಟರ್‌ಜೀ ಬಯಸುತ್ತಿದ್ದರು. ಇದರಿಂದಾಗಿ ಸಂಘವು 'ಸ್ವಯಂಸೇವಕ' ಎಂಬ ಪರಿಭಾಷೆಗಿದ್ದ ರೂಢಿಗತ ಪರಿಕಲ್ಪನೆಯನ್ನೇ ಬದಲಾಯಿಸಿತು. 1932ರಲ್ಲಿ ಸ್ವಯಂಸೇವಕರಿಗೆ ಚಳಿಗಾಲದ ಶಿಬಿರ ಆರಂಭವಾಯಿತು. ಬಾಳಾಸಾಹೇಬರಿಗೆ ಡಾಕ್ಟರ್‌ಜೀ ಹಲವು ಜವಾಬ್ದಾರಿಗಳನ್ನು ನೀಡಿದರು. ತಮಗೆ ವಹಿಸಿದ ಕಾರ್ಯಗಳನ್ನು ಅವರು ಶ್ರದ್ಧೆಯಿಂದ ನಿರ್ವಹಿಸಿ ಯಶಸ್ವಿಯಾದರು. 1938ರಲ್ಲಿ ನಡೆದ ಸಂಘ ಶಿಕ್ಷಾ ವರ್ಗಕ್ಕೆ (OTC) ಸಂಬಂಧಿಸಿ ಬಾಳಾಸಾಹೇಬರಿಗೆ ಮುಖ್ಯ ಶಿಕ್ಷಕನ ಜವಾಬ್ದಾರಿಯನ್ನು ನೀಡಲಾಯಿತು. 40 ದಿನಗಳ ಕಾಲ ನಡೆದ ಶಿಬಿರದಲ್ಲಿ ಬಾಳಾಸಾಹೇಬರು ತಮ್ಮ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಅನೇಕ ಹೊಸ ಪದ್ಧತಿಗಳನ್ನು ಪರಿಚಯಿಸುವುದರಲ್ಲಿ ಬಾಳಾಸಾಹೇಬರು ಮುಂಚೂಣಿಯಲ್ಲಿದ್ದರು. ತಮ್ಮ ಉಸ್ತುವಾರಿಯಿದ್ದ ಇತವಾರಿ ಶಾಖೆಯ ವಾರ್ಷಿಕೋತ್ಸವವನ್ನು ನಡೆಸಿದರು. ಅಂದು ಆರಂಭವಾದ ಶಾಖೆಗಳ ವಾರ್ಷಿಕೋತ್ಸವ ಪದ್ಧತಿಯು ಇಂದಿಗೂ ನಡೆದುಕೊಂಡು ಬಂದಿದೆ. ಉತ್ಸಾಹ ತುಂಬುವ ಸಾಂಘಿಕ ಗೀತೆಯನ್ನು ಬಾಳಾಸಾಹೇಬರು ಶಾಖೆಗಳಲ್ಲಿ ಆರಂಭಿಸಿದರು. ಈ ಗೀತೆಯು ಇಂದಿಗೂ ಆರೆಸ್ಸೆಸ್ ಶಾಖೆಗಳಲ್ಲಿ ಆಕರ್ಷಣೆಯ ಭಾಗವಾಗಿದೆ. ಸಂಘದ ಪ್ರಾರ್ಥನೆಯನ್ನು ಸಂಸ್ಕೃತದಲ್ಲಿ ಅಂತಿಮಗೊಳಿಸುವಲ್ಲಿ ಬಾಳಾಸಾಹೇಬರ ಪಾತ್ರವಿತ್ತು. 1940ರ ಸಂಘ ಶಿಕ್ಷಾ ವರ್ಗದಲ್ಲಿ ಇದನ್ನು ಸುಶ್ರಾವ್ಯವಾಗಿ ಮೊದಲು ಹಾಡಿದ್ದು, ಸಂಘಕಾರ್ಯಕ್ಕೆ ಕರ್ನಾಟಕವನ್ನು ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದ ಯಾದವ್‌ರಾವ್ ಜೋಶಿಯವರು.

'ಘೋಷ್ ಪಥಕ' ಆರಂಭಿಸಲು ಸ್ವಯಂಸೇವಕರು ಉತ್ಸಾಹ ತೋರಿದಾಗ, ಘೋಷ್ ವಾದ್ಯವನ್ನು ಖರೀದಿಸಬೇಕಾಗಿ ಬರುತ್ತದೆ; ಕೃಷ್ಣ ಜನ್ಮಾಷ್ಟಮಿಯ ಪೂಜೆಗೆ ಹೋಗಿ, ಅಲ್ಲಿ ಕೊಟ್ಟ ದಕ್ಷಿಣೆಯಲ್ಲಿ ಬಾಳಾಸಾಹೇಬರು ಮತ್ತು ಅವರ ನಾಲ್ವರು ಸಂಗಾತಿಗಳು ಘೋಷ್ ವಾದ್ಯವನ್ನು ಖರೀದಿಸುತ್ತಾರೆ. ಆರಂಭದಲ್ಲಿ ಸ್ವಯಂಸೇವಕರಿಗೆ ಘೋಷ್ ವಾದನ ಕಲಿಸಿದವರು ಓರ್ವ ಕ್ರಿಶ್ಚಿಯನ್ ಬ್ಯಾಂಡ್ ಮಾಸ್ತರ್ ಎಂಬುದು ಗಮನಾರ್ಹ ಸಂಗತಿ.

1928ರಲ್ಲಿ ಮೊದಲ ಬಾರಿಗೆ ಸ್ವಯಂಸೇವಕರಿಗೆ ಪ್ರತಿಜ್ಞಾ ವಿಧಿ ಕಾರ್ಯಕ್ರಮ ನಡೆಯಿತು. ಹನುಮಂತನ ಮೂರ್ತಿಯ ಮುಂದೆ ಪ್ರತಿಜ್ಞೆಯನ್ನು ಬೋಧಿಸಲಾಗುತ್ತಿತ್ತು. 'ಗುರುಸ್ವರೂಪಿ ಭಗವಾಧ್ವಜದ ಮುಂದೆ ಪ್ರತಿಜ್ಞೆ ಸ್ವೀಕರಿಸುತ್ತೇವೆ, ಆದ್ದರಿಂದ ಹನುಮನ ವಿಗ್ರಹ ಬೇಡ' ಎಂಬ ಬಾಳಾಸಾಹೇಬರ ಸಲಹೆಯನ್ನು ಡಾಕ್ಟರ್‌ಜೀ ಒಪ್ಪಿದರು. ಬಾಳಾಸಾಹೇಬರು ಸಂಘದ ಆಜ್ಞೆಗಳಲ್ಲಿ ಸಂಸ್ಕೃತವನ್ನು ಬಳಕೆಗೆ ತಂದರು, ಸ್ವತಃ ಆಜ್ಞೆಗಳನ್ನು ಸಂಸ್ಕೃತದಲ್ಲಿ ರೂಪಿಸಿದರು. ಪಥ ಸಂಚಲನ (Route March), ದಕ್ಷ (attention), ಆರಾಮ (Stand at ease), ಚತುರ್ವ್ಯೂಹ (Column of Four) ಮುಂತಾದ ಆಜ್ಞೆಗಳನ್ನು ಅವರು ರಚಿಸಿ ಸಂಘದ ಶಾಖೆಯಲ್ಲಿ ಅಳವಡಿಕೆ ಮಾಡಿದರು. ಇಂದಿಗೂ ಅವರು ರೂಪಿಸಿದ ಆಜ್ಞೆಗಳೇ ದೇಶಾದ್ಯಂತ ಚಾಲ್ತಿಯಲ್ಲಿರುವುದು. ಶಾಖೆಯಲ್ಲಿ ಧ್ವಜಾರೋಹಣದಿಂದ ಆರಂಭವಾಗಿ ವಿಕಿರ (conclude) ಆಗುವ ತನಕ ಶಾಖೆಯ ಸ್ವರೂಪವನ್ನು ನಿರ್ಣಯಿಸುವ ಹೊಣೆಯನ್ನು ಬಾಳಾಸಾಹೇಬರಿಗೆ ವಹಿಸಲಾಯಿತು. ಅದನ್ನು ಅವರು ಅಚ್ಚುಕಟ್ಟಾಗಿ ರೂಪಿಸಿ, 1940ರ ಸಂಘ ಶಿಕ್ಷಾ ವರ್ಗದಲ್ಲಿ ಅಳವಡಿಸಿಕೊಂಡರು.

ಬಾಳಾಸಾಹೇಬರು ತಮ್ಮ ಕಾನೂನು ಪದವಿಯನ್ನು ಪಡೆದ ನಂತರ, 'ಸಂಘಕಾರ್ಯವೇ ನನ್ನ ಜೀವಿತೋದ್ದೇಶ' ಎಂದು ನಿರ್ಣಯಿಸಿ ಪ್ರಚಾರಕರಾಗಿ ಹೊರಬಿದ್ದರು. 1940ರ ಜೂನ್ 21ರಂದು ಡಾ.ಹೆಡ್ಗೇವಾರರು ಕೊನೆಯುಸಿರೆಳೆದರು. ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ಡಾಕ್ಟರ್‌ಜೀ ಅವರ ಸಂಪರ್ಕಕ್ಕೆ ಬಂದಿದ್ದ ಬಾಳಾಸಾಹೇಬರು, ಅಂತಿಮ ಗಳಿಗೆಯವರೆಗೆ ಅವರ ಜತೆಯಲ್ಲಿದ್ದರು. ಪೂಜನೀಯ ಗುರೂಜಿಯವರು ಬಾಳಾಸಾಹೇಬರನ್ನು 'ಡಾಕ್ಟರ್‌ಜೀ ಅವರ ಪ್ರತಿರೂಪ' ಎಂದೇ ಹೇಳುತ್ತಿದ್ದರು. 1943ರಲ್ಲಿ ಪುಣೆಯ ಸಂಘಶಿಕ್ಷಾ ವರ್ಗದಲ್ಲಿ ಸ್ವಯಂಸೇವಕರಿಗೆ ಅವರನ್ನು ಹಾಗೆಯೇ ಪರಿಚಯ ಮಾಡಿಸಲಾಯಿತು. ಅವರ ನಡೆ-ನುಡಿ-ವ್ಯವಹಾರ ಗಮನಿಸಿದರೆ ಡಾಕ್ಟರ್‌ಜೀ ಹೇಗಿದ್ದರು ಎಂಬುದರ ಅನುಭವವಾಗುತ್ತದೆ ಎಂದು ತಿಳಿಸಲಾಯಿತು. 1963ರಲ್ಲಿ ಬಾಳಾ ಸಾಹೇಬರನ್ನು ಸಹಸರಕಾರ್ಯವಾಹರಾಗಿ ನಿಯುಕ್ತಿಗೊಳಿಸಲಾಯಿತು. ತದನಂತರ 1965ರಲ್ಲಿ ಸರಕಾರ್ಯವಾಹರಾಗಿ ಅವರು ನಿಯೋಜಿಸಲ್ಪಟ್ಟರು. ಸಂಘದ ಪ್ರೇರಣೆ ಪಡೆದ ವಿದ್ಯಾರ್ಥಿ ಪರಿಷತ್, ವಿಶ್ವ ಹಿಂದೂ ಪರಿಷತ್, ಜನಸಂಘ, ವನವಾಸಿ ಕಲ್ಯಾಣ ಪರಿಷತ್ ಸಂಘಟನೆಗಳಲ್ಲಿ ಸಂಘದ ಕಾರ್ಯಕರ್ತರು ರಾಷ್ಟ್ರ ನಿರ್ಮಾಣ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. 'ಸಂಘವು ನೇರವಾಗಿ ಏನನ್ನೂ ಮಾಡುವುದಿಲ್ಲ, ಆದರೆ ಸಂಘದ ಸ್ವಯಂಸೇವಕರು ಯಾವ ಕ್ಷೇತ್ರವನ್ನೂ ಬಿಡುವುದಿಲ್ಲ' ಎಂದು ಹೇಳುವ ಮೂಲಕ ಬಾಳಾಸಾಹೇಬರು ಡಾಕ್ಟರ್‌ಜೀ ಅವರು ಹೇಳಿದ ಮಾತನ್ನು ಉಲ್ಲೇಖಿಸುತ್ತಿದ್ದರು. 'ಸಂಘವು ವಿದ್ಯುಜ್ಜನಕ ಇದ್ದ ಹಾಗೆ. ವಿದ್ಯುತ್ತನ್ನು ಬಳಸಿಕೊಂಡು ಫ್ಯಾನ್, ದೀಪ ಮುಂತಾದವು ಹೇಗೆ ಕೆಲಸ ಮಾಡುತ್ತವೋ, ಹಾಗೆಯೇ ಸಂಘದ ಸಂಸ್ಕಾರ ಪಡೆದ ಸ್ವಯಂಸೇವಕರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಂಘದ ಅಪೇಕ್ಷೆಗೆ ತಕ್ಕ ಹಾಗೆ ಕೆಲಸ ಮಾಡುತ್ತಾರೆ' ಎಂದು ಅವರು ಹೇಳುತ್ತಿದ್ದರು.

1973ರ ಜೂನ್ 5ರಂದು ಪೂಜನೀಯ ಗುರೂಜಿಯವರ ದೇಹಾಂತ್ಯವಾಯಿತು. 33 ವರ್ಷ ಸತತವಾಗಿ ಸಂಘಕಾರ್ಯವನ್ನು ಉತ್ತುಂಗಕ್ಕೆ ಕೊಂಡೊಯ್ದಿದ್ದ ಜೀವವು ಶಾಶ್ವತ ವಿರಾಮವನ್ನು ಪಡೆಯಿತು. ಮಧುಕರ ದತ್ತಾತ್ರೇಯ ದೇವರಸ್ ಎಂಬ ಮೂಲನಾಮದ ಬಾಳಾಸಾಹೇಬರು ಜೂನ್ 6ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂರನೆಯ ಸರಸಂಘಚಾಲಕರಾಗಿ ಜವಾಬ್ದಾರಿಯನ್ನು ಹೊತ್ತರು. ಸರಸಂಘಚಾಲಕರಾಗಿ ವರ್ಷ ಕಳೆಯುವ ಮುನ್ನವೇ 1974ರಲ್ಲಿ ಪುಣೆಯ 'ವಸಂತ ವ್ಯಾಖ್ಯಾನ ಮಾಲೆ' ಎಂಬ ಪ್ರತಿಷ್ಠಿತ ಕಾರ್ಯಕ್ರಮದಲ್ಲಿ, ಸಾಮಾಜಿಕ ಸಾಮರಸ್ಯ ಮತ್ತು ಹಿಂದೂ ಸಂಘಟನೆ ಎಂಬ ವಿಷಯದ ಮೇಲೆ ಬಾಳಾಸಾಹೇಬರು ಉಪನ್ಯಾಸ ನೀಡಿದರು. 'ವರ್ಣವ್ಯವಸ್ಥೆಯ ಕಾಲಮಾನ ಈಗಿಲ್ಲ. ಈಗ ಯಾರು ಬೇಕಾದರೂ, ಯಾವ ಕೆಲಸವನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು. ಅದು ಆನುವಂಶಿಕವಾಗಿ ಉಳಿದಿಲ್ಲ. ಹೀಗಾಗಿ ವರ್ಣವ್ಯವಸ್ಥೆಯು ಅಪ್ರಸ್ತುತ' ಎಂದು ತಿಳಿಸಿದರು. ಸಂಘದವರನ್ನು 'ಮನುವಾದಿಗಳು' ಎಂದು ಅಪಪ್ರಚಾರ ಮಾಡುವವರು ಇದನ್ನು ಅವಶ್ಯವಾಗಿ ಓದಬೇಕಾಗಿದೆ.

ಮುಂದುವರಿದ ಅವರು, ಅಮೆರಿಕದಲ್ಲಿ ಗುಲಾಮಗಿರಿಯನ್ನು ಕೊನೆಗಾಣಿಸಿದ ಅಬ್ರಹಾಂ ಲಿಂಕನ್ If slavery is not wrong Nothing is wrong ಎಂದ ಹಾಗೆ If untouchability is not wrong, Nothing is wrong ಎಂದು ಹೇಳಿ, ಸಮಾಜದಲ್ಲಿ ಇನ್ನೂ ಜೀವಂತವಾಗಿರುವ ಅಸ್ಪೃಶ್ಯತೆಯ ಬಗ್ಗೆ ನೋವಿನಿಂದ ಮಾತನಾಡಿದರು.

ಸಂಘವನ್ನು ನಿಷೇಧಿಸಲು 1975ರ ಜನವರಿಯಲ್ಲಿಯೇ ವಿಧೇಯಕದ ಕರಡು ಸಿದ್ಧವಿತ್ತು. ಮುಂದೆ ಉದ್ಭವವಾಗುವ ಪರಿಸ್ಥಿತಿಯನ್ನು ಎದುರಿಸಲೆಂದು ಸ್ವಯಂಸೇವಕರನ್ನು ಸಜ್ಜುಗೊಳಿಸಲು ಸಂಘದ ಹಿರಿಯ ನಾಯಕರೊಂದಿಗೆ ಬಾಳಾಸಾಹೇಬರು ಮಾತುಕತೆಯನ್ನು ಆರಂಭಿಸಿದರು. ತುರ್ತು ಪರಿಸ್ಥಿತಿಯ ಘೋಷಣೆಯಾದ ಕೂಡಲೇ 1200 ಪ್ರಚಾರಕರು ಭೂಗತರಾದರು. ಮುಂದಿನ ಹೋರಾಟಕ್ಕೆ ವೇದಿಕೆಯನ್ನು ಸಿದ್ಧಮಾಡಲೆಂದು ಈ ಎಲ್ಲ ಯೋಜನೆಯನ್ನು ಕೈಗೊಳ್ಳಲಾಗಿತ್ತು. ಸಂಘದ ಮುಂದಾಲೋಚನೆಯ ಆಳ-ಅಗಲವು, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರ ಊಹೆಗೂ ಮೀರಿದ್ದಾಗಿತ್ತು.

ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ, ಜನಸಂಘವನ್ನು ಜನತಾಪಾರ್ಟಿಯಲ್ಲಿ ವಿಲೀನಗೊಳಿಸಲು ಅನುಮತಿಸಲಾಯಿತು. ಆದರೆ, ಇಂದಿರಾರನ್ನು ಸೋಲಿಸಿ ಅಧಿಕಾರಕ್ಕೆ ಬಂದ ಜನತಾ ನಾಯಕರಿಗೆ, ದೇಶವನ್ನಾಳುವ ಚಿಂತೆಗಿಂತ ಆರೆಸ್ಸೆಸ್‌ನ ಚಿಂತೆ ಹೆಚ್ಚಾಯಿತು. ಮಧು ಲಿಮಯೆ 'ದ್ವಿಸದಸ್ಯತ್ವ'ದ ಗುಮ್ಮನನ್ನು ಮುಂದಿಟ್ಟುಕೊಂಡು 'ಜನಸಂಘದ ಸದಸ್ಯರು ಆರೆಸ್ಸೆಸ್‌ನ ಸದಸ್ಯತ್ವವನ್ನು ಬಿಡಬೇಕು' ಎಂಬ ಆತ್ಮಘಾತುಕ ವಾದವನ್ನು ಮುಂದಿಟ್ಟರು. ಇದನ್ನು ಧಿಕ್ಕರಿಸಿದ ಜನಸಂಘದ ಸದಸ್ಯರು ಜನತಾ ಪಾರ್ಟಿಯಿಂದ ಹೊರಬಂದರು.

ಸಂಘದ ಮೇಲೆ ಹೇರಲಾಗಿದ್ದ ಮೂರು ನಿರ್ಬಂಧಗಳನ್ನು ಕಂಡ ಬಾಳಾಸಾಹೇಬರು, ಅದನ್ನು ಎದುರಿಸಿ ಸರಕಾರವನ್ನು ಬಗ್ಗಿಸಿದ್ದರು. ಹಾಗೆಯೇ 1996ರಲ್ಲಿ, ಸಂಘದ ಸ್ವಯಂಸೇವಕರಾದ ವಾಜಪೇಯಿಯವರು ದೇಶದ ಪ್ರಧಾನಿಯಾಗಿದ್ದನ್ನು ಕಂಡ ಅದೃಷ್ಟ ಅವರದ್ದು. 1996ರಲ್ಲಿ ಅವರು ವಿಧಿವಶರಾದರು. ತಮ್ಮ ಅಂತ್ಯಕ್ರಿಯೆ ರೇಷಮ್‌ಬಾಗ್‌ನಲ್ಲಿ ನಡೆಯಬಾರದು, ಜನಸಾಮಾನ್ಯರ ಅಂತ್ಯಕ್ರಿಯೆ ನಡೆಯುವ ಸಾಧಾರಣ ಸ್ಮಶಾನದಲ್ಲಿ ನಡೆಯಬೇಕು ಎಂದು ಅವರು ಮೊದಲೇ ತಿಳಿಸಿದ್ದುಂಟು. ಅವರ ಇಚ್ಛೆಯಂತೆಯೇ ಅಂತ್ಯಕ್ರಿಯೆ ನಡೆಯಿತು. ಸಂಘದೊಂದಿಗೆ ಬೆಸೆದುಹೋಗಿದ್ದ ಬಾಳಾಸಾಹೇಬರ ಬಾಂಧವ್ಯ ಈ ಇಹಲೋಕದಿಂದ ಕಳಚಿಕೊಂಡಿತು. ನಾನು ಓದಿದ ಪುಸ್ತಕದ ಪ್ರತಿಯೊಂದು ಹಾಳೆಯಲ್ಲೂ, ಸಂಘದೊಂದಿಗೆ ಬಾಳಾಸಾಹೇಬರಿಗೆ ಇದ್ದ ಗಾಢನಂಟಿನ ಅನುಭವವಾಗುತ್ತದೆ. ಸಂಘವು ಪ್ರಾರಂಭವಾದ ಮೊದಲ ದಿನದಿಂದ, ತಮ್ಮ ಕೊನೆಯುಸಿರು ಇರುವವರೆಗೆ ಸಂಘಕಾರ್ಯಕ್ಕೆ ಸಮರ್ಪಿಸಿಕೊಂಡಿದ್ದ ಬಾಳಾಸಾಹೇಬರು ಆರೆಸ್ಸೆಸ್‌ನ ಸ್ವಯಂಸೇವಕರಿಗೆ ಸದಾಕಾಲವೂ ಆದರ್ಶವಾಗಿ ಉಳಿದಿದ್ದಾರೆ.

(ಲೇಖಕರು ಬಿಜೆಪಿಯ ವಕ್ತಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 74

ಸಮಾಚಾರ ಸಣ್ಣದಲ್ಲ

ಅಮೆರಿಕದ ಅಲಾಸ್ಕಾದಲ್ಲಿ 7.3 ತೀವ್ರತೆ ಭೂಕಂಪ

ವಾಷಿಂಗ್ಟನ್: ಅಮೆರಿಕದ ಅಲಾಸ್ಕಾ ರಾಜ್ಯದ ಕರಾವಳಿಯಲ್ಲಿ ರಿಕ್ಟರ್ ಮಾಪಕದಲ್ಲಿ 7.3 ತೀವ್ರತೆಯ ಭೂಕಂಪ ಸಂಭವಿಸಿದ್ದು, ಅಧಿಕಾರಿಗಳು ಸುನಾಮಿ ಎಚ್ಚರಿಕೆ ನೀಡಿದ್ದಾರೆ. ಭೂಕಂಪದ ಕೇಂದ್ರಬಿಂದು ದ್ವೀಪ ಪಟ್ಟಣವಾದ ಸ್ಯಾಂಡ್ ಪಾಯಿಂಟ್‌ನಿಂದ 87 ಕಿಲೋಮೀಟರ್ ದಕ್ಷಿಣದಲ್ಲಿದೆ ಎಂದು ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ. ಭೂಕಂಪದ ಕೇಂದ್ರಬಿಂದುವಿನ ಆಳ 20.1 ಕಿಲೋಮೀಟರ್ ಆಗಿತ್ತು. ಭಾರೀ ಭೂಕಂಪದ ನಂತರ ದಕ್ಷಿಣ ಅಲಾಸ್ಕಾ ಮತ್ತು ಅಲಾಸ್ಕಾ ಪರ್ಯಾಯ ದ್ವೀಪಕ್ಕೆ ಅಧಿಕಾರಿಗಳು ಸುನಾಮಿ ಎಚ್ಚರಿಕೆ ನೀಡಿದ್ದಾರೆ. ದಕ್ಷಿಣ ಅಲಾಸ್ಕಾ ಮತ್ತು ಅಲಾಸ್ಕಾ ಪರ್ಯಾಯ ದ್ವೀಪ, ಅಲಾಸ್ಕಾದ ಕೆನಡಿ ಪ್ರವೇಶ ದ್ವಾರದಿಂದ (ಹೋಮರ್‌ನಿಂದ 40 ಮೈಲಿ ವಾಯುವ್ಯ) ಅಲಾಸ್ಕಾದ ಯುನಿಮಾಕ್ ಪಾಸ್‌ವರೆಗೆ (ಉನಾಲಸ್ಕಾದಿಂದ 80 ಮೈಲಿ ಈಶಾನ್ಯ) ಪೆಸಿಫಿಕ್ ಕರಾವಳಿಗಳಿಗೆ ಈ ಎಚ್ಚರಿಕೆ ನೀಡಲಾಗಿದೆ.

ಇರಾಕ್‌ನ ಮಾಲ್‌ಗೆ ಬೆಂಕಿ: 50 ಸಾವು

ಬಾಗ್ದಾದ್ (ಇರಾಕ್): ಪೂರ್ವ ಇರಾಕ್‌ನ ವಾಸಿತ್ ಪ್ರಾಂತ್ಯದ ಕುಟ್ ಪಟ್ಟಣದಲ್ಲಿನ ಮಾಲ್‌ವೊಂದು ಬೆಂಕಿಗೆ ಆಹುತಿಯಾಗಿದ್ದು ಮಹಿಳೆಯರು, ಮಕ್ಕಳು ಸೇರಿ 50 ಮಂದಿ ಸಾವಿಗೀಡಾಗಿದ್ದು, ದುರ್ಘಟನೆಯಲ್ಲಿ ಹಲವರು ತೀವ್ರವಾಗಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಅಲ್ಲಿನ ಗವರ್ನರ್ ತಿಳಿಸಿದ್ದಾರೆ. ಎಂದಿನಂತೆ ಮಾಲ್‌ನಲ್ಲಿ ಜನರು ಖರೀದಿಯಲ್ಲಿ ತೊಡಗಿದ್ದಾಗ, ಏಕಾಏಕಿ ಬೆಂಕಿ ಹೊತ್ತಿಕೊಂಡಿದೆ. ಕೆಲವೇ ನಿಮಿಷಗಳಲ್ಲಿ ಬಹು ಮಹಡಿಗಳಿಗೆ ವ್ಯಾಪಿಸಿದ್ದು, ಅದರಿಂದ ಗ್ರಾಹಕರು ಹೊರಬರಲಾಗದೇ ಬೆಂಕಿಗೆ ಸಿಲುಕಿದ್ದಾರೆ. ಭೀಕರ ದುರಂತದ ಹಿನ್ನೆಲೆ, ಪ್ರಾಂತ್ಯದಲ್ಲಿ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಮಾಲ್‌ನಲ್ಲಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ಏನೆಂಬುದು ತಿಳಿದು ಬಂದಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಕಟ್ಟಡ ಮಾಲೀಕರ ವಿರುದ್ಧ ಕಾನೂನುರೀತ್ಯ ಪ್ರಕರಣ ದಾಖಲಿಸಲು ಸೂಚಿಸಲಾಗಿದೆ ಎಂದು ಗವರ್ನರ್ ಹೇಳಿದ್ದಾರೆ.

ಆಕಾಶ್ ಪ್ರೈಮ್ ಕ್ಷಿಪಣಿ ಯಶಸ್ವಿಯಾದ ಪರೀಕ್ಷೆ

ದೆಹಲಿ: ಭಾರತೀಯ ಸೇನೆ ಲಡಾಖ್‌ನಲ್ಲಿ ಆಕಾಶ್ ಪ್ರೈಮ್ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ ಎಂದು ರಕ್ಷಣಾ ಸಚಿವಾಲಯ ಗುರುವಾರ ತಿಳಿಸಿದೆ. ಭಾರತೀಯ ಸೇನೆಗಾಗಿ ಈ ಆಕಾಶ್ ಕ್ಷಿಪಣಿ ವ್ಯವಸ್ಥೆಯನ್ನು ನವೀಕರಿಸಲಾಗಿದ್ದು, 4,500 ಮೀಟರ್ ಎತ್ತರದಲ್ಲಿ ಕಾರ್ಯನಿರ್ವಹಿಸುವಂತೆ ನಿರ್ಮಾಣ ಮಾಡಲಾಗಿದೆ. ಭಾರತ, ಜುಲೈ 16ರಂದು ಲಡಾಖ್‌ನಲ್ಲಿ ಎರಡು ವೈಮಾನಿಕ ಹೈಸ್ಪೀಡ್ ಮಾನವರಹಿತ ಗುರಿಗಳನ್ನು ನವೀಕರಿಸಿದ ರೂಪಾಂತರವಾದ ಆಕಾಶ್ ಪ್ರೈಮ್ ಯಶಸ್ವಿಯಾಗಿ ನಾಶಪಡಿಸುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ ಎಂದು ಸಚಿವಾಲಯ ತಿಳಿಸಿದೆ. ಇದು ಭಾರತದ ವಾಯು ರಕ್ಷಣಾ ಸಾಮರ್ಥ್ಯಗಳಿಗೆ ಪ್ರಮುಖ ಉತ್ತೇಜನ ಕ್ರಮವಾಗಿದೆ. ಭಾರತೀಯ ಸೇನೆಯು ಇಂದು ಲಡಾಖ್ ನಲ್ಲಿ ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಆಕಾಶ್ ಪ್ರೈಮ್, ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯ ಉನ್ನತ ಎತ್ತರದ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿತು ಎಂದ ಸಚಿವಾಲಯ ತಿಳಿಸಿದೆ.

ವಿಜಯ್‌ಗೆ ನೋಟಿಸ್

ಚೆನ್ನೈ: ಪಕ್ಷದ ಧ್ವಜ ವಿನ್ಯಾಸಕ್ಕೆ ಸಂಬಂಧಿಸಿದಂತೆ ಟ್ರೇಡ್‌ಮಾರ್ಕ್ ಮತ್ತು ಹಕ್ಕುಸ್ವಾಮ್ಯ ಉಲ್ಲಂಘನೆಯನ್ನು ಆರೋಪಿಸಿ ಸಲ್ಲಿಸಲಾದ ಸಿವಿಲ್ ಮೊಕದ್ದಮೆಯಲ್ಲಿ ಮದ್ರಾಸ್ ಹೈಕೋರ್ಟ್ ಗುರುವಾರ ನಟ ವಿಜಯ್ ಮತ್ತು ಅವರ ರಾಜಕೀಯ ಪಕ್ಷವಾದ ತಮಿಳಗ ವೆಟ್ರಿ ಕಳಗಂಗೆ (ಟಿವಿಕೆ) ನೋಟಿಸ್ ಜಾರಿ ಮಾಡಿದೆ.

ಕೇಂದ್ರ ಸರಕಾರದ ವಸತಿ ಮತ್ತು ನಗರ ವ್ಯವಹಾರದ ಸಚಿವಾಲಯದ ಪ್ರಶಸ್ತಿ | ರಾಷ್ಟ್ರಪತಿಯಿಂದ ಪ್ರಶಸ್ತಿ ಪ್ರದಾನ

ಸತತ 8ನೇ ಬಾರಿ ಇಂದೋರ್ ದೇಶದ ಸ್ವಚ್ಛ ನಗರ

ದೆಹಲಿ: ಕೇಂದ್ರ ಸರಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನೀಡುವ ಸ್ವಚ್ಛ ಸರ್ವೇಕ್ಷಣ್ 2024-25ನೇ ಸಾಲಿನ ಪ್ರಶಸ್ತಿಯನ್ನು ರಾಜಧಾನಿಯ ವಿಜ್ಞಾನ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಗುರುವಾರ ಪ್ರದಾನ ಮಾಡಿದ್ದಾರೆ.

ಕಳೆದ ಆರ್ಥಿಕ ವರ್ಷದ ಪ್ರಶಸ್ತಿ ಇದಾಗಿದ್ದು, 10 ಲಕ್ಷಕ್ಕಿಂತ ಹೆಚ್ಚಿನ ಸ್ವಚ್ಛ ಜನಸಂಖ್ಯಾ ನಗರಗಳ ಪೈಕಿ ಮಧ್ಯ ಪ್ರದೇಶದ ಇಂದೋರ್ ನಗರವು ದೇಶದ ಅತ್ಯಂತ ಸ್ವಚ್ಛ ನಗರಿ ಎನ್ನುವ ಹೆಮ್ಮೆಗೆ ಮತ್ತೊಮ್ಮೆ ಪಾತ್ರವಾಗಿದೆ. ಆ ಮೂಲಕ ಸತತವಾಗಿ ಎಂಟನೇ ಬಾರಿಗೆ ಮೊದಲ ಸ್ಥಾನವನ್ನು ಇಂದೋರ್ ಉಳಿಸಿಕೊಂಡಿದೆ. ಎರಡನೇ ಮತ್ತು ಮೂರನೇ ಸ್ಥಾನವನ್ನು ಕ್ರಮವಾಗಿ ಗುಜರಾತ್‌ನ ಸೂರತ್ ಮತ್ತು ಮಹಾರಾಷ್ಟ್ರದ ನವಿ ಮುಂಬಯಿ ನಗರ ಪಡೆದುಕೊಂಡಿದೆ.

ಮೂರರಿಂದ ಹತ್ತು ಲಕ್ಷ ಜನಸಂಖ್ಯೆಯ ವಿಭಾಗದಲ್ಲಿ ಉತ್ತರ ಪ್ರದೇಶದ ನೋಯ್ಡಾ ಮೊದಲ ಸ್ಥಾನವನ್ನು ಪಡೆದಿದೆ. ಈ ಪಟ್ಟಿಯಲ್ಲಿ ಎರಡನೇ ಸ್ಥಾನ ಚಂಡೀಗಢ ಮತ್ತು ಮೂರನೇ ಸ್ಥಾನವನ್ನು ಕರ್ನಾಟಕದ ಮೈಸೂರು ನಗರ ಪಡೆದುಕೊಂಡಿದೆ. ಹತ್ತು ಲಕ್ಷಕ್ಕಿಂತ ಮೇಲಿನ ಜನಸಂಖ್ಯೆಯ ನಗರದಲ್ಲಿ ಗುಜರಾತಿನ ಅಹಮದಾಬಾದ್ ಮೊದಲ ಸ್ಥಾನದಲ್ಲಿದೆ. ದೇಶದ ಪಟ್ಟಣಗಳು ಮತ್ತು ನಗರಗಳನ್ನು ಉತ್ತಮ ವಾಸಸ್ಥಾನಗಳನ್ನಾಗಿ ಮಾಡುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ಆರಂಭಿಸಲಾಗಿತ್ತು. ಇಲಾಖೆಯ ಮಾನದಂಡದ ಪ್ರಕಾರ ಈ ಪಟ್ಟಿಯನ್ನು ಸಿದ್ಧ ಪಡಿಸಲಾಗುತ್ತದೆ. ಸ್ವಚ್ಛ ಸರ್ವೇಕ್ಷಣ್ ಅಭಿಯಾನದ ಮೂಲ ಗುರಿ ಏನೆಂದರೆ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರನ್ನು ಸ್ವಚ್ಛತಾ ಅಭಿಯಾನದಲ್ಲಿ ಭಾಗವಹಿಸಲು ಉತ್ತೇಜಿಸುವುದು ಮತ್ತು ಸ್ವಚ್ಛತೆ ಎಷ್ಟು ಮುಖ್ಯ ಎನ್ನುವುದನ್ನು ಸಮಾಜದ ಎಲ್ಲಾ ವರ್ಗದಲ್ಲಿ ಜಾಗೃತಿ ಮೂಡಿಸುವ ಉದ್ದೇಶವನ್ನು ಹೊಂದುವುದಾಗಿದೆ.

ಈ ಅಭಿಯಾನವನ್ನು ದೇಶದ ವಿವಿಧ ಸುಮಾರು 4,500 ನಗರಗಳಲ್ಲಿ (ಪಟ್ಟಣ) ನಡೆಸಲಾಗುತ್ತದೆ. ಒಂಬತ್ತು ವರ್ಷಗಳ ಹಿಂದೆ ಪ್ರಶಸ್ತಿ ನೀಡುವ ಪದ್ಧತಿಯನ್ನು ಆರಂಭಿಸಲಾಗಿದ್ದು, ಅದರಲ್ಲಿ ಎಂಟು ಬಾರಿ ಇಂದೋರ್ ಮೊದಲ ಸ್ಥಾನವನ್ನು ಪಡೆದಿದೆ. ಈ ಬಾರಿ ಸೂಪರ್ ಸ್ವಚ್ಛ ಲೀಗ್ ಮತ್ತು ಮೂರು ಸ್ವಚ್ಛ ನಗರ ಪ್ರಶಸ್ತಿಯನ್ನು (ಜನಸಂಖ್ಯೆ ಆಧರಿಸಿ) ನೀಡಲಾಗಿತ್ತು.

ಸ್ವಚ್ಛ ನಗರ ಯಾವುದು ಎನ್ನುವುದನ್ನು ಹತ್ತು ಮಾನದಂಡಗಳು ಮತ್ತು 54 ವಿವಿಧ ಸೂಚಕಗಳ ಮೂಲಕ ನಿರ್ಧಾರ ಮಾಡಲಾಗುತ್ತದೆ. ಅದರಲ್ಲಿ ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ, ಒಳಚರಂಡಿ ವ್ಯವಸ್ಥೆ ಮುಂತಾದ ಮಾನದಂಡಗಳೂ ಪ್ರಮುಖವಾಗಿದೆ. ಒಟ್ಟಾರೆಯಾಗಿ ತಮ್ಮ ತಮ್ಮ ನಗರ ಪ್ರದೇಶಗಳನ್ನು ಸ್ವಚ್ಛವಾಗಿಡಲು ಸ್ಪರ್ಧೆಯಿರಲಿ, ಆ ಮೂಲಕ ದೇಶದ ಎಲ್ಲಾ ಭಾಗವು ಸ್ವಚ್ಛವಾಗಿರಲಿ ಎನ್ನುವುದು ಈ ಪ್ರಶಸ್ತಿ ನೀಡುವ ಪದ್ಧತಿ ಆರಂಭವಾಗಲು ಮೂಲ ಕಾರಣ. ಒಟ್ಟಾರೆಯಾಗಿ ಸ್ವಚ್ಛ ಸರ್ವೇಕ್ಷಣ ಮುಖ್ಯ ಗುರಿ ಎಂದು ಇಲಾಖೆಯ ಅಧಿಕಾರಿಗಳು ವಿವರಿಸಿದ್ದಾರೆ.

ಸ್ವಚ್ಛಸರ್ವೇಕ್ಷಣ್ 2024-25ನೇ ಸಾಲಿನ ಪ್ರಶಸ್ತಿಯನ್ನು ರಾಷ್ಟ್ರಪತಿ ಪ್ರದಾನ ಮಾಡಿದರು.

ಮೈಸೂರಿಗೆ ಸ್ವಚ್ಛ ಲೀಗ್ ಪ್ರಶಸ್ತಿ

2024-25ನೇ ಸಾಲಿನ ಸ್ವಚ್ಛ ಸರ್ವೇಕ್ಷಣೆಯ 3 ಲಕ್ಷದಿಂದ 10 ಲಕ್ಷ ಸ್ವಚ್ಛ ಜನಸಂಖ್ಯಾ ನಗರಗಳಲ್ಲಿ ಸಾಂಸ್ಕೃತಿಕ ನಗರಿ ಮೈಸೂರು 3ನೇ ಸ್ಥಾನ ಪಡೆದು ಸೂಪರ್ ಸ್ವಚ್ಛ ಲೀಗ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ದೆಹಲಿಯಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಪ್ರಶಸ್ತಿ ಸ್ವೀಕರಿಸಿದರು. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಸ್ವಚ್ಛತೆಯ ವಿಚಾರದಲ್ಲಿ ನಗರ-ನಗರಗಳ ನಡುವೆ ಆರೋಗ್ಯಕರ ಪೈಪೋಟಿ ಏರ್ಪಡಿಸುವ ಉದ್ದೇಶದಿಂದ ಪ್ರಥಮ ಬಾರಿಗೆ ಸೂಪರ್ ಸ್ವಚ್ಛ ಲೀಗ್ ಪ್ರಶಸ್ತಿ ಪ್ರಾರಂಭಿಸಿತ್ತು. 3ರಿಂದ 10 ಲಕ್ಷ ಜನಸಂಖ್ಯೆ ಹೊಂದಿರುವ ಬಿಗ್ ಸಿಟಿ ವಿಭಾಗದಲ್ಲಿ ಮೈಸೂರು ಸೇರಿದಂತೆ ಚಂಡೀಗಢ, ನೋಯ್ಡಾ, ಉಜ್ಜೈನ್, ಗಾಂಧಿನಗರ ಮತ್ತು ಗುಂಟೂರ್ ನಗರಗಳಿಗೂ ಕೂಡ ಪ್ರಶಸ್ತಿ ಲಭಿಸಿದೆ.

ಇಂದೋರ್‌ನ ವೈಶಿಷ್ಟ್ಯಗಳು

ಜನಸಂಖ್ಯೆ	32,76,697
ಐತಿಹಾಸಿಕ ಹೆಗ್ಗುರುತುಗಳು	ರಾಜವಾಡ, ಲಾಲ್ಬಾಗ್ ಅರಮನೆ, ಸರಾಫಾ ಬಜಾರ್
ಭೇಟಿ ನೀಡಲು ಸೂಕ್ತ ಸಮಯ	ಅಕ್ಟೋಬರ್-ಏಪ್ರಿಲ್
ಪ್ರಮುಖ ಆಕರ್ಷಣೆಗಳು	ಜಾನಪವ್ ಕುಟಿ, ರಾಲಮಂಡಲ್ ಇಂದೋರ್, ಅನ್ನಪೂರ್ಣ ದೇವಸ್ಥಾನ, ಚೋರಲ್ ಡ್ಯಾಮ್ ಮೊವ್, ಖಜ್ರಾನಾ ದೇವಸ್ಥಾನ
ಸುಸ್ಥಿರತಾ ಉಪಕ್ರಮಗಳು	ತ್ಯಾಜ್ಯ ಮಾದರಿ, ಇಂಗಾಲ ನಿರ್ವಹಣೆ, ತ್ಯಾಜ್ಯದಿಂದ ಬಳಸಬಹುದಾದ ಉತ್ಪನ್ನಗಳ ಬಳಕೆ
ಪ್ರಶಸ್ತಿಗಳು ಮತ್ತು ಮನ್ನಣೆ	ಭಾರತದ ಅತ್ಯಂತ ಸ್ವಚ್ಛ ನಗರ (ಸತತ 7 ವರ್ಷಗಳು), ರಾಷ್ಟ್ರೀಯ ಸ್ಮಾರ್ಟ್ ಸಿಟಿ ಪ್ರಶಸ್ತಿ ಇತ್ಯಾದಿ.

ಇಂದೋರ್‌ಗೇ ಏಕೆ ಪ್ರಶಸ್ತಿಯ ಗರಿ?

ಇಂದೋರ್ ನಗರವು ಕಟ್ಟುನಿಟ್ಟಾದ ತ್ಯಾಜ್ಯ ವಿಂಗಡಣೆಯನ್ನು ಜಾರಿಗೆ ತಂದಿದೆ. ಆ ನಗರದಲ್ಲಿ ವಾಸಿಸುವ ನಿವಾಸಿಗಳಲ್ಲಿ ಜಾಗೃತಿ ಮೂಡಿಸಲು ಬಹಳಷ್ಟು ಅಭಿಯಾನ ಪ್ರಾರಂಭಿಸಿತ್ತು. ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಸ್ವತಃ ಈ ಸಲವೂ ಸ್ವಚ್ಛ ಸರ್ವೇಕ್ಷಣ್ 2024-25 ಪ್ರಶಸ್ತಿಗಳಲ್ಲಿ ಇಂದೋರ್‌ಗೆ ಅಗ್ರಸ್ಥಾನ ವನ್ನು ಪಡೆಯನಹುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಕೆಲವು ದಿನಗಳಲ್ಲೇ ಈ ಘೋಷಣೆ ಹೊರಬಿದ್ದಿದೆ.

ಭಾರತದ ಜನಸಂಖ್ಯೆ ಆಧಾರಿತ ಸ್ವಚ್ಛ ನಗರಗಳು

10 ಲಕ್ಷಕ್ಕಿಂತ ಹೆಚ್ಚಿನ ಸ್ವಚ್ಛ ಜನಸಂಖ್ಯಾ ನಗರಗಳು
1) ಇಂದೋರ್
2) ಸೂರತ್
3) ನವಿ ಮುಂಬೈ
4) ವಿಜಯವಾಡ

3 ಲಕ್ಷದಿಂದ 10 ಲಕ್ಷದವರೆಗಿನ ಸ್ವಚ್ಛ ಜನಸಂಖ್ಯಾ ನಗರಗಳು
1) ನೋಯ್ಡಾ 2) ಚಂಡೀಗಢ
3) ಮೈಸೂರು 4) ಉಜ್ಜೈನಿ
5) ಗಾಂಧೀ ನಗರ 6) ಗುಂಟೂರು

50,000 ದಿಂದ 3ಲಕ್ಷದವರೆಗಿನ ಸ್ವಚ್ಛ ಜನಸಂಖ್ಯಾ ನಗರಗಳು
1) ನ್ಯೂಡೆಲ್ಲಿ ಮುನ್ಸಿಪಲ್ ಕೌನ್ಸಿಲ್
2) ತಿರುಪತಿ
3) ಅಂಬಿಕಾಪುರ್
4) ಲೋನಾವಾಲ

20ಸಾವಿರದಿಂದ 50 ಸಾವಿರವರೆಗಿನ ಸ್ವಚ್ಛ ಜನಸಂಖ್ಯಾ ನಗರಗಳು
1) ವಿಟಾ 2) ಸಾಸ್ವಾಡ್ 2) ದೇವಲಾಲಿ ಪ್ರವರಾ 3) ಡುಂಗಾರ್‌ಪುರ್

ಮಳೆ: ಅಮರನಾಥ ಯಾತ್ರೆ ಸ್ಥಗಿತ

ಜಮ್ಮು: ಕಣಿವೆನಾಡಿನ ಹಲವೆಡೆ ಕಳೆದ 36 ಗಂಟೆಗಳಿಂದ ನಿರಂತರವಾಗಿ ಸುರಿಯುತ್ತಿರುವ ಭಾರಿ ಮಳೆ ಹಿನ್ನೆಲೆಯಲ್ಲಿ ಅಮರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಂಡೇರ್ಬಲ್ ಜಿಲ್ಲೆಯ ಯಾತ್ರೆಯ ಬಾಲ್ಟಾಲ್ ಮಾರ್ಗದಲ್ಲಿ ಭೂಕುಸಿತ ಸಂಭವಿಸಿ, ಮಹಿಳಾ ಯಾತ್ರಿಕರೊಬ್ಬರು ಸಾವನ್ನಪ್ಪಿ, ಮೂವರು ಗಾಯಗೊಂಡ ಘಟನೆ ವರದಿಯಾದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಕಣಿವೆನಾಡಿನ ಹಲವೆಡೆ ಧಾರಾಕಾರ ವರ್ಷಧಾರೆ ಮುಂದುವರೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಭರದಿಂದ ಸಾಗಿರುವ ದುರಸ್ತಿ ಕಾರ್ಯ: ಕಳೆದೆರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹಲವೆಡೆ ಭೂಕುಸಿತ ಉಂಟಾಗಿದ್ದು, ಗುರುವಾರ ಪಹಲ್ಗಾಮ್ ಮತ್ತು ಬಾಲ್ಟಾಲ್ ಮಾರ್ಗದಲ್ಲಿ ಯಾತ್ರೆಯು ಸ್ಥಗಿತಗೊಂಡಿದೆ. ಎರಡೂ ಮಾರ್ಗದಲ್ಲಿ ಮತ್ತೆ ಸಂಚಾರ ಆರಂಭಕ್ಕೆ ದುರಸ್ತಿ ಕಾರ್ಯ ಸಾಗಿದೆ. ದುರಸ್ತಿ ಪೂರ್ಣಗೊಂಡ ಬಳಿಕ ಈ ಎರಡೂ ಮಾರ್ಗದಲ್ಲಿನ ಯಾತ್ರೆಗೆ ಮತ್ತೆ ಚಾಲನೆ ನೀಡಲಾಗುವುದು ಎಂದು ಕಾಶ್ಮೀರ ವಿಭಾಗಿಯ ಕಮಿಷನರ್ ವಿಜಯ್ ಕುಮಾರ್ ತಿಳಿಸಿದ್ದಾರೆ. ಹವಾಮಾನ ಮತ್ತು ಮಳೆ ಮುನ್ಸೂಚನೆ ಅರಿತುಕೊಂಡು, ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ಎರಡು ದಿನಗಳ ಕಾಲ ಮಳೆಯಾಗಬಹುದು ಎಂಬ ಮುನ್ನೆಚ್ಚರಿಕೆ ನೀಡಿದೆ.

ಆ.1ರಿಂದಲೇ 125 ಯೂನಿಟ್ ಉಚಿತ ವಿದ್ಯುತ್: ನಿತೀಶ್

ಬಿಹಾರದಲ್ಲೂ ಶಕ್ತಿ ಯೋಜನೆ ಜಾರಿ

ಪಟನಾ: ಬಿಹಾರ ವಿಧಾನಸಭೆ ಚುನಾವಣೆಗೆ ಮುಂಚಿತವಾಗಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಜನಪರ ಘೋಷಣೆ ಮಾಡಿದ್ದು, ಆಗಸ್ಟ್ 1ರಿಂದ ರಾಜ್ಯದ ಎಲ್ಲ ಗೃಹ ಬಳಕೆದಾರರಿಗೆ 125 ಯೂನಿಟ್‌ಗಳವರೆಗಿನ ವಿದ್ಯುತ್ ಉಚಿತವಾಗಿ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಎಕ್ಸ್‌ನಲ್ಲಿ ಈ ನಿರ್ಧಾರವನ್ನು ಘೋಷಿಸಿದ ನಿತೀಶ್ ಕುಮಾರ್, 'ನಾವು ಆರಂಭದಿಂದಲೂ ಕೈಗೆಟುಕುವ ದರದಲ್ಲಿ ಎಲ್ಲರಿಗೂ ವಿದ್ಯುತ್ ಒದಗಿಸುತ್ತಿದ್ದೇವೆ. ಇದೀಗ ಮುಂದಿನ ತಿಂಗಳು ವಿತರಿಸಲಿರುವ ಈ ತಿಂಗಳು ಬಳಸಿದ ರಾಜ್ಯದ ಎಲ್ಲ ಗೃಹ ವಿದ್ಯುತ್ ಬಳಕೆದಾರರಿಗೆ 125 ಯೂನಿಟ್‌ಗಳವರೆಗಿನ ವಿದ್ಯುತ್‌ಗೆ ಯಾವುದೇ ಶುಲ್ಕ ಇರುವುದಿಲ್ಲ' ಎಂದು ಬರೆದಿದ್ದಾರೆ. ಈ ಯೋಜನೆಯಿಂದ ರಾಜ್ಯದ 1.67 ಕೋಟಿ ಕುಟುಂಬಗಳಿಗೆ ಪ್ರಯೋಜನವಾಗಲಿದೆ ಎಂದೂ ಅವರು ತಿಳಿಸಿದ್ದಾರೆ.

ಮುಂದಿನ ಮೂರು ವರ್ಷಗಳಲ್ಲಿ ಗೃಹ ಬಳಕೆದಾರರ ಒಪ್ಪಿಗೆ ಪಡೆದು ಅವರ ಮನೆಯ ಛಾವಣಿಗಳಲ್ಲಿ ಅಥವಾ ಸಮೀಪದ ಸಾರ್ವಜನಿಕ ಸ್ಥಳಗಳಲ್ಲಿ ಸೌರಶಕ್ತಿ ಸ್ಥಾವರಗಳನ್ನು ಸ್ಥಾಪಿಸಿ ಹೆಚ್ಚಿನ ಪ್ರಯೋಜನ ಒದಗಿಸುವುದಾಗಿ ನಿತೀಶ್ ಭರವಸೆ ನೀಡಿದ್ದಾರೆ. 'ಈ ಕ್ರಮದಿಂದ ಗೃಹ ಬಳಕೆದಾರರಿಗೆ ಇನ್ನಷ್ಟು ಲಾಭ ತರಲಿದೆ' ಎಂದು ಅವರು ಎಕ್ಸ್‌ನಲ್ಲಿ ಹೇಳಿದ್ದಾರೆ. ಈ ಘೋಷಣೆಗೆ ಮುನ್ನ ಮಂಗಳವಾರ ನಿತೀಶ್ ಕುಮಾರ್ 30 ಪ್ರಮುಖ ಪ್ರಸ್ತಾಪಗಳಿಗೆ ಅನುಮೋದನೆ ನೀಡಿದ್ದರು, ಅದರಲ್ಲಿ ಮುಂದಿನ ಐದು ವರ್ಷಗಳಲ್ಲಿ ಒಂದು ಕೋಟಿ ಯುವಕರಿಗೆ ಉದ್ಯೋಗ ಒದಗಿಸುವ ಯೋಜನೆಯೂ ಸೇರಿದೆ. ಈ ವರ್ಷಾಂತ್ಯದಲ್ಲಿ ನಡೆಯಲಿರುವ ರಾಜ್ಯ ಚುನಾವಣೆಗೆ ಮುಂಚಿತವಾಗಿ ಪ್ರಮುಖ ನಿರ್ಧಾರಗಳನ್ನು ಆಢಳಿತರೂಢ ಎನ್‌ಡಿಎ ತೆಗೆದುಕೊಳ್ಳುತ್ತಿದೆ. ಈ ನಿರ್ಧಾರಗಳು ವಿರೋಧ ಪಕ್ಷಗಳ ಟೀಕೆಗೆ ಪ್ರತಿಕ್ರಿಯೆಯಾಗಿ ತೆಗೆದುಕೊಂಡ ತಂತ್ರಗಾರಿಕ ಕ್ರಮ ಎಂದು ರಾಜಕೀಯ ವೀಕ್ಷಕರು ಹೇಳಿದ್ದಾರೆ.

ಪ್ರತಿಮೆಗೆ ಹಾನಿ: ಬಂಧನ

ಸೇಲಂ: ತಮಿಳುನಾಡಿನ ದಿವಂಗತ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರ ಪ್ರತಿಮೆಗೆ ಕಪ್ಪು ಬಣ್ಣ ಸುರಿದ ಆರೋಪದ ಮೇಲೆ 70 ವರ್ಷದ ಇಎನ್‌ಟಿ ವೈದ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ ನಂತರ ಶಂಕಿತನನ್ನು ಗುರುತಿಸಿ, ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. ಹಸ್ತಂಪಟ್ಟಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಬಂಧಿತ ಶಂಕಿತ ವ್ಯಕ್ತಿಯು ಆ ಪ್ರದೇಶದಲ್ಲಿ ಇಎನ್‌ಟಿ ನರ್ಸಿಂಗ್ ಹೋಂ ನಡೆಸುತ್ತಿದ್ದರು ಎಂದು ತಿಳಿಸಿದ್ದಾರೆ. ಜುಲೈ 15ರಂದು ಅಣ್ಣಾ ಪಾರ್ಕ್ ಮುಂಭಾಗದಲ್ಲಿರುವ ಡಿಎಂಕೆ ಮಾಜಿ ಅಧ್ಯಕ್ಷರ 16 ಅಡಿ ಎತ್ತರದ ಕಂಚಿನ ಪ್ರತಿಮೆಗೆ 77 ವರ್ಷದ ವೈದ್ಯನೋರ್ವ ಕೌಟುಂಬಿಕ ಸಮಸ್ಯೆಗಳಿಂದಾಗಿ ಮಾನಸಿಕ ಒತ್ತಡದಿಂದ ಕಪ್ಪು ಬಣ್ಣ ಸುರಿದಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಅಂತಾರಾಷ್ಟ್ರೀಯ ಸಹಕಾರಿ ವರ್ಷ-2025 ಕಾರ್ಯಕ್ರಮದಲ್ಲಿ ಗೃಹ ಸಚಿವರ ಎಚ್ಚರಿಕೆ

ಭಾರತೀಯರಿಗೆ ಬೆದರಿಸಿದರೆ ತಕ್ಕ ಪರಿಣಾಮ: ಶಾ

ಜೈಪುರ: ಭಾರತದ ನಾಗರಿಕರು, ಗಡಿಗಳು ಅಥವಾ ಅದರ ರಕ್ಷಣಾ ಪಡೆಗಳಿಗೆ ಯಾವುದೇ ಬೆದರಿಕೆಯನ್ನು ಒಡ್ಡಿದರೆ ಅದಕ್ಕೆ ತಕ್ಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂಬ ಬಲವಾದ ಸಂದೇಶ ಜಗತ್ತಿಗೆ ಹೋಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

ಅಂತಾರಾಷ್ಟ್ರೀಯ ಸಹಕಾರಿ ವರ್ಷ-2025ರ ಸಂದರ್ಭದಲ್ಲಿ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪಾಕಿಸ್ತಾನದಲ್ಲಿನ ಭಯೋತ್ಪಾದಕ ನೆಲೆಗಳನ್ನು ನಾಶಮಾಡಲು ನಡೆಸಲಾದ ಆಪರೇಷನ್ ಸಿಂದೂರವನ್ನು ಉಲ್ಲೇಖಿಸಿ, ಪ್ರಧಾನಿ ಮೋದಿ ದೇಶವನ್ನು ಸುರಕ್ಷಿತಗೊಳಿಸುವಲ್ಲಿ ಮಹತ್ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.ಕಾಂಗ್ರೆಸ್ ಆಳ್ವಿಕೆಯಲ್ಲಿ ದೇಶವು ಪ್ರತಿದಿನವೂ ಭಯೋತ್ಪಾದಕ ದಾಳಿಯನ್ನು ಎದುರಿಸಬೇಕಾಗಿತ್ತು. ಆದರೆ ಉರಿ ದಾಳಿ ನಡೆದಾಗ, ಮೋದಿ ನಿರ್ಣಾಯಕ ಕ್ರಮ ಕೈಗೊಂಡು ಸರ್ಜಿಕಲ್ ಸ್ಟ್ರೈಕ್ ನಡೆಸಲಾಯಿತು. ಪುಲ್ವಾಮಾ ದಾಳಿಯ ನಂತರ, ಏರ್ ಸ್ಟ್ರೈಕ್ ನಡೆಸಲಾಯಿತು ಮತ್ತು ಪಹಲ್ಗಾಮ್‌ನಲ್ಲಿ ದಾಳಿ ನಡೆದಾಗ, ಆಪರೇಷನ್ ಸಿಂದೂರವನ್ನು ಪ್ರಾರಂಭಿಸಿ ಪಾಕಿಸ್ತಾನದೊಳಗಿನ ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡು ಅವರನ್ನು ನಿರ್ಮೂಲನೆ ಮಾಡಲಾಯಿತು ಎಂದು ಅವರು ಹೇಳಿದರು.

ಮೋದಿಯವರ ಕ್ರಮಗಳು ಜಾಗತಿಕವಾಗಿ ಬಲವಾದ ಸಂದೇಶವನ್ನು ರವಾನಿಸಿದವು. ಅವುಗಳ ಮೂಲಕ ಭಾರತದ ನಾಗರಿಕರು, ಸಶಸ್ತ್ರ ಪಡೆಗಳು ಮತ್ತು ಗಡಿಗಳೊಂದಿಗೆ ಯಾವುದೇ ರೀತಿಯ ಆಟವಾಡಬಾರದು ಎಂಬ ಪ್ರಬಲ ಸಂದೇಶವನ್ನು ಮೋದಿ ಜಗತ್ತಿಗೆ ರವಾನಿಸಿದರು. ಬೆದರಿಕೆಯೊಡ್ಡುವ ಯಾರಾದರೂ ತಕ್ಕ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಶಾ ಹೇಳಿದರು. ಮೋದಿಯವರು ಸಮೃದ್ಧ, ಸುರಕ್ಷಿತ ಮತ್ತು ಅಭಿವೃದ್ಧಿ ಹೊಂದಿದ ಭಾರತದ ದೃಷ್ಟಿಕೋನವನ್ನು ವಾಸ್ತವಕ್ಕೆ ತಿರುಗಿಸಿದ್ದಾರೆ. ಮೋದಿ ಅವರ ನಾಯಕತ್ವದಲ್ಲಿ ದೇಶವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ ಎಂದರು.


ಸಹಕಾರಿ ರಂಗದ ಉದ್ಯೋಗಾರ್ಥಿಗಳಿಗೆ ನೇಮಕಾತಿ ಪತ್ರವನ್ನು ಅಮಿತ್ ಶಾ ವಿತರಿಸಿದರು.

ನೇಮಕಾತಿ ಪತ್ರ ವಿತರಣೆ

ಜೈಪುರದಲ್ಲಿ ಅಂತಾರಾಷ್ಟ್ರೀಯ ಸಹಕಾರಿ ವರ್ಷ-2025ರ ಅಂಗವಾಗಿ ನಡೆದ 'ಸಹಕಾರ್ ಮತ್ತು ರೋಜ್‌ಗಾರ್ ಉತ್ಸವ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗೃಹ ಸಚಿವ ಅಮಿತ್ ಶಾ ಅವರು ಸುಮಾರು 8,000 ಮಂದಿಗೆ ಸಹಕಾರಿ ರಂಗದ ಉದ್ಯೋಗಾರ್ಥಿಗಳಿಗೆ ನೇಮಕಾತಿ ಪತ್ರವನ್ನು ವಿತರಿಸಿದರು. ರಾಜಸ್ಥಾನವು ಸಹಕಾರಿ ರಂಗದಲ್ಲಿ ಮುಂಚೂಣಿಯತ್ತ ಸಾಗುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಇದೇ ಸಂದರ್ಭದಲ್ಲಿ ಅಲ್ಲಿನ ಸರಕಾರವನ್ನೂ ಶ್ಲಾಘಿಸಿದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ – 2, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052
ಸಂಖ್ಯೆ: ಡಿಜಿಎಂ-2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/13/25-26 ದಿನಾಂಕ: 17-07-2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
1) ಉಪ ಪ್ರಧಾನ ವ್ಯವಸ್ಥಾಪಕರು-2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (ಎಂದರೆ https://kppp.karnataka.gov.in) ಸಲ್ಲಿಸಬಹುದು. ಬಿಡ್‌ದಾರರು ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಬಿಡ್‌ದಾರರಿಗೆ ಸೂಚನೆಗಳ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಅಗತ್ಯಗಳನ್ನು ಗಮನಿಸಲು ಕೋರಿದೆ.
2) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ) ಜಿಎಸ್‌ಟಿ ಹೊರತುಪಡಿಸಿ	ಇಎಂಡಿ (ಮೊತ್ತ ರೂ.ಗಳಲ್ಲಿ)	ಟೆಂಡರ್ ದಾಖಲೆಯ ವೆಚ್ಚ	ಒಪ್ಪಂದ ಪೂರ್ಣಗೊಳ್ಳುವ ಅವಧಿ
1	ಎಸ್‌ಡಬ್ಲ್ಯೂಎಂ ಸೈಟ್ಸ್ ಪ್ಯಾಕೇಜ್ -1 (ಬಿನ್ನಿ ಮಿಲ್ ಮತ್ತು ಬೆಲ್ಲಹಳ್ಳಿ) (2ನೇ ಕರೆ) ರಲ್ಲಿ ಅಭಿವೃದ್ಧಿ ಕಾರ್ಯಗಳು	576.63	ರೂ. 1,00,000/- ಅನ್ನು ಇ-ಪಾವತಿ ಮೂಲಕ, ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮೂಲಕ, ಮತ್ತು ಉಳಿದ ರೂ.7,64,945/- ಅನ್ನು ರಾಷ್ಟ್ರೀಕೃತ / ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸಲಾಗುತ್ತದೆ.	ಕೆಪಿಪಿ ಪೋರ್ಟಲ್ ಅನುಸಾರ	6 ತಿಂಗಳು (ಮಳೆಗಾಲ ಸೇರಿದಂತೆ)

ಸೂಚನೆ: 1) ಬಿಡ್ ಪೂರ್ವ ಸಭೆಯು ದಿನಾಂಕ: 24.07.2025 ರಂದು ಮಧ್ಯಾಹ್ನ 3.00 ಗಂಟೆಗೆ ಮುಖ್ಯ ಎಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ತಂತ್ರಜ್ಞಾನ), ಬಿಎಸ್‌ಡಬ್ಲ್ಯೂಎಂಎಲ್, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು-52 ಕಚೇರಿಯಲ್ಲಿ ನಡೆಯಲಿದೆ. 2) ಅಗತ್ಯ ಮಾಹಿತಿ / ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು ದಿನಾಂಕ: 02.08.2025 ರಂದು ಸಂಜೆ 4.00 ಗಂಟೆಗೆ ಮುಂಚಿತವಾಗಿ ಟೆಂಡರ್ ದಾಖಲೆಯ ಪ್ರಕಾರ ಕೆಪಿಪಿಪಿ ಪೋರ್ಟಲ್ https://kppp.karnataka.gov.in ಗೆ ಅಪ್‌ಲೋಡ್ ಮಾಡಬೇಕು ಮತ್ತು ತಾಂತ್ರಿಕ ಬಿಡ್ ಹೊಂದಿರುವ ಮೊದಲ ಫೋಲ್ಡರ್ ಅನ್ನು ದಿನಾಂಕ: 04.08.2025 ರಂದು ಸಂಜೆ 4.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ, ಟೆಂಡರ್‌ದಾರರು ಅಥವಾ ಹಾಜರಾಗಲು ಇಚ್ಛಿಸುವ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಇ-ಪೋರ್ಟಲ್ ಮುಖಾಂತರ ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿ ರಜಾ ದಿನವಾಗಿದ್ದರೆ, ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುತ್ತದೆ. 3) ತನ್ನ ನಿಯಂತ್ರಣ ಮೀರಿದ ವ್ಯವಸ್ಥೆಯ ವೈಫಲ್ಯದಿಂದ ಉಂಟಾಗುವ ಯಾವುದೇ ವಿಳಂಬಗಳಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ-ಮೇಲ್ ವಿಳಾಸ hphelpdesk.blr@intarvo.com. ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080-22371090/22373788. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್‌ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗದಾತರು ಜವಾಬ್ದಾರರಾಗಿರುವುದಿಲ್ಲ. 4) ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು-2, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/1900/ಶಿರಡಿ ಸಾಯಿ/2025-26

ಪಾಕ್ ಸೇನೆ ಮೇಲೆ ಬಲೂಚಿಗಳ ದಾಳಿ

- ಪಾಕ್ ಸೇನೆ ಮೇಲೆ ಆಕ್ರಮಣ
- 12 ಗಂಟೆಯಲ್ಲಿ 29 ಸೈನಿಕರು ಸಾವು

ಇಸ್ಲಾಮಾಬಾದ್: ಬಲೂಚಿಸ್ತಾನ ಹಾಗೂ ಪಾಕಿಸ್ತಾನದ ನಡುವೆ ನಿರಂತರ ಸಂಘರ್ಷ ನಡೆಯುತ್ತಿದ್ದು, ಬಲೂಚಿಸ್ತಾನದಲ್ಲಿರುವ ಅವರನ್, ಕ್ವೆಟ್ಟಾ ಮತ್ತು ಕಲಾತ್ ಜಿಲ್ಲೆಗಳಲ್ಲಿ ಪಾಕಿಸ್ತಾನಿ ಭದ್ರತಾ ಪಡೆಗಳ ಮೇಲೆ ದಂಗೆಕೋರರು ಸಶಸ್ತ್ರ ದಾಳಿ ನಡೆಸಿದ್ದಾರೆ. ಬಲೂಚ್ ಲಿಬರೇಷನ್ ಆರ್ಮಿ ನಡೆಸಿದ ದಾಳಿಯಲ್ಲಿ ಹಿರಿಯ ಅಧಿಕಾರಿ ಮೇಜರ್ ರಬಿ ನವಾಜ್ ಸೇರಿದಂತೆ 29 ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ವರದಿಗಳ ಪ್ರಕಾರ, ಈ ದಾಳಿಗಳನ್ನು ಮಿಲಿಟರಿ ಪೋಸ್ಟ್‌ಗಳನ್ನು ಗುರಿಯಾಗಿಸಿಕೊಂಡು ನಡೆಸಲಾಗಿದೆ. ಈ ದಾಳಿಗಳಿಗೆ ಯಾವುದೇ ಗುಂಪು ಇನ್ನೂ ಹೊಣೆ ಹೊತ್ತಿಲ್ಲವಾದರೂ, ಬಲೂಚ್ ಲಿಬರೇಷನ್ ಆರ್ಮಿ ನಡೆಸಿರಬಹುದು ಎಂದು ಊಹಿಸಲಾಗಿದೆ.

ಘಟನೆಯ ನಂತರ ಭದ್ರತಾ ಪಡೆಗಳು, ಸುತ್ತಮುತ್ತಲಿನ ಪ್ರದೇಶದಲ್ಲಿ ತೀವ್ರ ಶೋಧ ಕಾರ್ಯಾಚರಣೆಯನ್ನು ನಡೆಸುತ್ತಿದೆ. ಪರಿಸ್ಥಿತಿ ಇನ್ನೂ ಉದ್ವಿಗ್ನವಾಗಿದ್ದು, ಜನರಲ್ಲಿ ತೀವ್ರ ಭಯ ಮತ್ತು ಭೀತಿ ಆವರಿಸಿದೆ. ಕಳೆದ ವಾರವಷ್ಟೇ ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಶಸ್ತ್ರ ಸಜ್ಜಿತ ವ್ಯಕ್ತಿಗಳು ಬಸ್ ಪ್ರಯಾಣಿಕರನ್ನು ಅಪಹರಿಸಿ, 9 ಮಂದಿಯ ಹತ್ಯೆ ಮಾಡಿರುವ ಭಯಾನಕ ಘಟನೆ ನಡೆದಿತ್ತು. ದುಷ್ಕರ್ಮಿಗಳು ಬಸ್ಸಿನಲ್ಲಿದ್ದ 9 ಪ್ರಯಾಣಿಕರಿಗೆ ಗುಂಡು ಹಾರಿಸಿ ಹತ್ಯೆ ಮಾಡಿದ್ದರು. ಪ್ರಾಂತ್ಯದ ಝೋಬ್ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ಘಟನೆ ವರದಿಯಾಗಿತ್ತು.

ಬಾಬಾ ಮತಾಂತರ ಪ್ರಕರಣ: 14 ಕಡೆಗಳಲ್ಲಿ ಇ.ಡಿ ದಾಳಿ

ಲಖನೌ: ಛಂಗೂರ್ ಬಾಬಾ ಧಾರ್ಮಿಕ ಮತಾಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಉತ್ತರ ಪ್ರದೇಶದ ಬಲರಾಂಪುರ್‌ನ 12 ಕಡೆಗೆ ಮುಂಬೈನ ಎರಡು ಸೇರಿದಂತೆ 14 ಸ್ಥಳಗಳಲ್ಲಿ ಶೋಧ ನಡೆಸಿತು.

ಬಲರಾಂಪುರ್‌ನ ಉತ್ರೌಲಾ ಮತ್ತು ಮುಂಬೈನ ಬಾಂದ್ರಾ ಮತ್ತು ಮಾಹಿಮ್‌ನಲ್ಲಿ ಬೆಳಿಗ್ಗೆ 5 ಗಂಟೆಗೆ ದಾಳಿ ಪ್ರಾರಂಭವಾಯಿತು. ಮತಾಂತರ ದಂಧೆಯ ಆರೋಪಿ ನವೀನ್ ಅವರ ಬ್ಯಾಂಕ್ ಖಾತೆಯಿಂದ ಸುಮಾರು 2 ಕೋಟಿ ರು.ಗಳನ್ನು ಶೆಹಜಾದ್ ಶೇಖ್ ಎಂಬ ವ್ಯಕ್ತಿಗೆ ವರ್ಗಾಯಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ. ದೂರಿನ ಆಧಾರದ ಮೇಲೆ, ಜುಲೈ 9ರಂದು ಇ.ಡಿ ಮತಾಂತರ ದಂಧೆಗೆ ಸಂಬಂಧಿಸಿದ ಹಣ ವರ್ಗಾವಣೆ ಅಪರಾಧಗಳ ತನಿಖೆಗಾಗಿ ಪ್ರಕರಣ ದಾಖಲಿಸಿತು .

ಕೆಲವು ವರ್ಷಗಳಲ್ಲಿ ಛಂಗೂರ್ ಬಾಬಾ 100 ಕೋಟಿ ರು.ಗಳಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಗಳಿಸಿದ್ದಾನೆ ಎಂದು ಆರೋಪಿಸಲಾಗಿದೆ. ಹಿಂದೂ ಯುವತಿಯರನ್ನು ಗುರಿಯಾಗಿರಿಸಿ, ಲವ್ ಜಿಹಾದ್ ಮೂಲಕ ಮತಾಂತರ ನಡೆಸುತ್ತಿದ್ದ ಎಂದು ತಿಳಿದು ಬಂದಿದೆ. ಇದಕ್ಕಾಗಿ ಭರ್ಜರಿ ಹಣವನ್ನು ಕೂಡ ಪಡೆದುಕೊಂಡಿದ್ದಾನೆ ಎಂದು ಇ.ಡಿ.ಯ ಪ್ರಾಥಮಿಕ ಸಂಶೋಧನೆಗಳು ತಿಳಿಸಿವೆ. ಮತಾಂತರ ಮಾಡಲು ಸುಮಾರು 106 ಕೋಟಿ ರು.ಗಳ ವಿದೇಶಿ ನಿಧಿ ಪಡೆದಿದ್ದಾನೆ ಎನ್ನಲಾಗಿದೆ. ಈ ಹಣದ ಬಹುಪಾಲು ಮಧ್ಯಪ್ರಾಚ್ಯದ ದೇಶಗಳಿಂದ ಬಂದಿದೆ ಎಂದು ವರದಿಯಾಗಿದೆ.

ವಾದ್ರಾ ವಿರುದ್ಧ ಚಾರ್ಜ್‌ಶೀಟ್

ದೆಹಲಿ: ಶಿಖೋಪುರ ಭೂ ವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಪೂರಕ ಪ್ರಾಸಿಕ್ಯೂಷನ್ ದೂರು (ಚಾರ್ಜ್ ಶೀಟ್) ಸಲ್ಲಿಸಿದೆ.

ರಾಬರ್ಟ್ ವಾದ್ರಾ ಸೇರಿದಂತೆ 11 ಆರೋಪಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ. ಇದೆ ವೇಳೆ ರಾಬರ್ಟ್ ವಾದ್ರಾ ಮತ್ತು ಅವರ ಸಂಸ್ಥೆಗಳಿಗೆ ಸಂಬಂಧಿಸಿದ 36 ಕೋಟಿ ರು.ಗೂ ಹೆಚ್ಚು ಮೌಲ್ಯದ 43 ಆಸ್ತಿಗಳನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2018ರಲ್ಲಿ ನಡೆದಿದ್ದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಬರ್ಟ್ ವಾದ್ರಾ, ಆಗಿನ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಮತ್ತು ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ, ರಿಯಲ್ ಎಸ್ಟೇಟ್ ದೈತ್ಯ ಡಿಎಲ್‌ಎಫ್ ಮತ್ತು ಆಸ್ತಿ ವ್ಯಾಪಾರಿಯ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಆಂತರಿಕ ದೂರು ಸಮಿತಿ ರಚಿಸುವುದು ಕಡ್ಡಾಯ

ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟಲು ಪ್ರತಿ ಸಂಸ್ಥೆಗಳಲ್ಲೂ ಸಮಿತಿ ರಚನೆ ಮಾಡಿ: ಡಿಸಿ ಎಂ.ಎಸ್.ದಿವಾಕರ್

ಹೊಸಪೇಟೆ: ಸರಕಾರಿ ಮತ್ತು ಖಾಸಗಿ ಕಚೇರಿಗಳಲ್ಲಿ ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ, ನಿಷೇಧಿಸುವಿಕೆ ಹಾಗೂ ನಿವಾರಿಸುವಿಕೆ ಕಾಯ್ದೆ 2013 ರನ್ವಯ ಆಂತರಿಕ ದೂರು ಸಮಿತಿ ರಚನೆ ಕಡ್ಡಾಯವಾಗಿ ಮಾಡುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಆಂತರಿಕ ದೂರು ಸಮಿತಿ ರಚನೆ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಹಿಳೆಯರಿಗೆ ಲೈಂಗಿಕ ಕಿರುಕುಳದಿಂದ ಮುಕ್ತವಾದ ಸುರಕ್ಷಿತ ಕೆಲಸದ ಸ್ಥಳವನ್ನು ಸೃಷ್ಟಿಸುವ ಉದ್ದೇಶದಿಂದ ಭಾರತ ಸರಕಾರ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ ಕಾಯ್ದೆ 2013 ಅನ್ನು ಜಾರಿಗೆ ತಂದಿದೆ. ಸಂಘಟಿತ, ಅಸಂಘಟಿತ, ಖಾಸಗಿ ಮತ್ತು ಸಾರ್ವಜನಿಕ ವಲಯದಲ್ಲಿ 10 ಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಪುರುಷರು ಕೆಲಸ ಮಾಡುತ್ತಿದ್ದರೆ. ಅಂತಹ ಸಂಸ್ಥೆಗಳಲ್ಲಿ, ಕಚೇರಿಗಳಲ್ಲಿ ಆಯಾ ಮುಖ್ಯಸ್ಥರು ಆಂತರಿಕ ದೂರು ಸಮಿತಿಯನ್ನು ರಚನೆ ಮಾಡಬೇಕು.

ಸಮಿತಿಯಲ್ಲಿ ಉದ್ಯೋಗಸ್ಥ ಮಹಿಳೆಯನ್ನು ಅಧ್ಯಕ್ಷರನ್ನಾಗಿ ಮತ್ತು ಇಬ್ಬರು ಸದಸ್ಯರನ್ನೊಳಗೊಂಡ ಸಮಿತಿಯನ್ನು ಕಡ್ಡಾಯವಾಗಿ ರಚಿಸಬೇಕು ಎಂದರು. ದೂರುದಾರರ ವಿಚಾರಣೆ ಸಂದರ್ಭದಲ್ಲಿ ಅಗತ್ಯ ಕ್ರಮವಹಿಸಬೇಕು. ತಪ್ಪಿದಲ್ಲಿ 50 ಸಾವಿರ ರು.ವರೆಗೆ ದಂಡ ವಿಧಿಸಲಾಗುವುದು ಮತ್ತು ಇಂತಹ ಕಾರ್ಯಗಳು ಪುನಾರವರ್ತನೆದಲ್ಲಿ ಪ್ರತಿ ಬಾರಿಯ ಕರ್ತವ್ಯ ಉಲ್ಲಂಘನೆಗಾಗಿ ದಂಡದ ಹಣದ ಎರಡು ರಷ್ಟು ಹಣವನ್ನು ದಂಡ ಕಟ್ಟಬೇಕಾಗುತ್ತದೆ ಎಂದು ತಿಳಿಸಿದರು. ಇದೇ ವೇಳೆ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರನಾಯ್ಕ.ಎಲ್.ಆರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಉಂಕಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ರವಿಕುಮಾರ್ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಆಂತರಿಕ ದೂರು ಸಮಿತಿ ರಚನೆ ಸಭೆ ಅಧ್ಯಕ್ಷತೆವಹಿಸಿ ದಿವಾಕರ್ ಅವರು ಮಾತನಾಡಿದರು.

2013ರ ಕಾಯ್ದೆ ಅನ್ವಯ ದೂರು

ಮಹಿಳೆಯೂ ಸಂಘಟಿತ, ಅಸಂಘಟಿತ, ಖಾಸಗಿ ಮತ್ತು ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುತ್ತಿದ್ದರೂ, ಕೆಲಸದ ವೇಳೆಯಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಅನುಕೂಲವಾಗುವಂತೆ ಏಕಗವಾಕ್ಷಿ ಪ್ರವೇಶವನ್ನು ಒದಗಿಸಲು ಇದು ಸಹಾಯಕವಾಗಿದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ಎದುರಿಸುತ್ತಿರುವ ಮಹಿಳೆಯರು ಈ ಪೋರ್ಟಲ್ ಮೂಲಕ ತಮ್ಮ ದೂರನ್ನು ನೋಂದಾಯಿಸಿಕೊಳ್ಳಬಹುದು ಶೀ ಬಾಕ್ಸ್‌ಗೆ ದೂರು ಸಲ್ಲಿಸಿದ ನಂತರ, ಅದನ್ನು ನೇರವಾಗಿ ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ನ್ಯಾಯ ವ್ಯಾಪ್ತಿಯನ್ನು ಹೊಂದಿರುವ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕಳುಹಿಸಲಾಗುತ್ತದೆ.

ಪ್ರತಿ 3 ವರ್ಷಗಳಿಗೊಮ್ಮೆ ಸಮಿತಿಯನ್ನು ಪುನರ್ ರಚನೆ ಮಾಡಬೇಕು. ಉದ್ಯೋಗದಾತರು ಅಥವಾ ಮಾಲೀಕರ ಕರ್ತವ್ಯಗಳು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸಲಾಗಿದೆ ಎಂಬ ಪ್ರಕಟಣೆ ಅಥವಾ ಸುತ್ತೋಲೆ ಹೊರಡಿಸಬೇಕು. ಆಂತರಿಕ ದೂರು ಸಮಿತಿ ಸದಸ್ಯರ ವಿಳಾಸ, ಸ್ಥಳ ಮತ್ತು ಸಮಯದ ಮಾಹಿತಿ ನೀಡಬೇಕು.

-ಎಂ.ಎಸ್.ದಿವಾಕರ್, ಜಿಲ್ಲಾಧಿಕಾರಿ

ಕಾರ್ಮಿಕರಿಗೆ ಆಯುಷ್ಮಾನ್ ಕಾರ್ಡ್ ವಿತರಣೆ

ಸಂಡೂರು: ಸರಕಾರ ಪೌರಕಾರ್ಮಿಕರಿಗಾಗಿ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರುವ ಮೂಲಕ ಅವರ ರಕ್ಷಣೆಯನ್ನು ಮಾಡುತ್ತಿರುವುದು ಬಹು ಹೆಮ್ಮೆಯ ಸಂಗತಿಯಾಗಿದೆ ಅವುಗಳ ಪೂರ್ಣ ಬಳಕೆಯನ್ನು ಮಾಡಿಕೊಳ್ಳಬೇಕು ಎಂದು ಪುರಸಭೆ ಅಧ್ಯಕ್ಷ ಸಿರಾಜ್ ಹುಸೇನ್ ತಿಳಿಸಿದರು.

ಪಟ್ಟಣದ ಪುರಸಭೆಯ ಆವರಣದಲ್ಲಿ ರಾಜ್ಯ ಅಭಿಯಾನ ನಿರ್ದೇಶಕರು ಸ್ವಚ್ಛಭಾರತ ಅಭಿಯಾನ ನಗರಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ನಮಸ್ತೆ ಯೋಜನೆಯನ್ನು ಆಚರಿಸುವ ಕಾರ್ಯಕ್ರಮದಲ್ಲಿ ನೌಕರರಿಗೆ ಸಾಮಾಜಿಕ, ಆರೋಗ್ಯ ಭದ್ರತೆಗಾಗಿ ಆಯ್ಯುಷ್ಮಾನ್ ಕಾರ್ಡ ವಿತರಿಸಿ ಮಾತನಾಡಿದರು.

ಸರಕಾರ ಹಮ್ಮಿಕೊಂಡ ಈ ಯೋಜನೆಯನ್ನು ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಸ್ವಚ್ಛ ಕಾರ್ಯನಿರತರಿಗೆ ಅನ್ವಯಿಸಲಾಗುವುದು. ಹಂತ ಹಂತವಾಗಿ ಈ ಕಾರ್ಯ ಮಾಡುತ್ತಿದ್ದು ಮೊದಲ ಹಂತವಾಗಿ ಪುರಸಭೆಯಲ್ಲಿ ಘನತ್ಯಾಜ್ ವಿಲೇವರಿ ಮಾಡುವ ನೌಕರರಿಗೆ ಪ್ರಥಮ ಹಂತದಲ್ಲಿ ನೀಡಿದ್ದು ಇದರ ಪೂರ್ಣ ಸೌಲಭ್ಯ ಸದುಪಯೋಗವಾಗಲಿ ಎಂದರು. ಸಮಾರಂಭದಲ್ಲಿ ಪೌರ ಕಾರ್ಮಿಕರು, ಪುರಸಭೆ ಅಧಿಕಾರಿಗಳಾದ ಅನ್ನಪೂರ್ಣ, ಶಿವರಂಜಿನಿ, ಪ್ರಭುರಾಜ್ ಹಗರಿ, ವ್ಯವಸ್ಥಾಕರು, ಲತಾಉಜ್ಜಪ್ಪ, ಸದಸ್ಯರಾದ ಸುರೇಶ್, ಎಲ್ ಎಚ್ ಶಿವಕುಮಾರ್ ಇತರರಿದ್ದರು.

ನೌಕರರಿಗೆ ಸಾಮಾಜಿಕ, ಆರೋಗ್ಯ ಭದ್ರತೆಗಾಗಿ ಆಯ್ಯುಷ್ಮಾನ್ ಕಾರ್ಡ ವಿತರಿಸಿ ಸಿರಾಜ್ ಹುಸೇನ್ ಅವರು ಮಾತನಾಡಿದರು.

ಪುರಸಭೆಯಲ್ಲಿ ಪ್ರಮುಖವಾಗಿ ಒಳಚರಂಡಿ ಮತ್ತು ಸೆಪ್ಟಿಕ್ ಟ್ಯಾಂಕ್ ಶುಚಿಗೊಳಿಸುವ ಕಾರ್ಮಿಕರಿಗೆ, ಚಿಂದಿ ಆಯುವವರಿಗೆ, ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ ಕಾರ್ಮಿಕರ ಆರೋಗ್ಯ ರಕ್ಷಣೆಗಾಗಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಭಾರತ ಸರಕಾರದ ಮಹತ್ತರ ಯೋಜನೆಯಾಗಿದ್ದು ಪ್ರಮುಖವಾಗಿ ಬೀದಿ ಬದಿಗಳಲ್ಲಿ ಸಂಸ್ಕರಣಾ ಘಟಕದಲ್ಲಿ ತ್ಯಾಜ್ಯ ವಿಲೇವಾರಿ, ಒಣತ್ಯಾಜ್ಯ ಸಂಗ್ರಹಣ ಘಟಕದ ಕಾರ್ಮಿಕರಿಗೆ, ಇವರು 18 ವರ್ಷದವರಾಗಿರಬೇಕು, ಅಲ್ಲದೆ ಕನಿಷ್ಠ 6 ತಿಂಗಳು ಕಾರ್ಯನಿರ್ವಹಿಸಿದವರಿಗೆ ನೀಡಲಾಗುತ್ತಿದೆ.

-ವಿನಯಕುಮಾರ ಗೌಡ, ಪುರಸಭೆ ನೂತನ ಮುಖ್ಯಾಧಿಕಾರಿ

ರಾಮಮಂದಿರ ಮಾದರಿ ಪ್ರದರ್ಶನ

ರಾಯಚೂರು: ಜಿಲ್ಲಾ ಆರ್ಯ ವೈಶ್ಯ ಸಮಾಜದಿಂದ ಜು.18 ರಿಂದ 24 ರವರೆಗೆ ಅಯೋಧ್ಯ ಶ್ರೀರಾಮ ಮಂದಿರದ ಮಾದರಿ ಮಂದಿರವನ್ನು ನಗರದ ನಗರೇಶ್ವರ ದೇವಸ್ಥಾನದಲ್ಲಿ ಪ್ರದರ್ಶನ ಮಾಡಲಾಗುತ್ತದೆಂದು ಸಮಾಜದ ಜಿಲ್ಲಾಧ್ಯಕ್ಷ ಸಾವಿತ್ರಿ ಪುರಷೋತ್ತಮ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 7 ದಿನಗಳ ಕಾಲ ನಡೆಯುವ ರಾಮಮಂದಿರ ಪ್ರದರ್ಶನವು ಸಂಜೆ 6 ಗಂಟೆಯಿಂದ ರಾತ್ರಿ 9 ಗಂಟೆಯ ವರೆಗೆ ನಡೆಯಲಿದೆ. ಪ್ರತಿ ದಿನ ಸಂಜೆ 7 ರಿಂದ ವಿವಿಧ ಭಜನಾ ಮಂಡಳಿಗಳಿಂದ ಭಕ್ತಿ ಗೀತೆಗಳ ಸಂಗೀತ ಕಾರ್ಯಕ್ರಮ ಜರುಗಲಿದೆ.

ನಗರದ ಸರ್ವಜನಾಂಗದ ಜನರು ಹಾಗೂ ಸುತ್ತಮುತ್ತಲಿನ ಗ್ರಾಮದ ಜನರು ಆಯೋಧ್ಯ ಶ್ರೀ ರಾಮಮಂದಿರದ ಮಾದರಿಯನ್ನು ಮತ್ತು ಶ್ರೀ ಬಾಲರಾಮನ ದರ್ಶನ ಪಡೆದು ಶ್ರೀ ರಾಮಚಂದ್ರ ಪ್ರಭುವಿನ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಬಿದರೆ ಗ್ರಾಮದ ವಿನಯರಾಮ ಮಾತನಾಡಿ, 108 ಕಡೆ ಅಯೋಧ್ಯ ಶ್ರೀ ರಾಮ ಮಂದಿರ ಮಾದರಿಯನ್ನು ಪ್ರದರ್ಶನ ಮಾಡಲು ಸಂಕಲ್ಪಿಸಲಾಗಿದೆ. ಈಗಾಗಲೇ ರಾಜ್ಯದ 14 ಜಿಲ್ಲೆಗಳಲ್ಲಿ 85 ಕಡೆ ಪ್ರದರ್ಶನ ಏರ್ಪಡಿಸಿ ಇದೀಗ ರಾಯಚೂರು ನಗರಕ್ಕೆ 86 ನೇ ಪ್ರದರ್ಶನಕ್ಕೆ ಮಾಡಲಾಗುತ್ತದೆ ಎಂದರು.

ಸುದ್ದಿಗೋಷ್ಟಿಯಲ್ಲಿ ಪದಾಧಿಕಾರಿಗಳಾದ ಸಿ.ಪದ್ಮರಾಜ್, ಜಗದೀಶ ಗುಪ್ತ, ವೀರೇಶ ವಕೀಲ, ಚಾಗಿ ವೆಂಕಟೇಶ, ಇಲ್ಲೂರು ಗೋಪಾಲಯ್ಯ ಶೆಟ್ಟಿ ಉಪಸ್ಥಿತರಿದ್ದರು.

ನಗರದ ಪತ್ರಿಕಾ ಭವನದಲ್ಲಿ ಸದ್ದಿಗೋಷ್ಠಿಯಲ್ಲಿ ಸಾವಿತ್ರಿ ಪುರುಷೋತ್ತಮ ಅವರು ಮಾತನಾಡಿದರು.

ನಕಲಿ ವೈದ್ಯರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಡಿಸಿ ನಿತೀಶ್

ರಾಯಚೂರು: ಕರ್ನಾಟಕ ವೈದ್ಯಕೀಯ ಮಂಡಳಿ ಅಥವಾ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಬೋರ್ಡ್‌ಗಳಿಂದ ಪ್ರಮಾಣ ಪತ್ರ ಪಡೆಯದೇ ವೈದ್ಯ ವೃತ್ತಿ ಮಾಡುತ್ತಿರುವವರನ್ನು ನಕಲಿ ವೈದ್ಯರೆಂದು ಪರಿಗಣಿಸಬೇಕಾಗುತ್ತದೆ. ಆಯಾ ತಾಲೂಕು ಮಟ್ಟದ ಸಮಿತಿಗಳಿಂದ ಪರಿಶೀಲನೆ ವೇಳೆಯಲ್ಲಿ ನಕಲಿ ವೈದ್ಯರು ಎಂದು ಗೊತ್ತಾಗಿ ಅಂತಹ ಯಾರಾದರು ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್ ನಡೆಸಿದಲ್ಲಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದು ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆಗಳ ನಿವಾರಣೆ ಪ್ರಾಧಿಕಾರದ ಅಧ್ಯಕ್ಷ ಹಾಗೂ ಜಿಲ್ಲಾಧಿಕಾರಿ ನಿತೀಶ್ ಕೆ ಅವರು ಎಚ್ಚರಿಕೆ ನೀಡಿದ್ದಾರೆ.

ಖಾಸಗಿ ಕ್ಲಿನಿಕ್‌ಗಳಿಗೆ ನೋಟಿಸ್ ಜಾರಿ: ಕೆಪಿಎಂಇ ಕಾಯ್ದೆಯಡಿ ಚಿಕಿತ್ಸಾಲಯವನ್ನು ನೋಂದಾಯಿಸದೇ ಇರುವ, ಕೆಪಿಎಂಇ ಕಾಯ್ದೆಯಡಿ ಆಯುರ್ವೇದ ಆಸ್ಪತ್ರೆ ಎಂದು ನೋಂದಾಯಿಸಿ ಅಲೋಪತಿ ನಡೆಸುವ, ಯಾವುದೇ ಅಗ್ನಿಶಾಮಕ ನಿರ್ವಹಣೆ ಇಲ್ಲದ, ಕೆಪಿಎಂಇ ವ್ಯವಸ್ಥೆಯಡಿ ಹೋಮಿಯೋಪತಿ ಎಂದು ನೋಂದಾಯಿಸಿ ಅಲೋಪತಿ ನಡೆಸುವ, ಅನುಮತಿ ಇಲ್ಲದೇ ಎಕ್ಸರೆ ಮಾಡುವ ಬಗ್ಗೆ ಪರಿಶೀಲನೆ, ದೇವದುರ್ಗ ತಾಲೂಕಿನ 10 ಖಾಸಗಿ ಕ್ಲಿನಿಕ್‌ಗಳು, ಸಿರವಾರ ತಾಲೂಕಿನ ಎರಡು ಖಾಸಗಿ ಕ್ಲಿನಿಕ್ ಮತ್ತು ಮಾನ್ವಿ ತಾಲೂಕಿನ ಎರಡು ಖಾಸಗಿ ಕ್ಲಿನಿಕ್ ಈಗಾಗಲೇ ನೋಟಿಸ್ ಜಾರಿ ಮಾಡಿ ಎಚ್ಚರಿಕೆ ನೀಡಲಾಗಿದೆ.

ಪತ್ರಿಕಾ ಪ್ರಕಟಣೆ ಹೊರಡಿಸಿ ಎಚ್ಚರಿಕೆ: ವೈದ್ಯಕೀಯ ಪದವಿ ಇಲ್ಲದೇ ವೈದ್ಯ ವೃತ್ತಿ ನಡೆಸುತ್ತಿರುವ ನಕಲಿ ವೈದ್ಯರ ವಿರುದ್ಧ ಹಾಗೂ ವೈದ್ಯಕೀಯ ಪದವಿ ಹೊಂದಿರುವ ವೈದ್ಯರು ಕೆಪಿಎಂಇ ಕಾಯ್ದೆಯಡಿಯಲ್ಲಿ ನೋಂದಣಿ ಆಗದೇ ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್, ಆಸ್ಪತ್ರೆ, ಲ್ಯಾಬ್, ದಂತ ವೈದ್ಯರುಗಳು ವೃತ್ತಿ ಅಭ್ಯಾಸ ನಡೆಸುತ್ತಿದ್ದಲ್ಲಿ ಅಂತವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ. ಯಾವುದೇ ಪದ್ಧತಿಯಲ್ಲಿ ವೈದ್ಯ ವೃತ್ತಿ ನಡೆಸುತ್ತಿದ್ದಲ್ಲಿ ಅಂತವರ ವಿರುದ್ಧ ಕೆಪಿಎಂಇ ಕಾಯ್ದೆಯಡಿ 50 ಸಾವಿರ ರು. ದಂಢ, 3 ವರ್ಷ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬುದರ ಬಗ್ಗೆ ಈಗಾಗಲೇ ಪತ್ರಿಕಾ ಪ್ರಕಟಣೆ ಹೊರಡಿಸಿ ಎಚ್ಚರಿಕೆ ನೀಡಲಾಗಿದೆ.

ತಾಲೂಕುಮಟ್ಟದ ಸಮಿತಿ ರಚಿಸಿ ಆದೇಶ: ರಾಯಚೂರ ಜಿಲ್ಲೆಯ ತಾಲೂಕು ವ್ಯಾಪ್ತಿಯಲ್ಲಿ ಕೆಪಿಎಂಇ ಕಾಯ್ದೆ ಅಡಿಯಲ್ಲಿ ತಾಲೂಕುಮಟ್ಟದ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್ ಹಾಗೂ ಲ್ಯಾಬ್‌ಗಳು ಮತ್ತು ಆಸ್ಪತ್ರೆಗಳನ್ನು ಕೆಪಿಎಂಇ ಕಾಯ್ದೆಯಡಿ ವಿಧಿಸಲಾದ ಷರತ್ತುಗಳನ್ವಯ ಕಾಲಕಾಲಕ್ಕೆ ತಪಾಸಣೆ ಮಾಡಲು ತಹಸೀಲ್ದಾರ ಅಧ್ಯಕ್ಷತೆಯಲ್ಲಿ ತಾಲೂಕುಮಟ್ಟದ ಖಾಸಗಿ ಆಸ್ಪತ್ರೆ, ಈ ತಂಡವು ಪ್ರತಿ ತಿಂಗಳು ಸುಮಾರು 10 ಸಂಸ್ಥೆಗಳಿಗೆ ಭೇಟಿ ನೀಡಿ, ಸಾರ್ವಜನಿಕರಿಗೆ ವೈದ್ಯಕೀಯ ಸೇವೆ ನೀಡುತ್ತಿರುವುದರ ಬಗ್ಗೆ ಪರಿಶೀಲಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಗ್ರಾಮೀಣದಲ್ಲಿ ಕಾಮಗಾರಿಗಳ ಸಮರ್ಪಕ ಅನುಷ್ಠಾನವಾಗಲಿ

ಕನಕಗಿರಿ: ಗ್ರಾಮೀಣ ಭಾಗದಲ್ಲಿ ವಿವಿಧ ಯೋಜನೆಯ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನ ಆಗಬೇಕು. ಈ ಬಗ್ಗೆ ಅಧಿಕಾರಿಗಳು ಮತ್ತು ಗ್ರಾಪಂ ಸದಸ್ಯರು ಸಮನ್ವಯದಿಂದ ಕೆಲಸ ನಿರ್ವಹಿಸಬೇಕು ಎಂದು ಸಂಸದ ರಾಜಶೇಖರ ಹಿಟ್ನಾಳ ಹೇಳಿದರು.

ತಾಲೂಕಿನ ಹುಲಿಹೈದರ ಗ್ರಾಮದಲ್ಲಿ ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಯೋಜನೆಗಳ ಹುಲಿಹೈದರ ಹೋಬಳಿ ಮಟ್ಟದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದರು.

ಗ್ರಾಪಂ ಸದಸ್ಯರು ಎಲ್ಲ ಯೋಜನೆಗಳು ಸರಕಾರಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಹೋಬಳಿವಾರು ಪ್ರಗತಿ ಪರಿಶೀಲನೆ ಸಭೆ ಆಯೋಜಿಸಿ ಗ್ರಾಪಂ ಸದಸ್ಯರು, ಗ್ರಾಪಂ ಪಿಡಿಒಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಂದ ಪ್ರಗತಿ ಮಾಹಿತಿ ಪಡೆಯಲಾಗುತ್ತಿದೆ ಎಂದರು.

ನಂತರ ಸ್ವಚ್ಛ ಭಾರತ ಮಿಷನ್, ಎನ್ ಆರ್ ಎಲ್ ಎಂ ಸಂಜೀವಿನಿ ಯೋಜನೆ, ವಸತಿ, ಜೆಜೆಎಂ, ಪಶು ಇಲಾಖೆ, ಕೃಷಿ ಇಲಾಖೆ ಸೇರಿ ಇತರೆ ಇಲಾಖೆ ಅಧಿಕಾರಿಗಳು 2025-26ನೇ ಸಾಲಿನ ವಿವಿಧ ಯೋಜನೆಗಳ ಕ್ರಿಯಾಯೋಜನೆಗಳ ಬಗ್ಗೆ ಮಾಹಿತಿ ಪಡೆದರು. ಅಧಿಕಾರಿಗಳು ಪ್ರಗತಿ ವರದಿ ಓದಿ ಹೇಳಿದರು. ಇನ್ನೂ ಗೌರಿಪುರ ಹಾಗೂ ಬಸರಿಹಾಳ ಗ್ರಾ.ಪಂ ವ್ಯಾಪ್ತಿಯ ಸೋಮಸಾಗರ ಮತ್ತು ಹುಲಸನಹಟ್ಟಿ ಗ್ರಾಮದಲ್ಲಿ ಕುಡಿಯುವ ನೀರು ಪೂರೈಕೆ ಯಾಗದ ಹಿನ್ನೆಲೆ ಜೆಜೆಎಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಂತರ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಲು ಸೂಚಿಸಿದರು.

ನಂತರ ತಹಸೀಲ್ದಾರ್ ವಿಶ್ವನಾಥ ಮಾತನಾಡಿ ಕೃಷಿ ಭೂಮಿ ಮೃತರ ಹೆಸರಿನಲ್ಲಿ ಇರುವುದನ್ನು ಸಂಬಂಧ ಪಟ್ಟ ಸಂಬಂಧಿಕರು ಸದರಿ ಜಮೀನನ್ನು ವಾರಸುದಾರರು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿ ಕೊಳ್ಳಬೇಕು, ಪ್ರಸ್ತುತ ಸರಕಾರದಿಂದ ಇ-ಭೌತಿ ಆಂದೋಲನದ ಮೂಲಕ ತಾಲೂಕಿನ ಜಮೀನುಗಳನ್ನು ಉಚಿತವಾಗಿ ವಾರಸತ್ವದ (ವಂಶಾವಳಿ) ಪ್ರಕಾರ ಪಹಣಿ ಪತ್ರಿಕೆ ಮಾಡಿಕೊಡಲಾಗುತ್ತಿದೆ. ಈ ರೀತಿಯ ಜಮೀನುಗಳ ವಾರಸುದಾರರು ಕೂಡಲೇ ಮೃತರ ಮರಣ ಪ್ರಮಾಣಪತ್ರ, ವಂಶವೃಕ್ಷ ವಾರಸುದಾರರ ಆಧಾರ ಕಾರ್ಡ್ ಇತ್ಯಾದಿ ಪೂರಕ ಎಲ್ಲಾ ದಾಖಲೆಗಳನ್ನು ತಮ್ಮ ಗ್ರಾಮಕ್ಕೆ ಸಂಬಂಧಿಸಿದ ಗ್ರಾಮ ಆಡಳಿತಾಧಿಕಾರಿಗಳಿಗೆ ಸಲ್ಲಿಸಬೇಕು ಅಂದಾಗ ಮಾತ್ರ ಯೋಜನೆ ಅನುಮೋದನೆ ಆಗುತ್ತದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷರಾದ ಹಜರತ್ ಹುಸೇನ್, ವಿಶ್ವನಾಥ ಮುರುಡಿ,ಕೆ.ರಾಜಶೇಖರ, ಶರಪುನ್ನಿಸಾ ಬೇಗಂ, ಅಮರೇಶ್ ರಾಠೋಡ್, ಬಸವರಾಜ ಸಂಕನಾಳ, ಹನುಮಂತಪ್ಪ, ಹುಲಿಹೈದರ್ ಸಿಬ್ಬಂದಿಗಳು ಇದ್ದರು.

ತಾಲೂಕು ಹುಲಿಹೈದರ ಗ್ರಾಮದಲ್ಲಿ ರಾಜ್ಯ ಪುರಸ್ಕೃತ ಯೋಜನೆಗಳ ಹುಲಿಹೈದರ ಹೋಬಳಿ ಮಟ್ಟದ ಪ್ರಗತಿ ಪರಿಶೀಲನೆ ಸಭೆ ನಡೆಯಿತು.

ಒಪೆಕ್ ಆಸ್ಪತ್ರೆಗೆ ಡಿಸಿ ಭೇಟಿ: ಕಾಮಗಾರಿ ಪರಿಶೀಲನೆ

ರಾಯಚೂರ: ನಿತೀಶ್ ಕೆ ಅವರು ರಾಯಚೂರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಅಧೀನದಲ್ಲಿರುವ ರಾಜೀವ್ ಗಾಂಧಿ ಸೂಪರ್ ಸ್ಪೇಷಾಲಿಟಿ (ಒಪೆಕ್) ಆಸ್ಪತ್ರೆಗೆ ಭೇಟಿ ನೀಡಿ ನಿರ್ಮಾಣ ಹಂತದಲ್ಲಿರುವ ಟ್ರಾಮಾ ಕೇರ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದರು.

ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡು ಕಟ್ಟಡ ನಿರ್ಮಾಣ ಕಾರ್ಯವನ್ನು ವೇಗಗೊಳಿಸಬೇಕು ಎಂದು ನಿರ್ದೇಶನ ನೀಡಿದರು. ಆಸ್ಪತ್ರೆಯಲ್ಲಿನ ಸೌಕರ್ಯಗಳ ಬಗ್ಗೆ ವಿಶೇಷ ತಜ್ಞ ವೈದ್ಯರ ಜೊತೆಗೆ ಚರ್ಚೆ ನಡೆಸಿದರು.

ಇಲ್ಲಿಗೆ ಬರುವ ರೋಗಿಗಳಿಗೆ ಗುಣಮಟ್ಟದ ರೀತಿಯಲ್ಲಿ ಚಿಕಿತ್ಸೆ ಸಿಗಬೇಕು. ಜನರಿಗೆ ಎಲ್ಲಾ ರೀತಿಯಲ್ಲಿ ಅನುಕೂಲವಾಗುವ ಹಾಗೆ ಹೊಸ ವಿಭಾಗಗಳನ್ನು ಸಹ ಆರಂಭಿಸಲು ಕ್ರಮವಹಿಸಬೇಕು ಎಂದು ಸೂಚನೆ ನೀಡಿದರು.

ಕಾರ್ಡಿಯಾಲಜಿ ವಿಭಾಗ ಬಲಪಡಿಸಿ: ಇದೀಗ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚುತ್ತಿವೆ. ಹೀಗಾಗಿ ಜನತೆಗೆ ಸಕಾಲಕ್ಕೆ ಚಿಕಿತ್ಸೆ ದೊರೆಯುವಂತೆ ಒಪೆಕ್ ಆಸ್ಪತ್ರೆಯಲ್ಲಿನ ಕಾರ್ಡಿಯಾಲಜಿ ವಿಭಾಗವನ್ನು ಬೇಗನೇ ಬಲಪಡಿಸಲು ಕ್ರಮವಹಿಸಬೇಕೆಂದು ವಿಭಾಗದ ಡಾ.ಗೋಪಿನಾಥ ಅವರಿಗೆ ಸೂಚನೆ ನೀಡಿದರು.

ಪ್ರಚಾರ ನಡೆಸಿ: ಉತ್ತಮವಾದ ವೈದ್ಯಕೀಯ ಚಿಕಿತ್ಸೆ ಸಿಗುತ್ತಿದೆ ಎಂಬುದರ ಬಗ್ಗೆ ಜನತೆಗೆ ಮಾಹಿತಿ ರವಾನೆಯಾಗಬೇಕು. ಈ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು.

ಗಾರ್ಡನ್ ಸರಿಪಡಿಸಿ: ವೈದ್ಯಾಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಬಳಿಕ ಆಸ್ಪತ್ರೆಯ ಹೊರಾಂಗಣದಲ್ಲಿ ಸಂಚರಿಸಿ ಆಸ್ಪತ್ರೆಯ ಗಾರ್ಡನ್ ವೀಕ್ಷಣೆ ನಡೆಸಿದರು. ಆಸ್ಪತ್ರೆಗೆ ಬರುವ ರೋಗಿಗಳಿಗೆ ವಿಶ್ರಾಂತಿಗೆ ಅನುಕೂಲವಾಗುವಂತೆ ಕೂಡಲು ಅಲ್ಲಲ್ಲಿ ಸಿಮೆಂಟ್ ಬೆಂಚ್ ಅಳವಡಿಸಿ ಉದ್ಯಾನವನವನ್ನು ಅಚ್ಚುಕಟ್ಟಾಗಿ ನಿರ್ಮಿಸಿ ನಿರ್ವಹಣೆ ಮಾಡಲು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಒಪೆಕ್ ಆಸ್ಪತ್ರೆಯ ನಿರ್ದೇಶಕ ಡಾ.ರಮೇಶ ಬಿ ಎಚ್, ವಿಶೇಷ ಅಧಿಕಾರಿ ಡಾ.ರಮೇಶ ಸಿ ಸಾಗರ, ಒಪೆಕ್ ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿ ನೀಲಪ್ರಭಾ, ಡಾ.ಸುರೇಂದ್ರಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ವಿಜಯಶಂಕರ ಸೇರಿದಂತೆ ಇದ್ದರು.

ರಾಯಚೂರಿನ ಒಪೆಕ್ ಆಸ್ಪತ್ರೆಗೆ ಜಿಲ್ಲಾಧಿಕಾರಿ ನಿತೀಶ್ ಕೆ. ಭೇಟಿ ನೀಡಿ ಟ್ರಾಮಾಕೇರ್ ಕಾಮಗಾರಿ ಪರಿಶೀಲಿಸಿದರು.

ಸಮಾಚಾರ ಸಣ್ಣದಲ್ಲ

ಸಿರಿವಾರದಲ್ಲಿ ಟೆಕ್ನಾಲಜಿ ಪಾರ್ಕ್

ಕೊಪ್ಪಳ: ಜಿಲ್ಲೆಯ ಕನಕಗಿರಿ ತಾಲೂಕು ಸಿರಿವಾರ ಗ್ರಾಮದಲ್ಲಿ ತೋಟಗಾರಿಕೆ ಟೆಕ್ನಾಲಜಿ ಪಾರ್ಕ್ ಸಾರ್ವಜನಿಕರು ಹಾಗೂ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸ್ಥಾಪಿಸಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ. ಸುಮಾರು 83.79 ಕೋಟಿ ರು. ಅಂದಾಜು ವೆಚ್ಚದಲ್ಲಿ ಸಿರಿವಾರ ಗ್ರಾಮದಲ್ಲಿನ ಪರಂಪೋಕ ಸರಕಾರಿ ಸರ್ವೆ ನಂ.124/★/1/ಪಿ2 ರಲ್ಲಿನ ಸುಮಾರು 194 ಎಕರೆ ಜಮೀನಿನಲ್ಲಿ ಯೋಜನೆ ಆರಂಭವಾಗಲಿದೆ. ಇನ್ನು ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಪ್ರಜಾಸೌಧ ಕಟ್ಟಡ ಕಾಮಗಾರಿ ರು.16.00 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಅಟಲ್‌ಜೀ ಝೂಗೆ ನೀರಾನೆ ಆಗಮನ

ಹೊಸಪೇಟೆ: ಕಲ್ಯಾಣ ಕರ್ನಾಟಕ ವಿಭಾಗದ ಏಕೈಕ ಸಫಾರಿ ಹೊಂದಿರುವ ಕಮಲಾಪುರದ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್‌ಗೆ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ ಚಿಂಟು ಎಂಬ ಗಂಡು ನೀರಾನೆ ಹೊಸ ಅತಿಥಿ ಯಾಗಿ ಆಗಮಿ ಸಿದೆ. ಮೃಗಾಲಯಕ್ಕೆ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ಪ್ರವಾಸಿಗರಿಗೆ ವೀಕ್ಷಿಸಲು ಅನುವು ಮಾಡಿಕೊಡಲು ಪ್ರಾಣಿವಿನಿಮಯ ಕಾರ್ಯಕ್ರಮದಡಿ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ ಒಂದು ಗಂಡು ನೀರುಕುದರೆಯನ್ನು ಹಸ್ತಾಂತರಿಸಿಕೊಳ್ಳಲು ಕೇಂದ್ರ ಮೃಗಾಲಯ ಪ್ರಾಧಿಕಾರ ನವದೆಹಲಿ ಅನುಮತಿ ನೀಡಿದೆ. ಹಾಗಾಗೀ 6 ವರ್ಷದ ಚಿಂಟು ಎಂಬ ಗಂಡು ನೀರುಕುದುರೆ ಹೊಸ ಅತಿಥಿಯಾಗಿ ಆಗಮಿಸಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ರಾಜೇಶ್ ನಾಯ್ಕ ತಿಳಿಸಿದ್ದಾರೆ.

ಕುಡಿವ ನೀರಿನ ಘಟಕ ಉದ್ಘಾಟನೆ

ಲಿಂಗಸುಗೂರ: ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯ ಅನುದಾನದ ಅಡಿಯಲ್ಲಿ ಪಟ್ಟಣದ ಅಗ್ನಿಶಾಮಕ ಠಾಣೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ರಾಯಚೂರ ಹಾಗೂ ಕೊಪ್ಪಳ ವಿಧಾನ ಪರಿಷತ್ತ ಸದಸ್ಯರಾದ ಶರಣಗೌಡ ಪಾಟೀಲ ಬಯ್ಯಾಪೂರ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಬಿರಾದಾರ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಪಾಮಯ್ಯ ಮುರಾರಿ, ಮಾಜಿ ಜಿ.ಪಂ ಅಧ್ಯಕ್ಷ ಗುಂಡಪ್ಪ ನಾಯಕ, ಬಸವರಾಜಗೌಡ ಗಣೇಕಲ್ , ಸೋಮಶೇಖರ ಐದನಾಳ, ಪ್ರಮೋದ ಕುಲಕರ್ಣಿ, ಜಗದೀಶಗೌಡ ಹಾಲಬಾವಿ, ಚನ್ನಾರೆಡ್ಡಿ ಬಿರಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಆಸ್ತಿ ಖಾತೆ ವರ್ಗಾವಣೆಗೆ ಸಾರ್ವಜನಿಕರ ಪರದಾಟ

ಸಿಂಧನೂರು: ನಗರಸಭೆ ಕಚೇರಿಯಲ್ಲಿ ಖಾತಾ ವರ್ಗಾವಣೆ, ಫಾರಂ ನಂ.3 ಮತ್ತು 'ಬಿ' ಖಾತೆ ಪಡೆಯಲು ಸಾರ್ವಜನಿಕರು ಪರದಾಡುತ್ತಿರುವುದು ಸಾಮಾನ್ಯವಾಗಿದೆ. ನಿಯಮಾನುಸಾರ 40 ದಿನದೊಳಗ ಖಾತೆ ವರ್ಗಾವಣೆ ಆಗಬೇಕು. 8 ದಿನದೊಳಗೆ ಫಾರಂ ನಂ.3 ಕೊಡಬೇಕು. ಆದರೆ ನಾಲ್ಕೈದು ತಿಂಗಳಾದರೂ ವರ್ಗಾವಣೆ ಆಗುತ್ತಿಲ್ಲ, ತಿಂಗಳಾದರೂ ಫಾರಂ ನಂ.3 ಸಿಗುತ್ತಿಲ್ಲ, ಎರಡು ಗುಂಟೆಗಿಂತ ಅಧಿಕ ನಿವೇಶನವಿದ್ದರೆ ಬಿ. ಖಾತೆಯ ದಾಖಲಾತಿಯನ್ನೇ ಕೊಡುವುದಿಲ್ಲ ಎಂಬುದು ಸಾರ್ವಜನಿಕರ ಗಂಭೀರ ಆರೋಪವಾಗಿದೆ. ಪೌರಾಯುಕ್ತೆ ಶೃತಿ.ಕೆ ಅವರು ಮೂಲತಃ ಭೂ ಸ್ವಾಧೀನ ಅಧಿಕಾರಿಯಾಗಿದ್ದು, ಸದ್ಯ ನಗರಸಭೆಯಲ್ಲಿ ಪ್ರಭಾರಿ ಪೌರಾಯುಕ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾರ್ಯಬಾಹುಳ್ಯದ ಕಾರಣಕ್ಕಾಗಿ ನಗರಸಭೆಯಲ್ಲಿ ಕೆಲ ದಾಖಲಾತಿಗಳ ವಿಲೇವಾರಿಗೆ ತೊಂದರೆಯಾಗುತ್ತಿದೆ ಎಂದು ಹೆಸರು ಹೇಳಲು ಇಚ್ಚಿಸದ ಅಧಿಕಾರಿಯೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನೆರೆಯ ತಾಲೂಕು ನಾಲ್ಕು ಗುಂಟೆ ಮತ್ತು ಐದು ಗುಂಟೆ ಇದ್ದರೂ 'ಬಿ' ಖಾತೆಯ ದಾಖಲಾತಿ ಕೊಡಲಾಗುತ್ತಿದೆ. ಆದರೆ ಸಿಂಧನೂರಿನಲ್ಲಿ 2 ಗುಂಟೆಗಿಂತ ಹೆಚ್ಚು ಜಾಗವಿದ್ದರೆ ಕೊಡಬಾರದು ಕಾನೂನು ಇದೆಯೇ' ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.

ನಾಗರಹಾಳದ ಮನೆಯಲ್ಲಿ ಕಳವು: ಇಬ್ಬರ ಸೆರೆ, ಚಿನ್ನ ವಶ

ಮುದಗಲ್: ಪಟ್ಟಣ ಸಮೀಪದ ನಾಗರಹಾಳ ಗ್ರಾಮದಲ್ಲಿ ಫೆಬ್ರುವರಿ 2025 ರಂದು 10 ಗ್ರಾ. ಬಂಗಾರ ಹಾಗೂ 2 ಲಕ್ಷ ರುಗಳ ಕಳ್ಳತನ ಮಾಡಲಾಗಿದೆ ಎಂದು ಶಂಕ್ರಮ್ಮ ಹಾಗೂ ಅಶೋಕ ಅವರುಗಳು ಮುದಗಲ್ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಕಳ್ಳತನ ಪ್ರಕರಣವನ್ನು ಗಂಭಿರವಾಗಿ ಪರಿಗಣಿಸಿ ಪ್ರಕರಣ ಭೇದಿಸಲು ಜಿಲ್ಲಾ ಪೊಲೀಸ ಅಧೀಕ್ಷಕರು ರಾಯಚೂರು ಮುದಗಲ್ ಪಿಎಸ್‌ಐ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು. ಪ್ರಕರಣ ಬೆನ್ನತ್ತಿದ ಮುದಗಲ್ ಪೊಲಿಸರು ಆರೋಪಿತನಾದ ಶಿವಪ್ಪ ತಂದೆ ಶೇಖರಪ್ಪ (20) ನಾಗರಹಾಳ ಇತನು ಕಾನೂನು ಸಂಘರ್ಷಕ್ಕೊಳಗಾದ ಬಾಲಕನನ್ನು ವಿಚಾರಣೆಗೆ ಒಳಪಡಿಸಿ, ಪ್ರಕರಣಗಳಲ್ಲಿ ಕಳುವು ಮಾಡಿದ 10 ಗ್ರಾಂ ಬಂಗಾರ ಮತ್ತು 2 ಲಕ್ಷ ರು. ನಗದು ಹಣವನ್ನು ಜಪ್ತಿ ಮಾಡಿಕೊಂಡು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ. ಈ ಪ್ರಕರಣ ಬೇಧಿಸಿದ ವಿಶೇಷ ತಂಡದ ಯಶಸ್ವಿ ಕಾರ್ಯಾಚರಣೆಗೆ ಜಿಲ್ಲಾ ಪೊಲೀಸ ಅಧೀಕ್ಷಕರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಪಿಎಸ್‌ಐ ವೆಂಕಟೇಶ ಮಾಡಗೇರಿ, ಎಎಸ್‌ಐ ಮಲ್ಲಯ್ಯ ಹೂನೂರುಮಠ, ಅಮರೇಶ ಎಚ್, ಕೆ, ವೆಂಕಟೇಶ, ರಾಮಪ್ಪ, ರುದ್ರಗೌಡ, ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಇದ್ದರು.

ಪಟ್ಟಣ ಸಮೀಪದ ನಾಗರಹಾಳ ಗ್ರಾಮದಲ್ಲಿ 10 ಗ್ರಾಂ ಬಂಗಾರ, 2 ಲಕ್ಷ ರುಗಳ ಕಳ್ಳತನ ಮಾಡಿರುವ ಆಭರಣ, ಹಣವನ್ನು ವಶಪಡಿಸಿಕೊಂಡಿರುವುದು.

ನಿರಂತರ ಮಳೆಗೆ ಮನೆ ಕುಸಿತ: ಮಗು ಸಾವು

ಕೊಪ್ಪಳ: ಜಿಲ್ಲಾದ್ಯಂತ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗಿನ ವರೆಗೆ ಉತ್ತಮ ಮಳೆ ಆಗಿದ್ದು, ಗಂಗಾವತಿ ತಾಲೂಕಿನಲ್ಲಿ ಮನೆ ಕುಸಿದು ಮಗು ಮೃತಪಟ್ಟಿದೆ. ಗಂಗಾವತಿ ತಾಲೂಕು ಹೆಬ್ಬಾಳ ಗ್ರಾಮದಲ್ಲಿ ಜಡಿ ಮಳೆಯಿಂದ ಮನೆ ಕುಸಿದು ಬಿದ್ದಿದ್ದು, ಪ್ರಶಾಂತಿ ಎಂಬ ಒಂದೂವರೆ ವರ್ಷದ ಹೆಣ್ಣು ಮಗು ಮೃತಪಟ್ಟಿದೆ. ರಾತ್ರಿ ಇಡೀ ಜಿಟಿಜಿಟಿ ಮಳೆ ಬಂದಿದ್ದರಿಂದ ಗೋಡೆಗಳು ತೇವಗೊಂಡು ಇಡೀ ಮನೆ ಏಕಾಏಕಿ ಕುಸಿದು ಬಿದ್ದಿದೆ. ಮಲಗಿದ್ದವರು ಎಚ್ಚರಗೊಳ್ಳುವಷ್ಟರಲ್ಲೇ ಮಗು ಉಸಿರು ನಿಂತಿದೆ. ಜೊತೆಗೆ ಮನೆಯಲ್ಲಿ ಮಲಗಿದ್ದ ಮೃತ ಮಗುವಿನ ತಾಯಿ ಹನುಮಂತಿ, ಸಂಬಂಧಿಕರಾದ ದುರಗಮ್ಮ, ಭೀಮಮ್ಮ, ಹುಸೇನಪ್ಪ, ಫಕೀರಪ್ಪ ಎಂಬುವವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಗಂಗಾವತಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೃತ ಹೆಣ್ಣು ಮಗುವಿನ ಪಾಲಕರು ಮೂಲತಃ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕು ಅಮಲಾಪೂರ ಗ್ರಾಮದವರು. ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಮೋಹರಂ ಹಬ್ಬಕ್ಕೆ ಹೆಬ್ಬಾಳ ಗ್ರಾಮದ ಸಂಬಂಧಿಕರ ಮನೆಗೆ ಬಂದಾಗ ಈ ದುರ್ಘಟನೆ ನಡೆದಿದೆ.

ತಹಸೀಲ್ದಾರ್ ಭೇಟಿ: ಘಟನೆ ಹಿನ್ನೆಲೆ ಗಂಗಾವತಿ ತಹಸೀಲ್ದಾರ್ ಯು ನಾಗರಾಜ ಹಾಗೂ ಗ್ಯಾರಂಟಿ ಸಮಿತಿ ಅಧ್ಯಕ್ಷರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತ ಬಾಲಕಿಯ ಕುಟುಂಬಕ್ಕೆ ಸರಕಾರದಿಂದ ಪರಿಹಾರ ನೀಡುವ ಭರವಸೆ ನೀಡಿದರು. ಉಳಿದಂತೆ ಗ್ರಾಮದಲ್ಲಿ ನಾನಾ ಕಡೆ ಮಳೆಯಿಂದ ಹಾನಿಗೆ ಒಳಗಾದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿದರು.



ಗಂಗಾವತಿ ತಾಲೂಕು ಹೆಬ್ಬಾಳ ಗ್ರಾಮದಲ್ಲಿ ಜಡಿ ಮಳೆಯಿಂದ ಮನೆ ಕುಸಿದು ಬಿದ್ದಿದ್ದು, ಮಗು ಮೃತಪಟ್ಟಿದೆ.

ತಿಂಗಳ ನಂತರ ಬಂದ ಮಳೆ

ಕೊಪ್ಪಳ ಜಿಲ್ಲೆಯ ಬಹುತೇಕ ಕಡೆ ಕಳೆದ ಒಂದು ತಿಂಗಳಿಂದ ಮಳೆ ಕೊರತೆ ಉಂಟಾಗಿತ್ತು. ಬೆಳೆಗೆ ತೇವಾಂಶದ ಕೊರತೆಯಿಂದ ರೈತರು ಮುಗಿಲ ಕಡೆ ಮುಖ ಮಾಡಿದ್ದರು. ನಿನ್ನೆ ಮಧ್ಯಾಹ್ನದಿಂದ ನಿರಂತರವಾಗಿ ಮಳೆ ಆಗುತ್ತಿದ್ದು, ರೈತರಲ್ಲಿ ಸಂತಸ ಮೂಡಿದೆ. ಮತೊಂದೆಡೆ ಮಳೆಗೆ ಮಣ್ಣಿನ ಮನೆಯ ಗೋಡೆ ನೆನೆದು ಕುಸಿದು ಬಿಳುತ್ತಿವೆ. ಮಳೆರಾಯ ರೈತರಿಗೆ ಖುಷಿ ಕೊಟ್ಟು ಹಲವೆಡೆ ಅವಾಂತರ ಸೃಷ್ಟಿಸಿದ್ದಾನೆ.

ಗಂಗಾವತಿ ತಾಲೂಕು ಹೆಬ್ಬಾಳ ಗ್ರಾಮದಲ್ಲಿ ಮನೆ ಕುಸಿದು ಮಗು ಮೃತಪಟ್ಟ ಘಟನೆ ಹಿನ್ನೆಲೆ ಬೆಳಗ್ಗೆಯೇ ತಹಸೀಲ್ದಾರ್ ಅವರನ್ನು ಕರೆಯಿಸಿ, ಮಹಜರು ಮಾಡಿಸಲಾಗಿತ್ತು. ಸಂಜೆ ವೇಳೆಗೆ ನೊಂದವರ ಕುಟುಂಬಕ್ಕೆ ನೇರವಾಗಿ ಪರಿಹಾರದ ಹಣ 5 ಲಕ್ಷ ರು.ಜಮಾ ಆಗುವಂತೆ ಕ್ರಮ ವಹಿಸಲಾಗಿದೆ.

- ರೆಡ್ಡಿ ಶ್ರೀನಿವಾಸ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ

ಜಾತಿ ಬಿಟ್ಟರೆ ಆರ್ಥಿಕ ಸಬಲರಾಗಲು ಸಾಧ್ಯ

ಯಲಬುರ್ಗಾ: ಈಗ ಜಾತಿಗೊಂದು ಸೌಹಾರ್ದಗಳು ಸ್ಥಾಪನೆ ಆಗುತ್ತಿದ್ದು, ಕೇವಲ ಜಾತಿಯೊಂದೆ ಸೌಹಾರ್ದ ಸ್ಥಾಪನೆಗೆ ಮಾನದಂಡವಲ್ಲ, ಜಾತಿ ಕಟ್ಟಲೆಯಿಂದ ಹೊರಬಂದು ಸೌಹಾರ್ದ ರಚನೆಯಾದಾಗ ಮಾತ್ರ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ಕೊಪ್ಪಳ ಸಹಕಾರಿ ಒಕ್ಕೂಟಗಳ ನಿರ್ದೇಶಕ ಹಾಗೂ ಸಹಕಾರಿ ರತ್ನ ಪುರಸ್ಕೃತ ನಾಗಲಿಂಗಪ್ಪ ಪತ್ತಾರ ಹೇಳಿದರು. ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರ ಇವರ ನೇತೃತ್ವದಲ್ಲಿ ನಡೆದ ವಲಯ ಮಟ್ಟದ ತರಬೇತಿ ಕಾರ್ಯಾಗಾರ ಉದ್ದೇಶಿಸಿ ಅವರು ಮಾತನಾಡಿದರು. ನಂತರ ಇನ್ನೊಬ್ಬ ನಿರ್ದೇಶಕ ನೀಲನಗೌಡ ಮಾತನಾಡಿ, ಈಗ ಸೌಹಾರ್ದಗಳು ಈಗ ನಷ್ಟದ ಹಾದಿಯಲ್ಲಿವೆ, ಸಹಕಾರಿ ಸಂಘ ಬೈಲಾದಲ್ಲಿ ಬೇಬಾಕ ವ್ಯವಸ್ಥೆ ಜಾರಿ ಆಗಬೇಕು. ಆವಾಗ ಸಾಲವನ್ನು ಪಾರದರ್ಶಕವಾಗಿ ಪಾವತಿ ಮಾಡಬಹುದಾಗಿದೆ. ಇದರಿಂದ ಆರ್ಥಿಕ ಸಂಕಷ್ಟ ದೂರ ಮಾಡಬಹುದಾಗಿದೆ ಎಂದರು. ಸೌಹಾರ್ದಗಳು ಏರಿಕೆ ದಿನೇ ದಿನೇ ಏರಿಕೆ ಆಗುತ್ತಿವೆ. ನಂತರ ನಷ್ಟದ ಅಡ್ಡ ಪರಿಣಾಮದಿಂದ ನಶಿಸಿ ಹೋಗುತ್ತಿವೆ. ಇದಕ್ಕೆ ಸರಿಯಾದ ಕಂಡುಕೊಳ್ಳಬೇಕಾಗಿದೆ. ಮುಂದಿನ ದಿನಗಳಲ್ಲಿ ಸೌಹಾರ್ದಗಳಲ್ಲಿ ಸಿಎಸ್ ಸಿ ಸೆಂಟರ್ ಅನುಮತಿ, ಮತ್ತು ರಸ ಗೊಬ್ಬರಗಳ ಮಾರಾಟಕ್ಕೆ ಚಿಂತನೆ ನಡೆಯುತ್ತಿದೆ ಎಂದು ನಿರ್ದೇಶಕ ಶೀಧರ್ ಹೇಳಿದರು. ಸೂರ್ಯಕಾಂತ ರಾಕ್ಲೆ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಓಂಕಾರ, ಹಾಗೂ ಇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನಾಲ್ಕನೇ ಟೆಸ್ಟ್‌ಗೆ ಅರ್ಷದೀಪ್ ಸಿಂಗ್‌ಗೆ ಅವಕಾಶ ಸಂಭವ

ಬುಮ್ರಾಗೆ ಮತ್ತೆ ವಿರಾಮ, ಪಂತ್ ಔಟ್

ಮ್ಯಾಂಚೆಸ್ಟರ್: ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ 22 ರನ್‌ಗಳ ಸೋಲು ಕಂಡಿದ್ದ ಭಾರತ ತಂಡವು ನಾಲ್ಕನೇ ಟೆಸ್ಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಸರಣಿಯನ್ನು ಸಮಬಲಗೊಳಿಸುವ ವಿಶ್ವಾಸದಲ್ಲಿದೆ. ನಾಲ್ಕನೇ ಪಂದ್ಯ ಜುಲೈ 23 ರಿಂದ 27 ರವರೆಗೆ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯಲಿದೆ. ಈ ಪಂದ್ಯಕ್ಕೆ ಪ್ರಧಾನ ವೇಗಿ ಜಸ್‌ಪ್ರೀತ್ ಬುಮ್ರಾಗೆ ವಿಶ್ರಾಂತಿ ನೀಡುವ ಜತೆಗೆ ಕನ್ನಡಿಗ ಕರುಣ್ ನಾಯರ್ ಬದಲು ಸಾಯಿ ಸುದರ್ಶನ್‌ಗೆ ಅವಕಾಶ ನೀಡುವ ಸಾಧ್ಯತೆ ಇದೆ.

ಜಸ್‌ಪ್ರೀತ್ ಬುಮ್ರಾ ಅವರನ್ನು ಈ ಸರಣಿಯಲ್ಲಿ ಮೂರೇ ಟೆಸ್ಟ್ ಪಂದ್ಯಗಳಿಗೆ ಮೀಸಲಿರಿಸುವುದಾಗಿ ತಂಡದ ಪ್ರಕಟಕ್ಕೂ ಮುನ್ನವೇ ನಿರ್ಧರಿಸಲಾಗಿತ್ತು. ಅದರಂತೆ ಅವು ಮೊದಲ ಟೆಸ್ಟ್ ಬಳಿಕ ದ್ವಿತೀಯ ಟೆಸ್ಟ್ ನಲ್ಲಿ ವಿಶ್ರಾಂತಿ ಪಡೆದಿದ್ದರು. ಮೂರನೇ ಪಂದ್ಯದಲ್ಲಿ ಮತ್ತೆ ಆಡಿದ್ದರು. ಅದರಂತೆ ಅವರನ್ನು 4ನೇ ಪಂದ್ಯದಿಂದ ಹೊರಗುಳಿಸಿ, ಅಂತಿಮ ಟೆಸ್ಟ್‌ನಲ್ಲಿ ಆಡಿಸುವ ಸಾಧ್ಯತೆ ಇದೆ.

ಬುಮ್ರಾ ವಿಶ್ರಾಂತಿ ಪಡೆದರೆ ಈ ಬಾರಿ ಕನ್ನಡಿಗ ಪ್ರಸಿದ್ಧ್ ಕೃಷ್ಣಗೆ ಅವಕಾಶ ಸಿಗುವುದು ಕಷ್ಟ. ಏಕೆಂದರೆ ಅವರು ಆಡಿದ ಎರಡು ಟೆಸ್ಟ್‌ನಲ್ಲಿ ನಿರೀಕ್ಷಿತ ಬೌಲಿಂಗ್ ನಡೆಸಿರಲಿಲ್ಲ. ಹೀಗಾಗಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಟೆಸ್ಟ್‌ಕ್ಯಾಪ್ ಧರಿಸುವ ಸಾಧ್ಯತೆ ಇದೆ. ವಿಕೆಟ್ ಕೀಪರ್, ಬ್ಯಾಟರ್ ರಿಷಭ್ ಪಂತ್ ಕೂಡ ಮ್ಯಾಂಚೆಸ್ಟರ್‌ನಲ್ಲಿ ನಡೆಯುವ ಪಂದ್ಯದಿಂದ ಹೊರಗುಳಿಯುವ ಸಾಧ್ಯತೆ ಇದೆ. ಲಾರ್ಡ್ಸ್ ಟೆಸ್ಟ್‌ನ ಮೊದಲ ದಿನದಾಟದ ವೇಳೆ ಪಂತ್ ಬೆರಳಿಗೆ ಗಾಯವಾಗಿತ್ತು. ಇದರ ಪರಿಣಾಮವಾಗಿ, ಮೊದಲ ಇನ್ನಿಂಗ್ಸ್‌ನಲ್ಲಿ 34 ಓವರ್‌ಗಳ ನಂತರ ಅವರು ಕೀಪಿಂಗ್ ಮಾಡಲಿಲ್ಲ. ಧ್ರುವ್ ಜುರೆಲ್ ಕೀಪಿಂಗ್ ನಡೆಸಿದ್ದರು. ಪಂತ್ ಗಾಯದ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಅವರು ಹೊರಗುಳಿದರೆ ಧ್ರುವ್ ಜುರೆಲ್ ಆಡುವ ಬಳಗದಲ್ಲಿ ಸ್ಥಾನ ಪಡೆಯಲಿದ್ದಾರೆ.

4ನೇ ಟೆಸ್ಟ್‌ಗೆ ಸಂಭಾವ್ಯ ತಂಡ

ಯಶಸ್ವಿ ಜೈಸ್ವಾಲ್, ಕೆ.ಎಲ್ ರಾಹುಲ್, ಸಾಯಿ ಸುದರ್ಶನ್, ಶುಭಮನ್ ಗಿಲ್ (ನಾಯಕ), ರವೀಂದ್ರ ಜಡೇಜಾ, ಧ್ರುವ್ ಜುರೆಲ್ (ವಿ.ಕೀ.), ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಆಕಾಶ್ ದೀಪ್, ಮೊಹಮ್ಮದ್ ಸಿರಾಜ್.

ಕರುಣ್ ಟೆಸ್ಟ್ ಭವಿಷ್ಯ ಅಂತ್ಯ?

ಲಂಡನ್: ಸುಮಾರು 8 ವರ್ಷಗಳ ಬಳಿಕ ಭಾರತದ ಟೆಸ್ಟ್ ತಂಡಕ್ಕೆ ಮರಳಿದ ಕನ್ನಡಿಗ ಕರುಣ್ ನಾಯರ್ ನಿರೀಕ್ಷಿತ ಪ್ರದರ್ಶನ ತೋರುವಲ್ಲಿ ವಿಫಲರಾದ ಕಾರಣ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಿಂದ ಅವರನ್ನು ಕೈಬಿಡುವ ಸಾಧ್ಯತೆ ಹೆಚ್ಚಿದೆ. ಒಂದು ವೇಳೆ ಇದು ನಿಜವಾದರೆ ಕರುಣ್ ಅವರ ಅಂತಾರಾಷ್ಟ್ರೀಯ ಟೆಸ್ಟ್ ಕೆರಿ ಯರ್ ಈ ಟೂರ್ನಿಯಲ್ಲೇ ಅಂತ್ಯವಾಗುವ ನಿರೀಕ್ಷೆ ಇದೆ.

ಇಂಗ್ಲೆಂಡ್ ವಿರುದ್ಧ ಆಡಿದ ಆರೂ ಇನ್ನಿಂಗ್ಸ್‌ಗಳಲ್ಲಿ ಕರುಣ್ ನಾಯರ್ ಕೇವಲ 131 ರನ್ ಗಳಿಸಿದ್ದಾರೆ. ಲಾರ್ಡ್ಸ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಹೊಡೆದ 40 ರನ್ನೇ ಅವರ ಹೆಚ್ಚಿನ ಗಳಿಕೆ. ಮೊದಲ ಇನ್ನಿಂಗ್ಸ್‌ನಲ್ಲಿ ಸೊನ್ನೆ ಸುತ್ತಿದ್ದ ನಾಯರ್ ಬಳಿಕ, ಕ್ರಮವಾಗಿ 20, 31, 26, 40, 14 ರನ್ ಗಳಿಸಿದ್ದಾರೆ.

ಕರುಣ್‌ಗೆ ಇನ್ನೂ ಒಂದು ಅವಕಾಶ ಕೊಡಿ ಎಂಬುದಾಗಿ ಅನಿಲ್ ಕುಂಬ್ಳೆ ಹೇಳಿದ್ದಾರೆ. ಆದರೆ ಲಾರ್ಡ್ಸ್‌ನಲ್ಲಿ ಭಾರತ ಸೋತ ಕಾರಣ ನಾಯರ್‌ಗೆ ಅವಕಾಶ ಕಷ್ಟ ಸಾಧ್ಯ. ಇವರ ಸ್ಥಾನದಲ್ಲಿ ಸಾಯಿ ಸುದರ್ಶನ್‌ಗೆ ಅವಕಾಶ ಸಿಗುವ ಸಾಧ್ಯತೆ ಅಧಿಕವಾಗಿದೆ. ನಾಯಕ ಶುಭಮನ್ ಗಿಲ್ ಕೂಡ ಗುಜರಾತ್ ತಂಡದ ಸಹ ಆಟಗಾರ ಸುದರ್ಶನ್ ಮೇಲೆ ಹೆಚ್ಚಿನ ಒಲವು ಹೊಂದಿದ್ದಾರೆ. 2016ರಲ್ಲಿ ಮೊಹಾಲಿಯಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಕರುಣ್ ಆಡಿದ ಮೂರನೇ ಟೆಸ್ಟ್‌ನಲ್ಲಿಯೇ (ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧ) ತ್ರಿಶತಕ (ಅಜೇಯ 303) ಬಾರಿಸಿ ಗಮನ ಸೆಳೆದಿದ್ದರು. ಆದರೆ ನಂತರ ಅವರಿಗೆ ಕೇವಲ ಮೂರು ಟೆಸ್ಟ್ ಪಂದ್ಯಗಳಲ್ಲಿ ಮಾತ್ರ ಆಡುವ ಅವಕಾಶ ಸಿಕ್ಕಿತ್ತು. ಕಳೆದ ದೇಶಿ ಋತುವಿನಲ್ಲಿ ರಣಜಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳಲ್ಲಿ ರನ್‌ಗಳ ಹೊಳೆಯನ್ನೇ ಹರಿಸಿದ ನಾಯರ್ ಅವರ ಛಲದ ಆಟದ ಮುಂದೆ ಮಣಿದ ಬಿಸಿಸಿಐ ಆಯ್ಕೆ ಸಮಿತಿ ಇಂಗ್ಲೆಂಡ್ ಪ್ರವಾಸಕ್ಕೆ ಆಯ್ಕೆ ಮಾಡಿತ್ತು.

ಲಂಕಾ ವಿರುದ್ಧ ಬಾಂಗ್ಲಾಗೆ ಜಯ

ಕೊಲಂಬೊ: ಶ್ರೀಲಂಕಾ ಪ್ರವಾಸದಲ್ಲಿರುವ ಬಾಂಗ್ಲಾದೇಶ ಮೂರು ಪಂದ್ಯಗಳ ಟಿ20 ಸರಣಿಯನ್ನು 2-1 ಅಂತರದಲ್ಲಿ ಗೆದ್ದು ಐತಿಹಾಸಿಕ ಜಯ ಸಾಧಿಸಿದೆ. ಕೊಲಂಬೊದಲ್ಲಿ ನಡೆದ ಲಂಕಾ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ ಬಾಂಗ್ಲಾದೇಶ ತಂಡ 8 ವಿಕೆಟ್ ಗಳ ಅಂತರದ ಭರ್ಜರಿ ಜಯ ಸಾಧಿಸಿದೆ.

ಬಾಂಗ್ಲಾದೇಶ ತಂಡವು ಈವರೆಗೆ ಲಂಕಾ ವಿರುದ್ಧ ಟಿ 20 ಸರಣಿ ಗೆದ್ದಿರಲಿಲ್ಲ. ಈ ಪಂದ್ಯದಲ್ಲಿ ಭರ್ಜರಿ ಬೌಲಿಂಗ್ ಪ್ರದರ್ಶನ ನೀಡಿದ ಮೆಹದಿ ಹಸನ್ 4 ಓವರ್ ನಲ್ಲಿ ಕೇವಲ 2.80 ಸರಾಸರಿಯಲ್ಲಿ ಕೇವಲ 11 ರನ್ ನೀಡಿ 4 ವಿಕೆಟ್ ಪಡೆದು ಭಾರತದ ಹರ್ಭಜನ್ ಸಿಂಗ್ ಹೆಸರಿನಲ್ಲಿದ್ದ ದಾಖಲೆ ಮುರಿದರು. 2012ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಹರ್ಭಜನ್ ಸಿಂಗ್ ಕೇವಲ 12 ರನ್ ನೀಡಿ 4 ವಿಕೆಟ್ ಪಡೆದಿದ್ದರು.

ಜಿತೇಶ್ ಶರ್ಮಾ ಬರೋಡಗೆ ಶಿಫ್ಟ್

ದೆಹಲಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಐಪಿಎಲ್ ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ತೋರಿದ ವಿಕೆಟ್ ಕೀಪರ್ ಜಿತೇಶ್ ಶರ್ಮಾ ಮುಂದಿನ 2025-26ರ ಸಾಲಿನ ದೇಶಿ ಕ್ರಿಕೆಟ್‌ನಲ್ಲಿ ವಿದರ್ಭ ತಂಡವನ್ನು ತೊರೆದು ಬರೋಡ ತಂಡದ ಪರ ಆಡಲು ನಿರ್ಧರಿಸಿದ್ದಾರೆ. ಆರ್‌ಸಿಬಿ ಸಹ ಆಟಗಾರ ಕೃಣಾಲ್ ಪಾಂಡ್ಯ ಅವರ ನಾಯಕತ್ವದ ಬರೋಡ ತಂಡದಲ್ಲಿ ಜಿತೇಶ್ ಶರ್ಮಾ ಈ ಬಾರಿ ರಣಜಿ ಟ್ರೋಫಿ ಸೇರಿದಂತೆ ವೈಟ್ ಬಾಲ್ ಟೂರ್ನಿಗಳನ್ನು ಆಡಲಿದ್ದಾರೆ. ಕೃಣಾಲ್ ಪಾಂಡ್ಯ ಸಹೋದರ ಹಾರ್ದಿಕ್ ಪಾಂಡ್ಯ ಕೂಡ ಬರೋಡ ತಂಡದಲ್ಲಿ ಆಡಲಿದ್ದಾರೆ.

2024 ರ ಜನವರಿಯಲ್ಲಿ ಅಫ್ಘಾನಿಸ್ತಾನ ವಿರುದ್ಧದ ಟಿ20ಐ ಪಂದ್ಯದ ಬಳಿಕ ಜಿತೇಶ್ ಶರ್ಮಾ ಭಾರತ ತಂಡದ ಪರ ಯಾವುದೇ ಪಂದ್ಯವನ್ನು ಆಡಿಲ್ಲ. ಜಿಂಬಾಬ್ವೆ, ಬಾಂಗ್ಲಾದೇಶ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಗಳ ಭಾರತ ಟಿ 20 ತಂಡದಲ್ಲಿದ್ದರು. ಆದರೆ ಒಂದೇ ಒಂದು ಪಂದ್ಯವನ್ನು ಆಡಲು ಅವಕಾಶ ಸಿಕ್ಕಿರಲಿಲ್ಲ.

ಸೆ.26-28ಕ್ಕೆ ಭಾರತಕ್ಕೆ ಉಸೇನ್ ಬೋಲ್ಟ್

ದೆಹಲಿ: ವಿಶ್ವದ ಅತ್ಯಂತ ವೇಗದ ಓಟಗಾರ, ಎಂಟು ಒಲಿಂಪಿಕ್ ಚಿನ್ನದ ಪದಕ ವಿಜೇತ ಜಮೈಕದ ಉಸೇನ್ ಬೋಲ್ಟ್ ಸೆಪ್ಟೆಂಬರ್ 26ರಿಂದ 28ರವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ. ಇದು ಭಾರತಕ್ಕೆ ಅವರು ನೀಡುತ್ತಿರುವ ಎರಡನೇ ಭೇಟಿಯಾಗಿದೆ. ಇದಕ್ಕೂ ಮೊದಲು, ಅವರು 2014ರಲ್ಲಿ ಬೆಂಗಳೂರಿಗೆ ಬಂದಿದ್ದರು. ಈ ಬಾರಿ ದೆಹಲಿ ಮತ್ತು ಮುಂಬೈಗೆ ಭೇಟಿ ನೀಡಲಿದ್ದಾರೆ. ಶಾಲಾ ಮಕ್ಕಳ ರಾಷ್ಟ್ರವ್ಯಾಪಿ ಸ್ಪ್ರಿಂಟ್ ಚಾಲೆಂಜ್ (ವೇಗದ ಓಟದ ಸ್ಪರ್ಧೆ) ಫೈನಲ್‌ನಲ್ಲಿ ಬೋಲ್ಟ್ ಪಾಲ್ಗೊಳ್ಳಲಿದ್ದಾರೆ.

ಭಾರತ ಪ್ರವಾಸದ ಬಗ್ಗೆ ಮಾತನಾಡಿ ರುವ ಬೋಲ್ಟ್ 'ನಾನು ಭಾರತಕ್ಕೆ ಮರಳಲು ಉತ್ಸುಕನಾಗಿದ್ದೇನೆ. ಇಲ್ಲಿನ ಶಕ್ತಿ, ಜನರು ಮತ್ತು ಕ್ರೀಡೆಯ ಮೇಲಿನ ಉತ್ಸಾಹ ನಿಜಕ್ಕೂ ಸಾಟಿಯಿಲ್ಲ. ನನಗೆ ಭಾರತದಲ್ಲಿ ಬಹಳಷ್ಟು ಅಭಿಮಾನಿಗಳಿ ದ್ದಾರೆ ಮತ್ತು ಈ ವರ್ಷದ ಕೊನೆಯಲ್ಲಿ ಅಲ್ಲಿಗೆ ನನ್ನ ಭೇಟಿಯನ್ನು ನಿಜವಾಗಿಯೂ ಎದುರು ನೋಡುತ್ತಿದ್ದೇನೆ' ಎಂದು ಹೇಳಿದ್ದಾರೆ.

2014ರಲ್ಲಿ ಪೂಮಾ ಕಂಪೆನಿ ಮತ್ತು ಇಕಾಮರ್ಸ್ ಕಂಪೆನಿ ಫ್ಲಿಪ್‌ಕಾರ್ಟ್ ಆಯೋಜಕರ ಕಾರ್ಯಕ್ರಮದ ಭಾಗ ವಾಗಿ ಬೋಲ್ಟ್ ಬೆಂಗಳೂರಿಗೆ ಭೇಟಿ ನೀಡಿ ದ್ದರು. ಬೋಲ್ಟ್ 2010 ರಲ್ಲಿ ದೆಹಲಿಯಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಂಡಿರಲಿಲ್ಲ. ಚಿನ್ನಸ್ವಾಮಿ ಸ್ಟೇಡಿಯಂಗೆ ಭೇಟಿ ನೀಡಿದ್ದ ವೇಳೆ ಬೋಲ್ಟ್ ಅವರು ಯುವರಾಜ್ ಸಿಂಗ್ ಜತೆ ಕ್ರಿಕೆಟ್ ಕೂಡ ಆಡಿದ್ದರು. ಬಳಿಕ 100 ಮೀ. ಓಟವನ್ನು ಕೂಡ ಓಡಿದ್ದರು. ಈ ವೇಳೆ ಯುವರಾಜ್ ಅವರು ಬೋಲ್ಟ್ ಹಿಂದಿ ಕ್ಕಿದ್ದರು. ಬಳಿಕ 'ಇಡೀ ವಿಶ್ವದಲ್ಲಿ ನಿಮ್ಮನ್ನ ಸೋಲಿಸಿರುವ ಏಕೈಕ ವ್ಯಕ್ತಿ ಬಹುಶಃ ನಾನೊಬ್ಬನೇ..' ಎಂದು ಯುವರಾಜ್ ಸಿಂಗ್ ತಮಾಷೆಯಾಗಿ ಟ್ವೀಟ್ ಮಾಡಿದ್ದರು.

ಜಪಾನ್ ಓಪನ್ ಟೂರ್ನಿಯಲ್ಲಿ ಲಕ್ಷ್ಯ ಸೇನ್, ಸಾತ್ವಿಕ್-ಚಿರಾಗ್ ಶೆಟ್ಟಿಗೆ ಸೋಲು

ಬ್ಯಾಡ್ಮಿಂಟನ್: ಭಾರತಕ್ಕೆ ನಿರಾಶೆ

ಟೋಕಿಯೊ: ಇಲ್ಲಿ ನಡೆಯುತ್ತಿರುವ 'ಜಪಾನ್ ಓಪನ್ ಸೂಪರ್ 750' ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತಕ್ಕೆ ನಿರಾಸೆ ಉಂಟಾಗಿದೆ. ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಲಕ್ಷ್ಯ ಸೇನ್ ಮತ್ತು ಸಾತ್ವಿಕ್ ಸಾಯಿರಾಜ್-ಚಿರಾಗ್ ಶೆಟ್ಟಿ ಜೋಡಿ ಸೋತು ತಮ್ಮ ಅಭಿಯಾನ ಮುಗಿಸಿದ್ದಾರೆ. ಇದಕ್ಕೂ ಮುನ್ನ ಅನುಭವಿ ಆಟಗಾರ್ತಿ ಪಿ.ವಿ. ಸಿಂಧು ಮೊದಲ ಸುತ್ತಿನಲ್ಲೇ ಆಘಾತಕಾರಿ ಸೋಲು ಕಂಡಿದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಆತಿಥೇಯ ನಾಡಿನ ಕೊಡೈ ನರವೋಕ ಎದುರು 19-21, 11-21 ನೇರ ಗೇಮ್‌ಗಳಿಂದ ಪರಾಭವಗೊಂಡರೆ, ಪುರುಷರ ಡಬಲ್ಸ್‌ನಲ್ಲಿ 15ನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್-ಚಿರಾಗ್ ಶೆಟ್ಟಿ ಜೋಡಿ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ 22-24, 14-21 ಸೋಲು ಕಂಡರು.

ಮೊದಲ ಗೇಮ್‌ನಲ್ಲಿ ನರವೋಕಗೆ ತೀವ್ರ ಪೈಪೋಟಿ ನೀಡಿದ್ದ ಸೇನ್ ದ್ವಿತೀಯ ಗೇಮ್‌ನಲ್ಲಿ ಸಂಪೂರ್ಣ ವಿಫಲರಾದರು. 11 ಅಂಕ ಮಾತ್ರ ಗಳಿಸಲು ಸಾಧ್ಯವಾಯಿತು. ಅತ್ತ ಸಾತ್ವಿಕ್ ಸಾಯಿರಾಜ್-ಚಿರಾಗ್ ಶೆಟ್ಟಿ ಜೋಡಿ ಕೂಡ ಮೊದಲ ಗೇಮ್‌ನಲ್ಲಿ ಹೋರಾಟ ನಡೆಸಿ ಆ ಬಳಿಕದ ಗೇಮ್‌ನಲ್ಲಿ ನೀರಸ ಪ್ರದರ್ಶನ ತೋರಿದರು. ಜಪಾನ್‌ನಲ್ಲಿ ಭಾರತೀಯ ತಂಡದ ಒಟ್ಟಾರೆ ಪ್ರದರ್ಶನ ಕಳಪೆಯಾಗಿತ್ತು.

ಸದ್ಯ ಭಾರತದ ಏಕೈಕ ಪದಕದ ಭರವಸೆ ಸ್ಪರ್ಧಿಯಾಗಿ ಉಳಿದಿರುವ ಅನುಪಮಾ ಉಪಾಧ್ಯಾಯ ಅವರ ಮೇಲೆ ಈಗ ಗಮನ ಕೇಂದ್ರೀಕರಿಸಲಾಗಿದೆ. ಅವರು ತಮ್ಮ 16ನೇ ಸುತ್ತಿನ ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ ಚೀನಾದ ವಾಂಗ್ ಝಿ ಯಿ ಅವರನ್ನು ಎದುರಿಸಲಿದ್ದಾರೆ. ಅನುಪಮಾ ಉಪಾಧ್ಯಾಯ ಮೊದಲ ಸುತ್ತಿನ ಪಂದ್ಯದಲ್ಲಿ ತನ್ನದೇ ದೇಶದ ರಕ್ಷಿತಾ ರಾಮರಾಜ್ ಅವರನ್ನು 21-15, 18-21, 21-18ರಿಂದ ಮಣಿಸಿದ್ದರು.

ನಂ.1 ಗ್ರ್ಯಾಂಡ್ ಮಾಸ್ಟರ್‌ಗೆ ಸೋಲುಣಿಸಿದ ಪ್ರಜ್ಞಾನಂದ

ಕಾರ್ಲ್‌ಸನ್ ಮತ್ತೆ ಪರಾಭವ

ಲಾಸ್‌ವೆಗಾಸ್: ಇಲ್ಲಿನ ನಡೆದ ಫ್ರೀ ಸ್ಟೈಲ್ ಗ್ರ್ಯಾಂಡ್ ಸ್ಲ್ಯಾಮ್ ಚೆಸ್ ಟೂರ್ನಿಯಲ್ಲಿ ವಿಶ್ವದ ನಂಬರ್ ಒನ್ ಮ್ಯಾಗ್ನಸ್ ಕಾರ್ಲ್ಸನ್ ವಿರುದ್ಧ ಭಾರ ತೀಯ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಜಯ ಸಾಧಿಸುವ ಮೂಲಕ ಕ್ವಾರ್ಟರ್ ಫೈನಲ್ ತಲುಪಿ ದ್ದಾರೆ. ನಾರ್ವೆಯ ಆಟಗಾರ ವಾರಗಳ ಹಿಂದೆ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಎದುರು ನಿರಾಶೆ ಅನುಭವಿಸಿದ್ದರು. ಇದೀಗ ಪ್ರಜ್ಞಾನಂದ ವಿರುದ್ಧ ಸೋಲು ಕಂಡಿದ್ದಾರೆ. ಗುಕೇಶ್ ಈ ಟೂರ್ನಿಯಿಂದ ಹೊರಗುಳಿದಿದ್ದಾರೆ.

19 ವರ್ಷದ ಪ್ರಜ್ಞಾನಂದ ಚಾಣಾಕ್ಷ ನಡೆಗಳಿಂದ ನಾರ್ವೆಯ ಆಟಗಾರರನ್ನು ಕಂಗೆಡಿಸಿದರು. ಇಲ್ಲಿ ಸೋತ ಕಾರ್ಲ್‌ಸನ್ ಮುಂದಿನ ಪಂದ್ಯದಲ್ಲಿ ಅಮೆರಿಕದ ವೆಸ್ಲಿ ಸೊ ಮತ್ತು ಕೊನೆಯಲ್ಲಿ ಲೆವೊನ್ ಆರೋನಿಯನ್ ಎದುರೂ ಸೋತು ಟೂರ್ನಿಯಿಂದ ಹೊರಬಿದ್ದರು. 16 ಆಟಗಾ ರರು ಭಾಗವಹಿಸಿರುವ ಈ ಟೂರ್ನಿ 26.50 ಕೋಟಿ ಮೊತ್ತದ ಬಹುಮಾನ ಹೊಂದಿದೆ. ಇದೇ ವೇಳೆ ಭಾರತದ ಅರ್ಜುನ್ ಇರಿಗೇಶಿ ಅವರು ಇನ್ನೊಂದು ಗುಂಪಿನಿಂದ ಎಂಟರ ಘಟ್ಟ ತಲುಪಿದ್ದಾರೆ. 'ವೈಟ್' ಗುಂಪಿನಲ್ಲಿ ಪ್ರಜ್ಞಾನಂದ ಮತ್ತು ಉಜ್ಬೇಕಿಸ್ತಾನದ ನದಿರ್‌ಬೇಕ್ ಅಬ್ದುಸತ್ತಾರೋವ್ ಅವರು ತಲಾ 4.5 ಪಾಯಿಂಟ್ಸ್ ಕಲೆ ಹಾಕಿ ಅಗ್ರಸ್ಥಾನದಲ್ಲಿದ್ದಾರೆ. ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಜ್ಞಾನಂದ ಅವರು ಸ್ಥಳೀಯ ಆಟಗಾರ ಫ್ಯಾಬಿಯಾನೊ ಕರುವಾನ ಅವರನ್ನು ಎದುರಿಸಲಿದ್ದಾರೆ. ಇರಿಗೇಶಿ ಅವರು ಅಬ್ದುಸತ್ತಾರೋವ್ ವಿರುದ್ಧ ಆಡಲಿದ್ದಾರೆ.

ನಾನು ನಟನಾಗಲು ಅಪ್ಪು ಸ್ಫೂರ್ತಿ

ಸಾಹಸ ಸನ್ನಿವೇಶದ ಸಂದರ್ಭದಲ್ಲಿ ರೋಪ್ ಬಳಸದೆ ರಿಯಲ್ ಸ್ಟಂಟ್ ಮಾಡಲು ಸಿದ್ಧನಾಗಿದ್ದೆ. ಆಚಾನಕ್ಕಾಗಿ ಕೆಳಗೆ ಬಿದ್ದು ನನ್ನ ಬೆನ್ನಿಗೆ ಪೆಟ್ಟಾಗಿತ್ತು. ಇದರಿಂದ ಒಂದು ವರ್ಷ ವಿಶ್ರಾಂತಿ ಪಡೆಯುವಂತಾಯಿತು, ಹಾಗಾಗಿ ಚಿತ್ರೀಕರಣ ತಡವಾಯಿತು.

ಮಾಜಿ ಸಚಿವ ಜನಾರ್ಧನ ರೆಡ್ಡಿ ಪುತ್ರ ಕಿರೀಟಿ ಸ್ಯಾಂಡಲ್‌ವುಡ್‌ಗೆ ಗ್ರ್ಯಾಂಡ್ ಎಂಟ್ರಿಕೊಟ್ಟಿದ್ದಾರೆ. ಕಿರೀಟಿಯ ಚೊಚ್ಚಲ ಚಿತ್ರ ಜೂನಿಯರ್ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ಅದ್ದೂರಿಯಾಗಿ ತೆರೆಗೆ ಬಂದಿದೆ. ಡ್ಯಾನ್ಸ್, ಫೈಟ್‌ನಲ್ಲಿ ಕಿರೀಟಿ ಮಿಂಚಿದ್ದಾರೆ. ಕಿರೀಟಿ ತಮ್ಮ ಚೊಚ್ಚಲ ಚಿತ್ರದ ಕುರಿತಂತೆ ವಿ.ಸಿನಿಮಾಸ್ ನೊಂದಿಗೆ ಖುಷಿ ಹಂಚಿಕೊಂಡಿದ್ದಾರೆ.

ವಿ.ಸಿನಿಮಾಸ್ : ಸಿನಿಮಾರಂಗವನ್ನು ಆಯ್ದುಕೊಳ್ಳಲು ಕಾರಣ ?

ಕಿರೀಟಿ : ನನಗೆ ರಾಜಕೀಯ, ಉದ್ಯಮಕ್ಕಿಂತ ಸಿನಿಮಾರಂಗದತ್ತಲೇ ಹೆಚ್ಚು ಒಲವಿತ್ತು. ಹಾಗಾಗಿ ಚಿತ್ರರಂಗವನ್ನೇ ಆಯ್ದುಕೊಂಡೆ. ನಾನು ನಟನಾಗಲೂ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರೇ ಕಾರಣ. ಅವರ ಜಾಕಿ ಸಿನಿಮಾ ನೋಡಿದ ಮೇಲೆ ನಾನು ನಟನಾಗಬೇಕು ಎಂದು ಮನದಲ್ಲಿ ಆಸೆ ಮೂಡಿತು. ಒಮ್ಮೆ ಅಪ್ಪು ಸರ್ ಬಳ್ಳಾರಿಗೆ ಬಂದಾಗ ಭೇಟಿಯಾಗಿ ಮಾತನಾಡಿಸಿದ್ದೆ. ಅವರು ಸಿನಿಮಾಗೆ ತಯಾರಿ ಹೇಗಿರಬೇಕು ಎಂದು ಸಲಹೆ ನೀಡಿದ್ದರು. ಅಂದಿನಿಂದ ಸಿನಿಮಾ ನಟನಾಗಲು ತಯಾರಿ ಆರಂಭಿಸಿದೆ.

ವಿ.ಸಿ : ಇಂತಹದ್ದೇ ಕಥೆಯ ಮೂಲಕ ಎಂಟ್ರಿಕೊಡಬೇಕು ಅಂದುಕೊಂಡಿದ್ರ?

ಕಿರೀಟಿ : ಒಳ್ಳೆಯ ಸಿನಿಮಾ ಮೂಲಕ ಸಿನಿರಂಗಕ್ಕೆ ಎಂಟ್ರಿಕೊಡಬೇಕು ಎಂದುಕೊಂಡಿದ್ದೆ. ನಿರ್ದೇಶಕ ರಾಧಾಕೃಷ್ಣ ಅವರು ನನಗೆ ಹೊಂದುವ ಕಥೆಯನ್ನು ಬರೆದಿದ್ದರು. ನನಗೂ ಕಥೆ ಇಷ್ಟವಾಯಿತು. ವಾರಾಹಿ ಪ್ರೊಡಕ್ಷನ್ಸ್ ಅವರು ನಿರ್ಮಾಣ ಮಾಡಿದರು. ಕಾಲೇಜು, ಪ್ರೀತಿಯ ಕಥೆಗೆ ಮಾತ್ರ ಚಿತ್ರ ಸೀಮಿತವಾಗಿಲ್ಲ ಚಿತ್ರ ಸೀಮಿತವಾಗಿಲ್ಲ. ಅದಕ್ಕೂ ಮೀರಿದ ಕಥೆ ಇಲ್ಲಿದೆ. ಫ್ಯಾಮಿಲಿ ಸೆಂಟಿಮೆಂಟ್ ಮನಸೆಳೆಯುತ್ತದೆ.

ವಿ.ಸಿ :ತಾರಾಗಣದ ಆಯ್ಕೆ ಮಾಡಿದ್ದು?

ಕಿರೀಟಿ : ಎಲ್ಲ ಜವಾಬ್ದಾರಿಯೂ ನಿರ್ದೇಶಕರ ಮತ್ತು ನಿರ್ಮಾಪಕರದ್ದೇ ಆಗಿತ್ತು. ನನಗೆ ಕಥೆ ತುಂಬಾ ಹಿಡಿಸಿತ್ತು. ಅದಕ್ಕೆ ತಕ್ಕಂತೆ ತಯಾರಿ ಆರಂಭಿಸಿದ್ದೆ. ನನಗೆ ಬಾಲ್ಯದಿಂದಲೂ ರವಿ ಸರ್ ಅಂದ್ರೆ ಇಷ್ಟ, ಅವರ ಸಿನಿಮಾ ನೋಡಿಕೊಂಡು ಬೆಳೆದವನು ನಾನು. ಅವರು ನನ್ನ ಚೊಚ್ಚಲ ಸಿನಿಮಾದಲ್ಲಿ ತಂದೆಯ ಪಾತ್ರದಲ್ಲಿ ನಟಿಸಿರುವುದು ಖುಷಿ ಕೊಟ್ಟಿದೆ. ಸುಧಾರಾಣಿ, ಜೆನಿಲಿಯಾ, ಶ್ರೀಲೀಲಾ ಹೀಗೆ ದೊಡ್ಡ ತಾರಾಬಳಗದ ಜತೆಗೆ ನಟಿಸಿರುವುದು ನಿಜವಾಗಿಯೂ ಸಂತಸತಂದಿದೆ.

ವಿ.ಸಿ : ಚಿತ್ರಕ್ಕೆ ತಯಾರಿ ಹೇಗಿತ್ತು?

ಕಿರೀಟಿ : ನಾನು ನಟನಾಗಬೇಕು ಎಂದು ನಿರ್ಧರಿಸಿದಾಗಲೇ ಅಭಿನಯದ ಬಗ್ಗೆ ತರಬೇತಿ ಪಡೆಯಲು ಶುರುಮಾಡಿದೆ. ಮೈಮ ಮಧು ಅವರಿಂದ ನಟನೆಯ ತರಬೇತಿ ಪಡೆದೆ. ವ್ಯಾಸಾಂಗಕ್ಕಾಗಿ ಲಂಡನ್‌ಗೆ ತೆರಳಿದಾಗ ಅಲ್ಲಿ ಬಿಡುವುದ್ದಾಗಲೆಲ್ಲ ನಟನೆಯ ಬಗ್ಗೆ ಟ್ರೈನಿಂಗ್ ಪಡೆಯುತ್ತಿದ್ದೆ. ಅಲ್ಲದೆ ರವಿ ಸರ್, ಸುಧಾರಾಣಿ ಅಂತಹ ದೊಡ್ಡ ಕಲಾವಿದರಿಂದ ಸಾಕಷ್ಟು ಕಲಿತೆ. ಇದರಿಂದ ಅಂದುಕೊಂಡಂತೆ ನಟಿಸಲು ಸಾಧ್ಯವಾಯಿತು. ನನಗೆ ಕಾಲೇಜು ದಿನಗಳಿಂದಲೂ ಸ್ಪೋರ್ಟ್ಸ್ ಬಗ್ಗೆ ಬಲು ಆಸಕ್ತಿಯಿತ್ತು. ಹಾಗಾಗಿ ಚಿತ್ರದಲ್ಲಿನ ಸಾಹಸ ಸನ್ನಿವೇಶಗಳಲ್ಲಿ ನಟಿಸಲು ಸುಲಭವಾಯಿತು.

ಎಕ್ಕ ಫುಲ್ ಕ್ಲಾಸ್ ಯುವ ಮಾಸ್

ಯುವ ಚಿತ್ರದಲ್ಲಿಯೇ ಮನಗೆದ್ದ ದೊಡ್ಮನೆ ಮೊಮ್ಮಗ ಯುವ ರಾಜ್ ಕುಮಾರ್ ಈಗ ಎಕ್ಕನಾಗಿ ಅಬ್ಬರಿಸುತ್ತಿದ್ದಾರೆ. ಎಕ್ಕ ಮಾಸ್ ಅಂಡ್ ಕ್ಲಾಸ್ ಆಗಿ ಮೂಡಿಬಂದಿದೆ. ಚಿತ್ರದ ಟ್ರೇಲರ್ ಹವಾ ಎಬ್ಬಿಸಿದ್ದು, ಹಾಡುಗಳು ಟ್ರೆಂಡ್ ಸೃಷ್ಟಿಸಿವೆ. ಎಕ್ಕ ಬ್ಲಾಕ್ ಬಸ್ಟರ್ ಸಿನಿಮಾ ಆಗೋದು ಈಗಾಗಲೇ ಖಚಿತವಾಗಿದೆ.

ಮನಸಿಗೆ ಹಿಡಿಸಿದ ಕಥೆ

ಯುವ ಚಿತ್ರದ ಬಳಿಕ ಒಳ್ಳೆಯ ಕಥೆಯ ಚಿತ್ರದಲ್ಲಿ ನಟಿಸಬೇಕು ಎಂದುಕೊಳ್ಳುತ್ತಿದ್ದೆ. ಸಾಕಷ್ಟು ಕಥೆಗಳನ್ನೂ ಕೇಳಿದ್ದೆ, ಯುವ ಚಿತ್ರಕ್ಕಿಂತ ಭಿನ್ನವಾದ ಸ್ಟೋರಿ ಬೇಕು ಎಂಬ ಹಂಬಲವಿತ್ತು. ಹೀಗಿರುವಾಗಲೇ ನಿರ್ದೇಶಕರು ಎಕ್ಕ ಚಿತ್ರದ ಕಥೆ ಹೇಳಿದರು. ಚಿತ್ರದ ನಾಯಕ ಮುತ್ತು, ಆತನ ವರ್ತನೆ, ಜರ್ನಿ ಇದೆಲ್ಲವೂ ನನ್ನನ್ನು ಗಾಢವಾಗಿ ಕಾಡಿತು. ನಾನು ಬಯಸುತ್ತಿದ್ದ ಕಥೆಯೇ ಸಿಕ್ಕಿದ್ದು ಸಂತಸ ತಂದಿತು. ಇಲ್ಲಿ ನಾನು ಮುತ್ತುವಾಗಿ ಕಾಣಿಸಿಕೊಂಡಿದ್ದು, ನನ್ನ ಪಾತ್ರ ಐದು ಶೇಡ್‌ನಲ್ಲಿ ಸಾಗಲಿದೆ ಎನ್ನುತ್ತಾರೆ ಯುವ.

ನಮ್ಮ ಬ್ಯಾನರ್ ಖುಷಿ

ಯುವ ಬಳಿಕ ನಾನು ಹುಡುಕುತ್ತಿದ್ದ ಕಥೆ ಸಿಕ್ಕಿತು. ಆ ಬಳಿಕ ನನಗೆ ದೊಡ್ಡ ಪ್ರೊಡಕ್ಷನ್ ಹೌಸ್ ಸಿಕ್ಕಿದ್ದು ಇನ್ನೂ ಖುಷಿಕೊಟ್ಟಿತು. ನಮ್ಮ ಪಿಆರ್‌ಕೆ ಪ್ರೊಡಕ್ಷನ್ಸ್, ಜಯಣ್ಣ, ಫಿಲಂಸ್, ಕೆಆರ್‌ಜಿ ಹೀಗೆ ದೊಡ್ಡ ನಿರ್ಮಾಣ ಸಂಸ್ಥೆ ನಮ್ಮ ಚಿತ್ರಕ್ಕೆ ಬಂಡವಾಳ ಹೂಡಿದ್ದು ಶಕ್ತಿತುಂಬಿತು. ಆಗಲೇ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಿತ್ತು ಎಂದು ಯುವ ಸಂತಸದಿಂದ ನುಡಿಯುತ್ತಾರೆ. ಚಿತ್ರದಲ್ಲಿ ರೋಮಾಂಚಕ ಸಾಹಸ ದೃಶ್ಯಗಳಿದ್ದು ಎಲ್ಲವೂ ನೈಜವಾಗಿ ಮೂಡಿಬಂದಿವೆಯಂತೆ.

ಮುಗ್ಧ ಮುತ್ತ

ಚಿತ್ರದ ನಾಯಕ ಮುತ್ತ ತಾಯಿಯ ಮುದ್ದು ಮಗ. ಬದುಕು ಕಟ್ಟಿಕೊಳ್ಳಲು ಹಳ್ಳಿಯಿಂದ ನಗರಕ್ಕೆ ಬರುವ ಮುತ್ತ ಹೇಗೆ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಲಾಂಗ್ ಹಿಡಿಯುತ್ತಾನೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಅದಕ್ಕೆ ಆ್ಯಕ್ಷನ್, ಥ್ರಿಲ್ಲರ್, ಸೆಂಟಿಮೆಂಟ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗಿದೆ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯರಾಗಿ ಬಣ್ಣಹಚ್ಚಿದ್ದು, ಆದಿತ್ಯ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ ರೋಹಿತ್ ಪದಕಿ ಕಥೆ ಬರೆದು ಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.

ಚಿತ್ರದಲ್ಲಿ ಎಮೋಷನ್ಸ್, ಆ್ಯಕ್ಷನ್ ಎಲ್ಲವೂ ಬೆರೆತಿದೆ. ಪ್ರೇಕ್ಷಕರಿಗೆ ಅಗತ್ಯವಾದ ಮನರಂಜನೆ ಇದೆ, ಹಾಗಾಗಿ ಚಿತ್ರ ಎಲ್ಲರಿಗೂ ಹಿಡಿಸುತ್ತದೆ ಎಂಬ ನಂಬಿಕೆ ಇದೆ. ಇಲ್ಲಿ ಯುವ ಚಿತ್ರಕ್ಕಿಂತ ವಿಭಿನ್ನವಾದ ಪಾತ್ರದಲ್ಲಿ ನನ್ನನ್ನು ಕಾಣಬಹುದು.

ಸಿನಿಮಾ ಎಂದರೆ ನನಗೆ ಪಂಚ ಪ್ರಾಣ, ನಟನೆಯೇ ನನ್ನ ಉಸಿರು. ಮುಂದೆ ನಾನು ಮತ್ತು ವಿನಯ್ ಒಟ್ಟಿಗೆ ನಟಿಸಬೇಕು ಎಂಬ ಆಸೆಯಿದೆ. ಅದಕ್ಕಾಗಿ ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೇನೆ.

ಚಿತ್ರದ ಬ್ಯಾಂಗಲ್ ಬಂಗಾರಿ.. ಹಾಡು ಸಖತ್ ಟ್ರೆಂಡ್ ಸೃಷ್ಟಿಸಿದೆ. ಎಲ್ಲರೂ ಆ ಹಾಡಿಗೆ ರೀಲ್ಸ್ ಮಾಡುತ್ತಿದ್ದಾರೆ. ಅದನ್ನು ನೋಡಿದರೆ ಖುಷಿ ಎನಿಸುತ್ತದೆ ಚಿತ್ರ ಅದಾಗಲೇ ಪ್ರೇಕ್ಷಕರನ್ನು ಸೆಳೆದಿರುವುದು ಖಚಿತವಾಗುತ್ತದೆ.

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ
@vishwavaninews
ಬೆಂಗಳೂರು
18-07-2025 ಶುಕ್ರವಾರ

ಚಿತ್ತವಿಹಾರ

ಗುರು ಎಂದರೆ ಯಾರು?

● ಸಾಕ್ಷಿ ಕತ್ತಿ

ನಮ್ಮ ದೇಶದಲ್ಲಿ ಪುರಾತನ ಕಾಲದಿಂದಲೂ ಇರುವ ನಂಬಿಕೆಯ ಪ್ರಕಾರ, ಪ್ರತಿ ಮನುಜ ಜನ್ಮ ತಾಳುವ ಮೂಲ ಉದ್ದೇಶವೇ ತನ್ನನ್ನು ತಾನು ಅರಿತು ಭಗವಂತನಲ್ಲಿ ಲೀನವಾಗಿ ಮೋಕ್ಷ ಪಡೆಯುವುದಕ್ಕಾಗಿ. ಆದರೆ, ಇಂತಹ ಒಂದು ಉದ್ದೇಶವನ್ನು ಅರಿತು, ಬಾಳುವವರ ಸಂಖ್ಯೆ ನಮ್ಮ ಸುತ್ತಮುತ್ತಲಿನ ಜನರಲ್ಲಿ ಬಹಳ ಕಡಿಮೆ ಎಂದೇ ಹೇಳಬಹುದು. ಕುವೆಂಪು ಅವರು ಹೇಳುವ ಹಾಗೆ ಪ್ರತಿ ಮನುಷ್ಯ ವಿಶ್ವ ಮಾನವನಾಗಿ ಹುಟ್ಟುತ್ತಾನೆ, ಬೆಳೆಯುತ್ತಾ ಅಲ್ಪಮಾನವನಾಗುತ್ತಾನೆ ಎಂಬುವಂತೆ, ಜನರು ಚಿಂತಿಸುವ ಪರಿ ಇಂದು ಬದಲಾಗಿದೆ! ಮನುಷ್ಯ ಭೂಮಿಗೆ ಬರುವುದೇ ಮೋಕ್ಷದ ದಾಹವನ್ನು ತೀರಿಸಿಕೊಳ್ಳಲು! ಆದರೆ, ಈ ಭೂಲೋಕದಲ್ಲಿ ಸಂಸಾರ, ಸಿರಿ – ಸಂಪತ್ತಿನ ಸುಪ್ಪತ್ತಿಗೆಯಲ್ಲಿ ಮಗ್ನನಾಗಿ ಹಾಗೂ ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯಗಳಾದ ಅರಿಷಡ್ವರ್ಗಗಳ ಆಸೆಗಳಿಗೆ ಮನಸೋತು ತನ್ನ ಜನನದ ಮೂಲ ಉದ್ದೇಶಗಳನ್ನೇ ಮರೆತು, ಅಜ್ಞಾನದ ಅಂಧಕಾರದಲ್ಲಿ ಸಂಚರಿಸುತ್ತಿರುವುದು ಸಹಜ ಎನಿಸಿದೆ. ಇಂತಹ ಸಂದರ್ಭದಲ್ಲಿ, ಮನುಷ್ಯನನ್ನು ಸುಜ್ಞಾನನದೆಡೆಗೆ ಕರೆದೊಯ್ಯಲು ಮನುಷ್ಯನ ಜೀವನದಲ್ಲಿ ಪ್ರವೇಶಿಸುವ ಶಕ್ತಿಯೇ ಗುರು!

ಗ್ರಂಥಗಳ ಪ್ರಕಾರ ಗುರು ಎಂದರೆ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ ಜ್ಞಾನದ ಬೆಳಕನ್ನು ಮೂಡಿಸುವ ಅಗಾಧ ಶಕ್ತಿ. ಸ್ಕಂದ ಪುರಾಣದ ಉತ್ತರಖಂಡ ವಾಗಿರುವ ಗುರು – ಗೀತೆಯ ಭಾಗದಲ್ಲಿ ತಿಳಿಸಿರುವ ಹಾಗೆ ಗುರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ಗುರುವೇ ಸಾಕ್ಷಾತ್ ಪರಬ್ರಹ್ಮ ಎಂದು ಗುರುತಿಸಲಾಗಿದೆ.

ಪ್ರತಿ ಹಸುಗೂಸಿನ ಜನನವಾದಾಗ ತಾಯಿ ತನ್ನ ಮಗುವಿಗೆ ತಂದೆಯನ್ನು ತೋರಿಸಿದರೆ, ತಂದೆ ಆ ಮಗುವಿಗೆ ಗುರುವನ್ನು ತೋರಿಸುತ್ತಾರೆ. ಆ ಮಗುವಿನಲ್ಲಿರುವ ಅಜ್ಞಾನದ ಕಳೆಯ ಕಿತ್ತು, ಸುಜ್ಞಾನದ ಬೀಜ ಬಿತ್ತಿ, ಸದ್ಗುಣಗಳ ಗೊಬ್ಬರ ಹಾಕಿ, ನವ ಚೇತನದ ಒಲವ ಮೂಡಿಸಿ, ಒಳಿತೆಂಬ ಗಾಳಿಯು ಅಳಿಯದೆ ಉಳಿಸುವ ಹಾಗೆ ಮಾಡುವ ನಿಸ್ವಾರ್ಥದ ಜ್ಯೋತಿಯೇ ಗುರು. ಸುತ್ತಲೂ ನಡೆಯುತ್ತಿರುವ ಆರ್ಥಿಕ ಲಾಭದ ತಳಹದಿಯ ಬದುಕನ್ನು ಕಂಡು, ಗೊಂದಲದ ಚಿಂತನದಲ್ಲಿ ಮುಳುಗಿರುವ ಮನುಷ್ಯರಿಗೆ ಮಾಯೆ ಎಂದರೆ ನಾವು ಊಹಿಸಿಕೊಳ್ಳುವ ಪರಿಕಲ್ಪನೆಯ ಸಂಗತಿ ಎಂಬ ಅರಿವನ್ನು ಮೂಡಿಸುವ ಚೈತನ್ಯದ ಬಿಂಬವೆ ಗುರು.

ಗುರುವಿನ ಗುಲಾಮನಾಗುವ ತನಕ ದೊರೆಯದು ಮುಕುತಿ ಎನ್ನುವ ಹಾಗೆ ಪ್ರತಿ ಜೀವಿಯು ತನ್ನನ್ನು ತಾನು ಗುರುವಿನ ಚರಣಗಳಿಗೆ ಸಮರ್ಪಿಸಿಕೊಂಡು ಶರಣಾಗುವವರೆಗೂ ಪರಮಾನಂದದ ಅನುಭವವನ್ನು ಪಡೆಯುವುದು ದುರ್ಲಭವೆನಿಸುತ್ತದೆ. ಆದುದರಿಂದ ನಮಗೊದಗಿಬಂದ ಈ ಮಾನವ ಜೀವನವನ್ನು ಗುರುವಿನ ಪಾದಕ್ಕೆ ಸಮರ್ಪಿಸುವ ಮೂಲಕ ಸಾರ್ಥಕ ಜೀವನ ನಡೆಸುವಲ್ಲಿ ಮುಂದಾಗೋಣ.

ಹನಿ ಮಳೆ

ವಿಪರ್ಯಾಸ

ಮುಂದುವರೆದ ಜಗತ್ತು
ಕೈ ತುಂಬಾ ಅವಕಾಶ
ದೂರ ಇಲ್ಲ ಆಕಾಶ
ರಸ್ತೆ ಮೇಲಿನ
ಚಿಕ್ಕ ವಿಷಯಗಳಿಗೆ
ಮನುಜ ಇನ್ನೂ ಹತಾಶ

● ಮಹಾಂತೇಶ ಮಾಗನೂ

ಪಠ್ಯದ ಜತೆಯಲಿ ಇರಲಿ ಜೀವನ ಪಾಠ

● ಗೌರಿ ಚಂದ್ರಕೇಸರಿ, ಶಿವಮೊಗ್ಗ

ಇಂದಿನ ಮಕ್ಕಳು ಒಂದನೇ ತರಗತಿಗೆ ಪ್ರವೇಶ ಪಡೆಯುವ ಹೊತ್ತಿಗೆ ಪ್ರೀ ಸ್ಕೂಲ್, ಎಲ್‌ಕೆಜಿ, ಯುಕೆಜಿ ಎಂದು ಹಲವಾರು ಹಂತಗಳನ್ನು ಪೂರೈಸಿಯೇ ಬಂದಿರುತ್ತಾರೆ. ಈ ಎರಡು–ಮೂರು ವರ್ಷಗಳ ಅವಧಿಯಲ್ಲಿ ಒಂದನೇ ತರಗತಿಗೆ ಅಗತ್ಯವಿರುವಷ್ಟು ಅಕ್ಷರ ಜ್ಞಾನವನ್ನು ಪಡೆದುಕೊಂಡಿರುತ್ತಾರೆ. ಮಕ್ಕಳಿಗೆ ಇಲ್ಲಿ ಓದುವ, ಬರೆಯುವ ಜ್ಞಾನವೇನೋ ದೊರೆಯುತ್ತದೆ. ಆದರೆ ಈ ವಯಸ್ಸಿನ ಮಕ್ಕಳು ತಮ್ಮ ಮೇಲೆ ಒದಗಬಹುದಾದ ಅಪಾಯಗಳು, ಅದರಿಂದ ಪಾರಾಗುವ ಬಗೆ ಹೇಗೆ, ಯಾವ ವ್ಯಕ್ತಿಯ ಉದ್ದೇಶ ಏನಾಗಿರುತ್ತದೆ ಎಂಬುದರ ಕುರಿತು ನಮ್ಮ ಸಮಾಜ ತಿಳುವಳಿಕೆಯನ್ನು ನೀಡದಿರುವುದು ಚಿಂತೆಗೀಡು ಮಾಡುತ್ತದೆ. ಹೆತ್ತವರು ಹಾಗೂ ಶಿಕ್ಷಕಿಯರು ಈ ವಿಷಯದ ಕುರಿತು ಯೋಚಿಸದೇ ಇರುವುದು ವಿಷಾದನೀಯ. ಇದರಿಂದ ಮುಗ್ಧ ಮಕ್ಕಳು ಬಿದ್ದ ಬಲೆಗೇ ಮತ್ತೆ ಮತ್ತೆ ಬೀಳುತ್ತಿದ್ದಾರೆ.

ಇತ್ತೀಚೆಗೆ ಮಕ್ಕಳ ಮೇಲಿನ ಲೈಂಗಿಕ ಕಿರುಕುಳಗಳು ಅವ್ಯಾಹತವಾಗಿ ನಡೆಯುತ್ತಲೇ ಇರುವ ವರದಿಗಳು ಬರುತ್ತಿವೆ. ಇಂತಹ ದೌರ್ಜನ್ಯದ ಸಮಯದಲ್ಲಿ, ದುರಳರ ಕೆಲಸವು ಕೆಲವೊಮ್ಮೆ ಮಕ್ಕಳ ಪ್ರಾಣಕ್ಕೂ ಸಂಚಕಾರ ತರುತ್ತದೆ. 'ಬೆಳ್ಳಗಿರುವುದೆಲ್ಲ ಹಾಲು' ಎಂದು ನಂಬುವಂತಹ ಮುಗ್ಧ ಮನಸು ಮಕ್ಕಳದು. ಅದರ ಲಾಭವನ್ನು ಪಡೆದುಕೊಂಡು ಕೆಲ ಅತೃಪ್ತ ಮನಸಿನ ದುರುಳರು ಮಕ್ಕಳ ಮೇಲೆ ನಾನಾ ಬಗೆಯ ದೌರ್ಜನ್ಯಗಳನ್ನೆಸಗುತ್ತಾರೆ. ತಾವು ಸಿಕ್ಕಿ ಹಾಕಿಕೊಳ್ಳುವ ಭಯದಲ್ಲಿ ಮಕ್ಕಳ ಪ್ರಾಣವನ್ನು ತೆಗೆಯಲೂ ಹಿಂಜರಿಯುವುದಿಲ್ಲ.

ಇಂತಹ ಸಂದರ್ಭಗಳಲ್ಲಿ, ಮಗು ತನಗೆದುರಾಗಬಹುದಾದ ಅಪಾಯಗಳ ಸಾಧ್ಯತೆಯ ಕುರಿತಾಗಿ, ಮೊದಲೇ ಅರಿವನ್ನು ಹೊಂದಿದ್ದಲ್ಲಿ ಹಾಗೂ ಅಪರಿಚಿತರಿಂದ ಇಲ್ಲಾ ಪರಿಚಿತರಿಂದ ತಾನು ಹೇಗೆ ಮೋಸ ಹೋಗಬಹುದು ಎಂಬುದನ್ನು ಮಗು ಮೊದಲೇ ತಿಳಿದಿದ್ದಲ್ಲಿ ಮುಂದೆ ಘಟಿಸುವ ಅಚಾತುರ್ಯಗಳಿಂದ ಮಗು ಪಾರಾಗಬಹುದು. ಇಂಥ ವಿಷಯಗಳನ್ನು ಮನೆಯ ಸದಸ್ಯರಾಗಲಿ, ಶಾಲೆಯಲ್ಲಿ ಶಿಕ್ಷಕರಾಗಲಿ ಮಾತನಾಡಲು ಸಾಮಾನ್ಯವಾಗಿ ಹಿಂಜರಿಯುತ್ತಾರೆ; ಇದು ನಮ್ಮ ಸಮಾಜದಲ್ಲಿ ಇಂದು ಇರುವ ಸ್ಥಿತಿ; ಇಂದಿನ ವಾತಾವರಣದಲ್ಲಿ, ಇಂತಹ ವಿಚಾರಗಳ ವಿವರಗಳನ್ನು ಮಕ್ಕಳಿಗೆ ತಿಳಿಹೇಳಲು, ಒಂದು ರೀತಿಯ ಮಡಿವಂತಿಕೆಯನ್ನು ನಾವು ಅನುಸರಿಸುತ್ತಿದ್ದೇವೆ. ಆದರೆ, ಇಂತಹ ವಿಷಯದ ಅರಿವು ಇಲ್ಲದ ಮಕ್ಕಳ ಮೇಲಿನ ಕಿರುಕುಳಗಳು ವರದಿಯಾದಾಗ ವ್ಯಥೆ ಪಟ್ಟು ಸುಮ್ಮನಾಗಿಬಿಡುತ್ತೇವೆ.



ಬೆಳ್ಳಗಿರುವುದೆಲ್ಲ ಹಾಲು ಎಂದು ನಂಬುವಂತಹ ಮುಗ್ಧ ಮನಸು ಮಕ್ಕಳದು. ಅದರ ಲಾಭವನ್ನು ಪಡೆದುಕೊಂಡು ಕೆಲ ಅತೃಪ್ತ ಮನಸಿನ ದುರುಳರು, ಅಲ್ಲಲ್ಲಿ ಕೆಲವೆಡೆ, ಮಕ್ಕಳ ಮೇಲೆ ನಾನಾ ಬಗೆಯ ದೌರ್ಜನ್ಯಗಳನ್ನೆಸಗುತ್ತಾರೆ. ಇದನ್ನು ತಡೆಯಲು, ಮಕ್ಕಳಲ್ಲಿ ಅರಿವು ಮೂಡಿಸುವ ಸೂಕ್ತ ಮಾರ್ಗದರ್ಶನ ನೀಡುವ ಕೆಲಸವು ಇಂದಿನ ದಿನಗಳ ಅಗತ್ಯ ಎನಿಸಿದೆ.

ಗುಡ್ ಟಚ್ ಬ್ಯಾಡ್ ಟಚ್

ಮುಂದುವರಿದ ದೇಶಗಳಲ್ಲಿ ಮಕ್ಕಳಿಗೆ ಪಠ್ಯದ ಜೊತೆಗೆ ಜೀವನ ಪಾಠವನ್ನೂ ಕಲಿಸಿ ಕೊಡಲಾಗುತ್ತದೆ. ಯಾರಾದರೂ ಅಪರಿಚಿತರು ನೀಡುವ ಸಿಹಿ ತಿಂಡಿಗಳನ್ನು ತಿರಸ್ಕರಿಸುವುದು, ಅಕಸ್ಮಾತ್ತಾಗಿ ಸಿಹಿ ತಿಂಡಿಯನ್ನು ಮಗು ಸ್ವೀಕರಿಸಿದರೆ ಆ ಮಗುವನ್ನು ಅಪಹರಿಸಿಕೊಂಡು ಹೋಗುವರೆಂಬ ಪಾಠವನ್ನು ಅಣುಕು ಚಟುವಟಿಕೆಯ ಮೂಲಕ ತೋರಿಸಿಕೊಡಲಾಗುತ್ತದೆ. ಗುಡ್ ಟಚ್, ಬ್ಯಾಡ್ ಟಚ್‌ಗಳ ಅರಿವನ್ನು ಪ್ರಾಯೋಗಿಕವಾಗಿ ಹೇಳಿಕೊಡಲಾಗುತ್ತದೆ.

ಕೇಳುವುದನ್ನೆಲ್ಲ ಮಗು ಅರ್ಥೈಸಿಕೊಳ್ಳುವ ಹಂತಕ್ಕೆ ಬಂದಾಗ ಪಾಲಕರು ಮಗುವಿಗೆ ಹಲವಾರು ವಿಷಯಗಳನ್ನು ತಿಳಿಸಿಕೊಡಬೇಕಾಗುತ್ತದೆ. ಮನೆಯಲ್ಲಿ ಒಂಟಿಯಾಗಿ ಇರುವ ಪರಿಸ್ಥಿತಿ ಬಂದಾಗ ಒದಗಬಹುದಾದ ಅಪಾಯಗಳ ಬಗ್ಗೆ ತಿಳಿಸಿಕೊಡಬೇಕು. ಯಾರಾದರೂ ಬಾಗಿಲು ತಟ್ಟಿದರೆ, ಮನೆಯಲ್ಲಿ ಬೆಂಕಿ ಕಾಣಿಸಿಕೊಂಡರೆ ವಹಿಸಬೇಕಾದ ಎಚ್ಚರಿಕೆಗಳನ್ನು ಮನವರಿಕೆ ಮಾಡಿಕೊಡಬೇಕು; ಜತೆಗೆ, ಅಪರಿಚಿತರು ಮನೆಗೆ ಬಂದಾಗ ಹೇಗೆ ವರ್ತಿಸಬೇಕು ಎಂಬುದರ ಕುರಿತು ಸಹ ಮಕ್ಕಳಿಗೆ ಮಾರ್ಗದರ್ಶನವನ್ನು ಈಡಬಹುದು.

ಶಾಲೆಗಳಲ್ಲಿ ಕಲಿಸುವ ಪಠ್ಯವು ಕೇವಲ ಜ್ಞಾನವನ್ನು ನೀಡುತ್ತದೆ. ಜೀವನ ಪಾಠವು ಬದುಕುವ ಬಗೆಯನ್ನು ಕಲಿಸಿ ಕೊಡುತ್ತದೆ. ಅಪಾಯ ಎದುರಾದಾಗ ಕೇವಲ ಪಠ್ಯದಲ್ಲಿ ಕಲಿತ ಜ್ಞಾನವೊಂದೇ ಉಪಯೋಗಕ್ಕೆ ಬರದು. ಉಪಾಯದ ಅರಿವಿದ್ದಲ್ಲಿ ಅಥವಾ ಕುಕೃತ್ಯ ಎಸಗುವವರ ಉದ್ದೇಶವೇನೆಂದು ಮಗು ತಿಳಿದಿದ್ದಲ್ಲಿ ಘಟಿಸಬಹುದಾದ ಅಪಾಯ ತಪ್ಪಬಹುದು. ಮನೆಯಲ್ಲಿ ಹೆತ್ತವರು ಹಾಗೂ ಮಗು ಓದುವ ಶಾಲೆಯಲ್ಲಿ ಶಿಕ್ಷಕಿಯರು ಈ ಕುರಿತಾಗಿ ತಿಳುವಳಿಕೆಯನ್ನು ನೀಡುವುದು ಇಂದಿನ ದಿನಗಳಲ್ಲಿ ಅತ್ಯವಶ್ಯವಾಗಿದೆ.

ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ



ಇತ್ತೀಚೆಗೆ ಪ್ರಕಟಗೊಂಡ ಈ ಕಾದಂಬರಿಯು, ತನ್ನ ವಿನ್ಯಾಸ ಮತ್ತು ತಂತ್ರದಿಂದ ಓದುಗರ ಗಮನ ಸೆಳೆದಿದೆ. ಮೇಧಾವಿ ವಿದ್ವಾಂಸರೊಬ್ಬರ ಮರಣದ ನಂತರ, ಅವರ ಆತ್ಮವು ಒಂದು ಪಾತ್ರವಾಗಿ ಕಾಣಿಸಿಕೊಂಡು, ಕಾದಂಬರಿಯ ಬೆಳವಣಿಗೆಗೆ ಅನನ್ಯ ಕೊಡುಗೆಯನ್ನು ನೀಡಿದೆ! ಮೇಧಾವಿ ವಿದ್ವಾಂಸನೊಬ್ಬನ ವಿಶಿಷ್ಟ ಜೀವನದರ್ಶನ ಮತ್ತು ಸಾಧನೆಯ ಅನಾವರಣದ ಜತೆ ಜತೆಗೆ, ಅಂದಿನ ಐತಿಹಾಸಿ ಸಾಂಸ್ಕೃತಿಕ ಪರಿಪ್ರೇಕ್ಷ್ಯ ಈ ಕಾದಂಬರಿಯಲ್ಲಿ ರೋಚಕವಾಗಿ ಮೂಡಿಬಂದಿದೆ. ಡಾ. ಜನಾರ್ದನ ಭಟ್ ರಚಿಸಿರುವ ಈ ಕಾದಂಬರಿಯನ್ನು ಬೆಂಗಳೂರಿನ 'ಅಂಕಿತ ಪುಸ್ತಕ' ಪ್ರಟಿಸಿದೆ.

ಬಣ್ಣ ಬದಲಿಸುವ ಚಿಟ್ಟೆ!

ಇದು 'ಕಾಮನ್ ಮಾರ್ಮನ್'. ಈ ಚಿಟ್ಟೆಯು ನಮ್ಮ ದೇಶ ಮತ್ತು ದಕ್ಷಿಣ ಏಷ್ಯಾದಲ್ಲಿ ವಾಸಿಸುತ್ತದೆ. ಈ ಪ್ರಭೇದದ ಚಿಟ್ಟೆಯ ಹೆಣ್ಣು, ಬೇರೆ ಬೇರೆ ಚಿಟ್ಟೆಗಳನ್ನು, ಕೀಟಗಳ ಸ್ವರೂಪವನ್ನು ಅನುಕರಣೆ ಮಾಡಬಲ್ಲದು! ಅನುಕರಿಸುವ ಮೂಲ ಉದ್ದೇಶ, ರಕ್ಷಣಾ ತಂತ್ರ. ಇದು ಅನುಕರಣೆ ಮಾಡುವ ಕೀಟಗಳನ್ನು ಹಕ್ಕಿಗಳು ತಿನ್ನುವುದಿಲ್ಲ! **(ಚಿತ್ರ : ಮಹೇಶ್ ಹೊಸಮನಿ)**

ಸಮುದ್ರದ ನೀರಲ್ಲಿ ಆಮ್ಲ?

● ಯಶಸ್. ಆರ್

ನಮ್ಮ ಪ್ರಕೃತಿಯು ಹವಾಮಾನ ವೈಪರೀತ್ಯದ ಪರಿಣಾಮಗಳಾದ ಮಂಜುಗಡ್ಡೆಗಳ ಕರಗುವಿಕೆ, ಸಮುದ್ರ ಮಟ್ಟದ ಏರಿಕೆ ಹಾಗೂ ಮುಂತಾದವುಗಳೊಂದಿಗೆ ಒಂದು ಕಡೆ ಹೋರಾಡುತ್ತಿದ್ದರೆ, ಮತ್ತೊಂದು ಕಡೆ ಸಾಗರದ ಆಳದಲ್ಲಿ ಅಷ್ಟೇ ಗಂಭೀರವಾದ ಅಪಾಯವೊಂದು ಸೂಕ್ಷ್ಮರೂಪದಲ್ಲಿ ಹರಡುತ್ತಿದೆ. ಅದೇ ಸಮುದ್ರದ ನೀರಿನ ಆಮ್ಲೀಕರಣ! ಈ ಪ್ರಕ್ರಿಯೆಯು, ಸಮುದ್ರದ ನೀರಿನೊಳಗೆ ಸೂಕ್ಷ್ಮರೂಪದಲ್ಲಿ ಇಂಗಾಲದ ಮಿಶ್ರಣದಿಂದ ಆಗುವ ರಾಸಾಯನಿಕ ಬದಲಾವಣೆ. ಈ ಪ್ರಕ್ರಿಯೆಯು ಸಮುದ್ರದಲ್ಲಿರುವ ಜಲಚರ ಹಾಗೂ ಜೀವವೈವಿಧ್ಯಕ್ಕೆ ನಿಧಾನ ವಿಷ ನೀಡಿದ ಹಾಗೆ! ಸಾಗರ ಆಮ್ಲೀಕರಣವೂ ಜಾಗತಿಕವಾಗಿದ್ದು, ಅಸಂಖ್ಯಾತ ಜೀವರಾಶಿಯನ್ನು ಬಾಧಿಸುತ್ತದೆ.

> **ಕಾಡಿನ ನಾಶದಿಂದಾಗಿ ಸಮುದ್ರದ ನೀರಿನಲ್ಲಿ ಆಮ್ಲದ ಪ್ರಮಾಣ ಹೆಚ್ಚಾಗುತ್ತಿದೆ!**

ಸಾಗರ ಆಮ್ಲೀಕರಣಕ್ಕೆ ಮೂಲ ಕಾರಣವು, ನಮ್ಮ ವಾತಾವರಣದಲ್ಲಿ ಉತ್ಪತ್ತಿಯಾಗುತ್ತಿರುವ ಹೆಚ್ಚುವರಿ ಇಂಗಾಲ. ಕಲ್ಲಿದ್ದಲು, ತೈಲ, ಸೌದೆ ಮೊದಲಾದ ಇಂಧನಗಳನ್ನು ಬಳಕೆ ಮಾಡಿದಾಗ ಕಾರ್ಬನ್–ಡೈ–ಆಕ್ಸೈಡ್ ಉತ್ಪತ್ತಿಯಾಗುತ್ತದೆ. ಅದರಲ್ಲಿ ಶೇಕಡ 30% ರಷ್ಟು ಸಮುದ್ರವು ತನ್ನಡೆಗೆ ಹೀರಿಕೊಳ್ಳುತ್ತಿದ್ದು, ಸಾಗರದ ಪಿಎಚ್ ಪ್ರಮಾಣ ಕುಸಿಯುತ್ತದೆ. ಅದರಿಂದ ಜಲಚರ ಜೀವಿಗಳಿಗೆ ಬದುಕುವ ಮೂಲ ಅಂಶವಾದ ಕ್ಯಾಲ್ಸಿಯಂ ಕಾರ್ಬೋನೇಟ್ ಉಪಸ್ಥಿತಿಯು ಕ್ಷೀಣಿಸಿದಾಗ ಅವುಗಳ ಮೂಳೆ ಸಂಯೋಜನೆಯಲ್ಲಿ ಬದಲಾವಣೆಯಾಗಿ ತಮ್ಮ ಬದುಕಿಗಾಗಿ ಹೋರಾಡಿದರೆ, ಮತ್ತೊಂದೆಡೆ ಸಮುದ್ರ ಆಹಾರ ಚಕ್ರದ ಮೇಲೂ ಇದರ ದುಷ್ಪರಿಣಾಮ ಬೀರುವುದುಂಟು.

ಸಾಗರ ಆಮ್ಲೀಕರಣದ ಪರಿಣಾಮಗಳು ಈಗಾಗಲೇ ವಿಶ್ವದ ಅನೇಕ ಕರಾವಳಿ ಪ್ರಾಂತ್ಯಗಳಲ್ಲಿ ಗೋಚರಿಸುತ್ತಿವೆ. ಅಮೆರಿಕದ ಪೆಸಿಫಿಕ್ ಮಹಾಸಾಗರದ ವಾಯುವ್ಯ ಭಾಗದಲ್ಲಿ ಕಲುಷಿತ ನೀರಿನಿಂದಾಗಿ ಮುತ್ತನ್ನು ಉತ್ಪತ್ತಿ ಮಾಡುವ ಸಿಂಪಿಗಳು, ಕಪ್ಪೆಚಿಪ್ಪುಗಳು ತಮ್ಮ ಸುತ್ತ ಗಟ್ಟಿಯಾದ ಚಿಪ್ಪು ನಿರ್ಮಾಣ ಮಾಡಿಕೊಳ್ಳಲು ಸಾಧ್ಯವಾಗದೇ ಹೆಚ್ಚಿನ ಸಂಖ್ಯೆಯಲ್ಲಿ ಸಾಯುತ್ತಿವೆ. ಸಮುದ್ರದ ಪರಿಸರ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುವ ಹವಳ (ಕೋರಲ್) ಕೂಡ ಇಂತಹ ಸಂಕಷ್ಟವನ್ನು ಎದುರಿಸುತ್ತಿದೆ. ಹೆಚ್ಚುತ್ತಿರುವ ತಾಪಮಾನ ಮತ್ತು ಮಾಲಿನ್ಯದಿಂದಾಗಿ ಈಗಾಗಲೇ ಅಪಾಯದಂಚಿನಲ್ಲಿರುವ ಹವಳದ ದಿಬ್ಬಗಳಲ್ಲಿ ಆಮ್ಲೀಕರಣದಿಂದ ಕ್ಯಾಲ್ಸಿಯಂ ಕಾರ್ಬೋನೇಟ್ ಸಿಗದೇ ಅವುಗಳು ಬೆಳೆಯಲು ಕಷ್ಟಕರವಾಗಿದ್ದು, ಅವುಗಳ ಮೇಲೆ ಆಧಾರಿತವಾಗಿರುವ ಸಮುದ್ರ ಜೀವಿಗಳಿಗೆ ನೆಲೆ ಸಿಗದಂತಾಗುವುದರ ಜೊತೆಗೆ ಪರಿಸರ ವ್ಯವಸ್ಥೆ ಹಾಳು ಮಾಡುತ್ತಿವೆ. ಚಿಕ್ಕ ಪೆಲಾಜಿಕ್ ಬಸವನಹುಳಗಳು ಕೂಡ ಇದಕ್ಕೆ ಬಲಿಯಾಗಿವೆ. ಇವು ಹೆಚ್ಚು ಆಮ್ಲಯುಕ್ತ ನೀರನ್ನು ಹೀರಿಕೊಳ್ಳುತ್ತಿದೆ. ಆಮ್ಲಯುಕ್ತ ನೀರಿನಲ್ಲಿರುವ ಜಲಚರ ರಾಶಿಗಳಿಗೆ ಸಂಚಾರದಲ್ಲಿ ಅಡಚಣೆ ಮತ್ತು ಸಂತಾನೋತ್ಪತ್ತಿಯಲ್ಲಿಯೂ ಕೆಟ್ಟ ಪರಿಣಾಮ ಆಗುತ್ತಿದೆ.

ಭಾರತದ ಕರಾವಳಿಯಲ್ಲಿ: 7,500 ಕಿ.ಮೀಗಿಂತಲೂ ಹೆಚ್ಚು ಕರಾವಳಿ ತೀರವನ್ನು ಹೊಂದಿರುವ ಭಾರತವು ಈ ಬಿಕ್ಕಟ್ಟಿನ ಮುಂಚೂಣಿಯಲ್ಲಿದೆ. ಹವಳಗಳಿಂದ ಸಮೃದ್ಧವಾಗಿರುವ ಲಕ್ಷದ್ವೀಪದಿಂದ ಸುಂದರ್‌ಬನ್‌ನ ಜೀವವೈವಿಧ್ಯತೆ ತಾಣಗಳವರೆಗೆ, ಆಮ್ಲೀಕರಣದ ಆರಂಭಿಕ ಲಕ್ಷಣಗಳು ಈಗಾಗಲೇ ಕಾಣಿಸುತ್ತಿವೆ. ಸಂಶೋಧಕರು ಲಕ್ಷದ್ವೀಪದಲ್ಲಿ ತಾಪಮಾನ ಏರಿಕೆ ಜೊತೆಗೆ, ಪಿಎಚ್ ಪ್ರಮಾಣ ಕುಸಿತದ ಘಟನೆಗಳನ್ನು ದಾಖಲಿಸಿದ್ದಾರೆ. ರೀಫ್ ಕ್ಯಾಲ್ಸಿಫಿಕೇಶನ್ ಗಣನೀಯ ಇಳಿಕೆ ಕಂಡಿದ್ದು, ಅವು ತಮ್ಮ ರಚನೆಯನ್ನು ಕಾಪಾಡಲು ಹೆಣಗಾಡುತ್ತಿವೆ.

ಯಾವ ಎಚ್ಚರಿಕೆ ವಹಿಸಬೇಕು?: ಸಾಗರ ಆಮ್ಲೀಕರಣವನ್ನು ನಿಯಂತ್ರಿಸಲು ಜಗತ್ತಿನಾದ್ಯಂತ ಪ್ರಯತ್ನಗಳು ನಡೆಯುತ್ತಿವೆ. ಸಾಗರ ಆಮ್ಲೀಕರಣವನ್ನು ನಿಭಾಯಿಸುವ ಮೊದಲು ಇಂಗಾಲದ ಡೈಆಕ್ಸೈಡ್ ಉತ್ಪತ್ತಿಯನ್ನು ಕಡಿಮೆ ಮಾಡುವ ಅವಶ್ಯಕತೆಯಿದೆ. ನವೀಕರಿಸಬಹುದಾದ ಇಂಧನ ಬಳಕೆ ಹೆಚ್ಚಾಗಬೇಕು.

ನಾವೆಲ್ಲರೂ ಕೈ ಜೋಡಿಸಿ ನಮ್ಮ ಪ್ರಕೃತಿಯನ್ನು ನಮ್ಮ ಒಳಿತಿಗಾಗಿಯೇ ಕಾಪಾಡಿಕೊಳ್ಳಲು ಮುಂದಾಗಬೇಕು ಹೊರತು ನಾವು ಪ್ರಕೃತಿ ಹಾಗೂ ಅದರ ಅದ್ಭುತಗಳನ್ನು ಯಾವುದೋ ಪುಸ್ತಕದಲ್ಲಿ ನೋಡಿ ಆನಂದಿಸುವುದರಿಂದ ಮಾತ್ರ ಉಪಯೋಗವಿಲ್ಲ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಪ್ರಿಯತಮ (3)
6. ಸ್ನಾನದಲ್ಲಿ ಪುಳಕ! (3)
7. ಬಿಡುವಿನ ವೇಳೆಯಲ್ಲಿ ಬಂದಿರುವನು ಅಗಸ (3)
8. ಲೀಲಾ ನಡೆಸಿದ ಹರಾಜು (3)
10. ನಿದ್ದೆ ಮಾಡಲು ಬಿಡದ ಸ್ವಪ್ನ (3)
13. ಕೆರೆಯ ತಟ (2)
14. ಜಾತ್ರೆಯ ದಿನ ದೇವರನ್ನು ಕುಳ್ಳಿರಿಸಿದ ತೇರು (2)
15. ಜೀವ ಅಥವಾ ಪ್ರಾಣ (3)
18. ಜನರಿಗೆ ಕಾಟ ಕೊಡುವ ದೈತ್ಯ (3)
21. ಕರಿ ಬಿದ್ದ ಪ್ರಪಾತ (3)
22. ಅಸ್ತವ್ಯಸ್ತವಾಗಿ ಬಂದಿರುವ ಜಗಳ (3)
23. ಬರೆಯಲ್ಪಟ್ಟ (3)

ಮೇಲಿಂದ ಕೆಳಕ್ಕೆ

1. ಹಿಮ ಅಥವಾ ಮಂಜು (3)
2. ಮನೆಯ ಒಡೆಯ (4)
3. ಅಸಲಿಯಲ್ಲದ್ದು ಮತ್ತೇನು (3)
4. ಮತ್ತೊಬ್ಬ ಶಿವನಿಂದ ತೊಡಗಿದ ವಿಸ್ತಾರ (3)
5. ಕರಮುಗಿಯೋಣ ಬನ್ನಿ ಶಿವನಿಗೆ (3)
9. ಅರಗಿನ ಮನೆಯಿದು (4)
10. ಕಾಣಲು ಬಂದಿರುವ ಸಮುದ್ರ (3)
11. ದುರ್ಯೋಧನ (4)
12. ಎಲ್ಲದಕ್ಕೂ ಒಂದು ನೆಪ (3)
16. ಯುದ್ಧದಲ್ಲಿ ವೀರನಾಗಿ ಹೋರಾಡಿದವನು (4)
17. ಹತ್ತಿರ ಎನ್ನುವ ಮತ್ತೊಂದು ಪದ (3)
18. ಹಣವಿಲ್ಲದ ಬಡತನ (3)
19. ಗುಳೆ ಹೋಗುವುದು (3)
20. ನಿಶ್ಚಿತ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ: [illegible]

ಮೇಲಿಂದ ಕೆಳಕ್ಕೆ: [illegible]

ಶ್ರಾವಣದಲ್ಲಿ ಪಡಿ ಬೇಡುವ ಪದ್ಧತಿ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಶ್ರಾವಣ ಶನಿವಾರದಂದು, ಮಕ್ಕಳು ಮತ್ತು ಕೆಲವೊಮ್ಮೆ ದೊಡ್ಡವರೂ ಕೂಡಾ, ಶುಭ್ರವಸ್ತ್ರದಲ್ಲಿ ಹಣೆಗೆ ಮೂರು ಎಳೆ ಇಲ್ಲವೇ ಒಂದು ಎಳೆ ನಾಮವನ್ನು ಹಚ್ಚಿಕೊಂಡು ಕೈಯಲ್ಲಿ ಪಂಚಪಾತ್ರೆ ಇಲ್ಲವೇ ಸಣ್ಣ ಚೊಂಬು ಅದಕ್ಕೂ ನಾಮ ಬಳಿದು, ಕೆಲವೊಂದು ಬಾರಿ ಅದಕ್ಕೆ ಹೂವಿನ ಮಾಲೆಯನ್ನು ಸುತ್ತಿಕೊಂಡು ಅಕ್ಕ ಪಕ್ಕದ ಮನೆಯ ಹೊಸಿಲಲ್ಲಿ ನಿಂತು ಕೊಂಡು ಇಲ್ಲವೇ ದೇವರ ಮನೆಯ ಮುಂದೆ ನಿಂತು ಶ್ರೀನಿವಾಸಾಯ ಮಂಗಳಂ, ರಂಗ ನಾಥಾಯ ಮಂಗಳಂ, ಶ್ರೀ ವೆಂಕಟೇಶಾಯ ಮಂಗಳಂ ಇಲ್ಲವೇ ಶ್ರೀ ಲಕ್ಷ್ಮೀ ನರಸಿಂಹಾಯ ಮಂಗಳಂ ಎಂದು ಜೋರಾಗಿ ಕೂಗಿದಾಗ, ಆ ಮನೆಯ ಒಡತಿ ಒಳಗಿನಿಂದ ಹಿಡಿ ಅಕ್ಕಿಯನ್ನು ಮೂರು ಬಾರಿ ಹಾಕಿ, ಅದರಿಂದ ಕೆಲ ಅಕ್ಕಿಕಾಳನ್ನು ತಾನು ತಂದ ಪಾತ್ರೆಗೆ ಹಾಕಿಕೊಳ್ಳುತ್ತಾರೆ. ಅಕ್ಕಿಯ ಜೊತೆ ಬೆಲ್ಲ ಮತ್ತು ಕೈಲಾದಷ್ಟು ದಕ್ಷಿಣೆ ಹಾಕಿ ಕಳುಹಿಸುತ್ತಾರೆ. ಇಡೀ ಶ್ರಾವಣ ಮಾಸದ ಶನಿವಾರದಂದು ವೆಂಕಟರಮಣ ಸ್ವಾಮಿ, ರಂಗನಾಥ ಸ್ವಾಮಿ ಇಲ್ಲವೇ ನರಸಿಂಹ ಸ್ವಾಮಿಯ ಒಕ್ಕಲಿನವರು ಕನಿಷ್ಠ ಪಕ್ಷ ಐದು ಮನೆಯಲ್ಲಾದರೂ ಈ ರೀತಿಯಲ್ಲಿ ಬೇಡಬೇಕು.

ಈ ರೀತಿಯಾಗಿ ಪಡಿ ಬೇಡಿ ತಂದ ಅಕ್ಕಿ ಬೆಲ್ಲ ಮತ್ತು ಹಣವನ್ನು ಜೋಪಾನವಾಗಿ ಎತ್ತಿಟ್ಟು ಕಡೆಯ ಶ್ರಾವಣ ಶನಿವಾರದಂದು ಆ ಅಕ್ಕಿ ಮತ್ತು ಬೆಲ್ಲದಿಂದ ಪಾಯಸ ಇಲ್ಲವೇ ಸಿಹಿ ಹುಗ್ಗಿ, ಬೆಲ್ಲದನ್ನ ಮಾಡಿ ತಮ್ಮ ಮನೆ ದೇವರಿಗೆ ನೈವೇದ್ಯ ಮಾಡಿ ಎಲ್ಲರೂ ಅದನ್ನು ಪ್ರಸಾದ ರೂಪದಲ್ಲಿ ಮನೆಯವರೆಲ್ಲರೂ ಸೇವಿಸುತ್ತಾರೆ ಮತ್ತು ಇನ್ನು ಕಾಣಿಕೆ ರೂಪದಲ್ಲಿ ಸಂಗ್ರಹಿಸಿದ್ದ ಹಣವನ್ನು ಮುಡಿ ಕಟ್ಟಿ ಎತ್ತಿಟ್ಟು ತಮ್ಮ ಮನೆದೇವರ ದರ್ಶನಕ್ಕೆ ಹೋದಾಗ ಆ ದೇವಾಲಯದ ಹುಂಡಿಯಲ್ಲಿ ಭಕ್ತಿಯಿಂದ ಹಾಕಿ ಪಾವನರಾಗುತ್ತಾರೆ.

ಪ್ರಥಮವಾಗಿ ಪಡಿ ಬೇಡುವುದರಿಂದ ಮಕ್ಕಳಲ್ಲಿನ ಸಂಕೋಚ ಸ್ವಭಾವ ನೀಗುತ್ತದೆ ಮತ್ತು ಕಷ್ಟದ ಪರಿಸ್ಥಿತಿಯಲ್ಲಿ ಮಧುಕರಿವೃತ್ತಿ ಮಾಡಿ ಜೀವನ ನಡೆಸಬಹುದು ಎಂಬುದನ್ನು ಕಲಿಸುತ್ತದೆ. ಮಕ್ಕಳಿಗೆ ತಾವು ತಿನ್ನುವ ಅಕ್ಕಿಯ ಸಂಪಾದಿಸುವುದರ ಮಹತ್ವ ಮತ್ತು ಮತ್ತೊಬ್ಬರ ಮನೆಯಲ್ಲಿ ಭಿಕ್ಷೆ ಬೇಡುವ ಮೂಲಕ ತಗ್ಗಿ ಬಗ್ಗಿ ನಡೆಯವುದನ್ನೂ ಮತ್ತು ಕೀಳರಿಮೆಯನ್ನು ಹೋಗಲಾಡಿಸುತ್ತದೆ.

ಇನ್ನು ಭಿಕ್ಷೆ ನೀಡುವವರಿಗೂ ತಮ್ಮಲ್ಲಿರುವ ದವಸ ಧಾನ್ಯಗಳನ್ನು ನೆರೆಹೊರೆಯವರೊಂದಿಗೆ ಹಂಚಿಕೊಳ್ಳುವ ಮನೋಭಾವವನ್ನು ಬೆಳೆಸುತ್ತದೆ ಮತ್ತು ಮೂರು ಬಾರಿ ಅಕ್ಕಿಯನ್ನು ಹಾಗಿ ಕಡೆಯಲ್ಲಿ ನಾಲ್ಕು ಕಾಳು ಅಕ್ಕಿಯನ್ನು ಆ ಪಡಿ ಬೇಡಿದ ಪಾತ್ರೆಯಿಂದ ತನ್ನ ಪಾತ್ರೆಗೆ ಹಾಕಿಕೊಳ್ಳುವುದರ ಮೂಲಕ ತಮ್ಮ ಮನೆಯಲ್ಲಿ ಸದಾಕಾಲವೂ ಧನಧಾನ್ಯಗಳು ಅಕ್ಷಯವಾಗಲೀ ಎಂಬುದರ ಸಂಕೇತವಾಗಿದೆ. ಇನ್ನು ತಮ್ಮ ಮನೆದೇವರಿಗೆ ಪಡಿ ಬೇಡುವಾಗ ಸಂಗ್ರಹಿಸಿದ ಹಣವನ್ನು ಸಮರ್ಪಿಸಲು ವರ್ಷಕ್ಕೊಮ್ಮೆಯಾ ದರೂ ಮನೆ ದೇವರಿಗೆ ಹೋಗಿ ಬರುವಂತಾಗಲೀ ಎನ್ನುವ ಭಾವನೆಯೂ ಇದೆ.

ಸಾಮಾನ್ಯವಾಗಿ ವೈಷ್ಣವರಿಗೆ (ವಿಷ್ಣುವಿನ ಆರಾಧಕರು) ಶ್ರಾವಣಮಾಸ ಮುಖ್ಯವಾದರೇ, ಶೈವರಿಗೆ (ಶಿವಾರಾಧಕರಿಗೆ) ಕಾರ್ತೀಕ ಮಾಸ ಪ್ರಾಮುಖ್ಯವಾಗುತ್ತದೆ.

ಹಿಂದೆ ಸುಮಾರು 8 ವರ್ಷಕ್ಕೆಲ್ಲಾ ಗಂಡು ಮಕ್ಕಳಿಗೆ ಉಪನಯನವನ್ನು ಮಾಡಿ ನಂತರ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸು ತ್ತಿದ್ದರು. ಶಿಕ್ಷಣಾರ್ಥಿಗಳು ಗುರುಕುಲದಲ್ಲಿ ಅಧ್ಯಯನ ಮಾಡುತ್ತಾ ಅಕ್ಕ ಪಕ್ಕದ ಊರಿನಿಂದ ಕೇವಲ ಭಿಕ್ಷೆಯಿಂದಲೇ ಜೀವನ ಸಾಗಿಸಬೇಕಾಗಿತ್ತು. ಅಂತಹ ವಿದ್ಯಾರ್ಥಿಗಳಿಗೆ ಮತ್ತು ಗುರುಗಳಿಗೆ ಗೃಹಸ್ಥರು ಧಾರಾಳವಾಗಿ ಭಿಕ್ಷೆ ನೀಡಿ ಪೋಷಿಸುತ್ತಿದ್ದರು. ಹಾಗಾಗಿ ಗುರುಕುಲಕ್ಕೆ ಕಳುಹಿಸುವ ಮುಂಚೆಯೇ ಚಿಕ್ಕ ವಯಸ್ಸಿನಿಂದಲೇ ಮಧುಕರ ವೃತ್ತಿಯ ಸಂಕೋಚನ್ನು ನೀಗಿಸಲು ಮನೆಯಲ್ಲಿಯೇ ಈ ರೀತಿ ಯಾಗಿ ತರಬೇತಿ ನೀಡುವುದರ ಸಲುವಾಗಿಯೇ ಇಂತಹ ಪದ್ಧತಿ ರೂಢಿಯಲ್ಲಿ ಬಂದಿರಬೇಕು ಎಂದು ಹಿರಿಯರೊಬ್ಬರ ಅಭಿಪ್ರಾಯ.

ನಮ್ಮ ಹಿರಿಯರು ರೂಢಿಗೆ ತಂದ ಮತ್ತು ಆಚರಿಸುತ್ತಿದ್ದ ಎಲ್ಲಾ ಹಬ್ಬ ಹರಿದಿನಗಳ ಹಿಂದೆಯೂ ಅನೇಕ ಗೂಢಾರ್ಥಗಳಿರುತ್ತವೆ. ನಾವುಗಳು ಅದನ್ನು ಸರಿಯಾಗಿ ಅರ್ಥೈಸಿ ಕೊಂಡು ಹಬ್ಬ ಹರಿದಿನಗಳನ್ನು ಆಚರಿಸಿದಾಗ ಮಾತ್ರವೇ ಅದಕ್ಕೆ ಸಾರ್ಥಕತೆ ದೊರಕಿದಂತಾಗುತ್ತದೆ; ಇಲ್ಲವೇ ಅವೆಲ್ಲವೂ ಕಾಟಾಚಾರಗಳಾಗಿ ಹೋಗಿ ಮುಂದೆ ಕೆಲವು ವರ್ಷಗಳ ನಂತರ ಈ ಎಲ್ಲಾ ಆಚರಣೆಗಳೂ ನಿಂತು ಹೋದರೂ ಆಚ್ಚರಿಯೇನಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈ ಆಚರಣೆಗಳ ಅರ್ಥ ನಮಗೆ ಗೊತ್ತಿದ್ದರೆ ಆಚರಿಸುವವರ ಬಗ್ಗೆ ಗೌರವವಿರುತ್ತದೆ ಅಲ್ಲವೇ?

ನಾವೆಲ್ಲರೂ ನಾಟಕದ ಪಾತ್ರಧಾರಿಗಳು!

ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ
ಕೋಟಿ ನಟರಾಂತಿಹರು ಚಿತ್ರಪಾತ್ರಗಳ
ಆಟಕ್ಕೆ ಕಥೆಯಿಲ್ಲ ಮೊದಲಿಲ್ಲ ಕಡೆಯಿಲ್ಲ
ನೋಟಕರು ಮಾಟಕರೆ – ಮಂಕುತಿಮ್ಮ॥

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಈ ಜಗತ್ತು ಎನ್ನುವುದೊಂದು ಬ್ರಹ್ಮಾಂಡ ನಾಟಕದ ರಂಗ ಸ್ಥಳ. ಈ ನಾಟಕದಲ್ಲಿ ಕೊಟ್ಯಾನು ಕೋಟಿ ನಟರುಗಳು. ಇಂಥಹ ನಟರುಗಳು ಚಿಕ್ಕ ಚಿಕ್ಕ ಪಾತ್ರಗಳ ನಟನೆಗಳನ್ನು ಮಾಡುತ್ತಲಿದ್ದಾರೆ. ಆ ಭಗವಂತನಾಡಿಸುವ ಈ ನಾಟಕಕ್ಕೆ ಕಥೆಯೂ ಇಲ್ಲ, ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಇಲ್ಲಿ ಈ ನಾಟಕದ ಪಾತ್ರಧಾರಿಗಳೇ ಪ್ರೇಕ್ಷಕರು, ಹಾಗೆಯೇ ಇಲ್ಲಿಯ ಪ್ರೇಕ್ಷಕರೇ ನಾಟಕಧಾರಿಗಳು. ಒಟ್ಟಿನಲ್ಲಿ ಆ ಭಗವಂತ ಆಡಿಸುವ ನಾಟಕದಲ್ಲಿ ಈ ಜಗತ್ತಿನ ಸಮಸ್ತ ಜೀವರಾಶಿಗಳೂ, ವಸ್ತುಗಳೆಲ್ಲವೂ ನಾಟಕದ ಪಾತ್ರಧಾರಿಗಳು ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಈ ಜಗವೊಂದು ಬ್ರಹ್ಮಾಂಡ ನಾಟಕದ ರಂಗ ಸ್ಥಳವೇ ಹೌದು. ಈ ಜಗದಲ್ಲಿ ಹುಟ್ಟಿರುವ ಎಲ್ಲಾ ಜೀವರಾಶಿಗಳೂ ಸಹ ಈ ನಾಟಕದಲ್ಲಿಯ ನಟರುಗಳು. ಆ ಭಗವಂತನ ಸೃಷ್ಟಿಯಲ್ಲಿ ತಮಗೆ ನೀಡಿದಂತಹ ಸಣ್ಣ ಪುಟ್ಟ ಪಾತ್ರಗಳನ್ನು ಎಲ್ಲರೂ ಇಲ್ಲಿ ನಿರ್ವಹಿಸಲೇ ಬೇಕು. ಈ ನಾಟಕದ ಮೂಲಕಥೆ ಏನೆಂದು ಹರಸಿ ಹೋದರೆ ಈ ನಾಟಕಕ್ಕೆ ಅದರ ಮೂಲ ಕಥೆಯೇ ಇಲ್ಲ. ಈ ನಾಟಕಕ್ಕೆ ಮೊದಲೂ ಇಲ್ಲ, ಕೊನೆಯೂ ಇಲ್ಲ, ಅದೆಲ್ಲಿ ಈ ನಾಟಕ ಶುರುವಾಗುತ್ತದ, ಅದೆಲ್ಲಿ ಅಂತ್ಯವಾಗುತ್ತದೆ ಎಂಬುದರ ಬಗ್ಗೆಯೂ ನಮಗೆ ಅರಿವಿಲ್ಲ. ಆ ಕಪಟನಾಟಜ ಸೂತ್ರಧಾರಿ ಆಡಿಸಿದಂತೆ ನಾವು ಪಾತ್ರಧಾರಿಗಳಾಗಿ ಈ ಜೀವನ ಎನ್ನುವ ಸಮಯದಲ್ಲಿ, ಈ ಜಗತ್ತು ಎನ್ನುವ ರಂಗಸ್ಥಳದಲ್ಲಿ ನಾವು ನಮಗೆ ಅರಿವಿಲ್ಲದಂತೆ, ಯಾರೋ ಕಾಣದ ಶಕ್ತಿಯ ಆಟದಂತೆ, ಕಾಣದ ಶಕ್ತಿಯ ನಿರ್ದೇಶನದಂತೆ ನಾವು ನಾಟಕವನ್ನು ಆಡಲೇಬೇಕು. ಇಲ್ಲಿ ನಾಟಕ ಮಾಡುವ ಪಾತ್ರಧಾರಿಗಳೇ ಪ್ರೇಕ್ಷಕರು, ನೋಡುತ್ತಿರುವ ಪ್ರೇಕ್ಷಕರೇ ನಾಟಕದ ಪಾತ್ರಧಾರಿಗಳು. ಅಂದರೆ ತಮಗೆ ತಾವು ಅರಿವಿಲ್ಲದೆ ಈ ನಾಟಕದಲ್ಲಿ ಸಮಸ್ತರೂ ಭಾಗವಹಿಸಿ ನಾಟಕ ಮಾಡಲೇ ಬೇಕು. ಇದು ಆ ಭಗವಂತನ ಆಣತಿಯೂ ಹೌದು. ಮೊದಲಿಗೆ ಬಾಲ್ಯಾವಸ್ಥೆಯಲ್ಲಿ ಮುಗ್ದತನ ತೋರಿದ ನಾವುಗಳು ದಿಗಳೆದಂತೆ ಪ್ರೌಢಾವಸ್ಥೆಗೆ ಬಂದು ಲೋಕವನ್ನರಿಯುವಂತಹ ಜ್ಞಾನ, ನಂತರದೆ ಯೌವಾನಾವಸ್ಥೆಯ ನಾಟಕ, ನಂತರ ಮುಪ್ಪಿನವಸ್ಥೆಯ ನಾಟಕ. ಹೀಗೆ ಹಲವು ಸ್ತರಗಳಲ್ಲಿ ನಾಟಕವನ್ನಾಡಿದ ನಾವುಗಳು ನಮ್ಮ ಪಾತ್ರ ಮುಗುದ ನಂತರ ನಮ್ಮ ಅಂಕದ ಪರದೆ ಬೀಳುತ್ತದೆ. ಆಗ ಈ ಜಗತ್ತು ಎನ್ನುವ ಪ್ರೇಕ್ಷಕ ವರ್ಗವು ನಮ್ಮ ನಟನೆ ನೋಡಿ ಬೇಷ್ ಎನ್ನಲೂ ಬಹುದು ಅಥವಾ ದುರ್ಗುಣಗಳನ್ನೇ ಹೊತ್ತು ನಾಟಕ ಮಾಡಿದರೆ ಅವಹೇಳನ, ಅಪನಿಂದೆಗಳನ್ನೂ ನಾವು ಕೇಳಬಹುದು. ಒಟ್ಟಿನಲ್ಲಿ ಹುಟ್ಟಿನಿಂದ ಲಾಗಾಯ್ತು ಅಂತ್ಯದವರೆಗೂ ಈ ಜಗತ್ತಿನ ನಾಟಕ ರಂಗಸ್ಥಳದಲ್ಲಿ, ಆ ಭಗವಂತನಾಡಿಸುವ ನಾಟಕದ ಪಾತ್ರಧಾರಿಗಳೇ ನಾವುಗಳು ಎಂದು ಹೇಳಿದ್ದಾರೆ.

ಒಂದು ಕ್ಷಣ ನಾವು ಯೋಚನೆ ಮಾಡಬೇಕಾಗುತ್ತದೆ. ನಾವು ಇಲ್ಲಿ ಹುಟ್ಟಿ, ಬೆಳೆದು, ಅಂತ್ಯವಾಗುವವರೆಗೂ ನಾವು ನಾಟಕದ ಪಾತ್ರಧಾರಿಗಳಾಗಿ ನಾಟಕ ಮಾಡುತ್ತೇವೆ ಎಂದಾದರೆ, ವಾಸ್ತವವಾದರೂ, ನೈಜವಾದುದಾದರೂ ಏನು? ಇಲ್ಲಿ ವಾಸ್ತವತೆ ಏನೆಂದರೆ 'ತನ್ನ ತಾನರಿಯುವುದು'. ಅಂದರೆ ತನ್ನ ಜೀವನ ಎಂಬ ನಾಟಕದಲ್ಲಿ ನಾವು ಹಚ್ಚಿರುವ ಬಣ್ಣ, ತೊಟ್ಟಿರುವ ಪೋಷಾಕನ್ನು ಬಿಚ್ಚಿಟ್ಟು ವಾಸ್ತವ ಪ್ರಜ್ಞೆಗೆ ಮರಳುವುದು. ಅಂದರೆ ಮೊದಲಿಗೆ ತಾನು ಯಾರು ಎಂದು ಅರಿಯುವುದು ಮುಖ್ಯವಾಗುತ್ತದೆ. ಶರಣರು ಹೇಳಿದ ಹಾಗೆ 'ತನ್ನ ತಾನರಿದು, ತಾನೇನೆಂದು ತಿಳಿದ ತಾನೇ ದೇವ ನೋಡ' ಎಂಬ ತತ್ವವೇ ಇದಕ್ಕೆಲ್ಲಾ ಉತ್ತರವಾಗಿದೆ. ಹಾಗಾಗಿ ಎಂದು ತಾನು ಯಾರು, ತನ್ನ ಕರ್ತವ್ಯ ಏನು ಎಂಬ ಅರಿವು ಇದ್ದರೆ ಮಾತ್ರ ಮೊದಲಿಗೆ ತನ್ನನ್ನು ತಾನು ಯಾರು ಎಂದು ಕಾಣಲು ಸಾಧ್ಯವಿದೆ. ಮತ್ತೊಬ್ಬರಿಗೆ ಸಹಾಯಕನಾಗಿ, ನಂಬಿಕೆಗೆ ಅರ್ಹವ್ಯಕ್ತಿಯಾಗಿ, ಗುರು ಹಿರಿಯರಿಗೆ ಗೌರವ ಸಲ್ಲಿಸುವ ಸ್ವಭಾವವನ್ನು ತಿಳಿದಿರುವವನೆ ನಿಜವಾದ ಮನುಷ್ಯನಾಗಿ, ಮಾನವೀಯ ಸೆಲೆಯಿಂದ ಕೂಡಿದಂತಹ ಸಾತ್ವಿಕನಾಗಿ, ನಟನಲ್ಲದ ನೈಜ ಮಾನವನ ರೂಪವಾಗಿ ಕಾಣುತ್ತಾನೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಬೆಂಗಳೂರು ಕೆ.ಜಿ.ರಸ್ತೆ
ಸಂತೋಷ್ DOLBY 7.1 4K

ವೀರೇಶ್ ಸಿನಿಮಾಸ್
ವಿಕ್ಟರಿ ಸಿನಿಮಾ

ಜೆ.ಪಿ.ನಗರ ಸಿದ್ಧೇಶ್ವರ
ಕೆಂಗೇರಿ ರಾಬಿನ್
ರಾಜಾಜಿನಗರ ನವರಂಗ್
ತಾವರೆಕೆರೆ ಬಾಲಾಜಿ
ಕತ್ರಿಗುಪ್ಪೆ ಕಾಮಾಕ್ಯ
ಸಂಜಯನಗರ ವೈಭವ್
ಸೇವಾನಗರ ಮುಕುಂದ
ರಾಜಗೋಪಾಲನಗರ ಮಾರುತಿ
ಮಲ್ಲೇಶ್ವರ ಸವಿತಾ
ಅಗರ ತಿರುಮಲ
ಕಾಡುಗುಡಿ ಶ್ರೀನಿವಾಸ
ಕೋಣನಕುಂಟೆ ಮಾನಸ
ಹೊಂಗಸಂದ್ರ ಬೃಂದ
ಗೌಡನಪಾಳ್ಯ ಶ್ರೀನಿವಾಸ
ಆರ್.ಟಿ.ನಗರ ರಾಧಾಕೃಷ್ಣ
ವರ್ತೂರು ವಿನಾಯಕ
ಕೋನಪ್ಪನ ಅಗ್ರಹಾರ ವೆಂಕಟೇಶ್ವರ
ಕೆ.ಆರ್.ಪುರಂ ವೆಂಕಟೇಶ್ವರ
ಗರುಡಾಚಾರ್ ಪಾಳ್ಯ ವಿ.ಸಿನಿಮಾಸ್
ವಿದ್ಯಾಪೀಠ ಸರ್ಕಲ್ ಚಂದ್ರೋದಯ
ಕದಿರೇನಹಳ್ಳಿ ಮಹದೇಶ್ವರ
ಗೊಟ್ಟಿಗೆರೆ ಲಕ್ಷ್ಮಿ
ದೊಮ್ಮಸಂದ್ರ ಬಾಲಾಜಿ
ಗೊಲ್ಲರಹಟ್ಟಿ ವೆಂಕಟೇಶ್ವರ
ಮಲ್ಲತ್ತಹಳ್ಳಿ ವಿ.ಆರ್.ಸಿನಿಮಾಸ್
ಹರಿನಗರ ವಿನಾಯಕ
ಚಿಕ್ಕಬಾಣಾವರ ಅಶೋಕ
ಯಲಹಂಕ ಗಣೇಶ್
ನೆಲಮಂಗಲ ರೂಪ
ಉಲ್ಲಾಳ ವಜ್ರೇಶ್ವರಿ
ಸಿಂಗಾಪುರ ವೈನಿಧಿ
ಯಶವಂತಪುರ ಗೋವರ್ಧನ್

PVR INOX MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | INNOVATION | GRAND | SIGNATURE | LEGACY
ROCKLINE JALAHALLI
MIRAJ SUNKADAKATTE
CINEPHILE HSR LAYOUT
INNOVATIVE MARATHHALLI
KIN CINEMAS SEEGEHALLI
new fangled M.G.ROAD
MOVIETIME R.R.NAGAR
VAISHNAVI VAIBHAVI UTHARAHALLI
Balaji Cinemas CHIKKALASANDRA
V CINEMAS RAMMURTHYNAGAR
ಹಾರೋಹಳ್ಳಿ ವಿನಾಯಕ
ಜಿಗಣಿ ನಂದೀಶ್ವರ
ಅತ್ತಿಬೆಲೆ ಗೌರಿಶಂಕರ
ಹೊಸೂರು ಮಂಜುನಾಥ ಗ್ರ್ಯಾಂಡ್
ತುಮಕೂರು ಗಾಯತ್ರಿ PVR INOX
ತಿಪಟೂರು ಲಕ್ಷ್ಮಿ
ರಾಮನಗರ ಶಾನ್
ಕೋಲಾರ ನಾರಾಯಣಿ
ದೊಡ್ಡಬಳ್ಳಾಪುರ KRG ಸೌಂದರ್ಯಮಹಲ್
ಚಿಕ್ಕಬಳ್ಳಾಪುರ ವಾಣಿ
ಕನಕಪುರ ವಾಣಿ
ಚನ್ನಪಟ್ಟಣ ಶಿವಾನಂದ
ಮಾಗಡಿ ಬಾಲಾಜಿ
ಕುಣಿಗಲ್ ಪದ್ಮ
ಮಾಲೂರು ಬೆನಕ
ಚಿಂತಾಮಣಿ ಆದರ್ಶ
ಮುಳಬಾಗಿಲು ರಾಧಿಕಾ
ಮಧುಗಿರಿ ಶಾಂತಲಾ

ವಿಜಯಪುರ ಗೌರಿಶಂಕರ
ಪಾವಗಡ ಶ್ರೀನಿವಾಸಪ್ರಸನ್ನ
ಬಂಗಾರುಪೇಟೆ ವಿಜಯ
ಆನೇಕಲ್ ಅನ್ನಪೂರ್ಣೇಶ್ವರಿ
ಶಿರಾ ಭಾಗ್ಯಲಕ್ಷ್ಮಿ
ಕೆ.ಜಿ.ಎಫ್ ಒಲಂಪಿಯ
ಮೈಸೂರು ಸಂಗಮ್ ಗಾಯತ್ರಿ
PVR INOX SATYAM | CENTRO FORUM | GARUDA
DRC CINEMAS
VISION CINEMAS
ಮಂಡ್ಯ ಗುರುಶ್ರೀ
ಹಾಸನ ಎಸ್.ಬಿ.ಜಿ
ಕೊಳ್ಳೇಗಾಲ ಶಾಂತಿ
ಮಳವಳ್ಳಿ ಮಹಾಲಕ್ಷ್ಮಿ
ಚಾಮರಾಜನಗರ ಸಿಂಹ
ಕೆ.ಎಂ.ದೊಡ್ಡಿ ಮಾರುತಿ
ಚನ್ನರಾಯಪಟ್ಟಣ ಬಾಲಾಜಿ
ಹೊಳೆನರಸೀಪುರ ಎಸ್.ಎಲ್.ಎನ್
ಮದ್ದೂರು ಮಹಾವೀರ
ಕೆ.ಆರ್.ಪೇಟೆ ಬಸವೇಶ್ವರ
ಕೆ.ಆರ್.ನಗರ ವೆಂಕಟೇಶ್ವರ
ಗುಂಡ್ಲುಪೇಟೆ ಸೂರ್ಯ
ಬನ್ನೂರು ಸೋಮೇಶ್ವರ
ಟಿ.ನರಸೀಪುರ ವಿಜಯಭಗವಾನ್
ನಂಜನಗೂಡು ಭಾರ್ಗವಿ
ನಾಗಮಂಗಲ ವೆಂಕಟೇಶ್ವರ
ಪಾಂಡವಪುರ ಕೋಕಿಲ
ಪಿರಿಯಾಪಟ್ಟಣ ಶಾರದ
ಅರಸೀಕೆರೆ ಸಾಧನಾ
ಬೆಟ್ಟೂರು ಕ್ರಾಸ್ ಮಾರುತಿ
ಬೇಲೂರು ರೇಣುಕಾ
ಹುಲ್ಲಹಳ್ಳಿ ವಿನಾಯಕ

ಶ್ರೀರಂಗಪಟ್ಟಣ ಶ್ರೀದೇವಿ
ಸುಂಟಿಕೊಪ್ಪ ಗಣೇಶ
ಹುಣಸೂರು ಲೀಲಾ
ಶನಿವಾರಸಂತೆ ಯಶಸ್ವಿನಿ
ಹಲಗೂರು ರವಿ
ಶಿವಮೊಗ್ಗ ಮಲ್ಲಿಕಾರ್ಜುನ Bharath Cinemas
ಚಿಕ್ಕಮಗಳೂರು ಶ್ರೀಲೇಖ
ಭದ್ರಾವತಿ ಸತ್ಯ
ಕಡೂರು ಅನ್ನಪೂರ್ಣ
ಸಾಗರ ಶ್ರೀ
ತೀರ್ಥಹಳ್ಳಿ ವಿನಾಯಕ
ಶಿಕಾರಿಪುರ ಮಾಲತೇಶ
ಚನ್ನಗಿರಿ ಲಕ್ಷ್ಮಿ
ಕೊಪ್ಪ ಜೆ.ಎಂ.ಜೆ
ಬಾಳೆಹೊನ್ನೂರು ಸುದರ್ಶಿನಿ
ದಾವಣಗೆರೆ ಅಶೋಕ MOVIETIME
ಚಿತ್ರದುರ್ಗ ಬಸವೇಶ್ವರ
ಹಿರಿಯೂರು ನಂಜುಂಡೇಶ್ವರ
ಬಳ್ಳಾರಿ ನಟರಾಜಕಾಂಪ್ಲೆಕ್ಸ್ MOVIETIME
ಹೊಸಪೇಟೆ ಸರಸ್ವತಿ ಬಾಲ
ಹರಿಹರ ಜಯಶ್ರೀ
ಹಗರಿಬೊಮ್ಮನಹಳ್ಳಿ ಕೊಟ್ಟೂರೇಶ್ವರ
ಹೂವಿನ ಹಡಗಲಿ ಶಂಕರ್
ಕಂಪ್ಲಿ ಚಂದ್ರಕಲಾ
ಶಿರಗುಪ್ಪ ರಾಮಕೃಷ್ಣ
ಜಗಳೂರು ನಟರಾಜ
ಹುಬ್ಬಳ್ಳಿ ಅಪ್ಸರಾ LAXMI CITY PRIDE MULTIPLEX cinépolis
ಧಾರವಾಡ ಸಂಗಮ್ PVR INOX

ಬೆಳಗಾವಿ ಚಿತ್ರಾ PVR INOX KAPEEL
ಬಿಜಾಪುರ ಲಕ್ಷ್ಮಿ
ಗದಗ ಮಹಾಲಕ್ಷ್ಮಿ
ರಾಣೆಬೆನ್ನೂರು ಶಿವಶಕ್ತಿ
ಬಾಗಲಕೋಟೆ ಶಕ್ತಿ
ಹಾವೇರಿ ಮಾಫಾವಿ
ಇಳಕಲ್ ಶ್ರೀನಿವಾಸ
ಲಕ್ಷ್ಮೇಶ್ವರ ರವಿ
ಸಿಂಧಗಿ ಆನಂದ್
ಮುಧೋಳ ಸುಭಾಷಿಣಿ ಸೂರ್ಯವಂಶಿ
ಗೋಕಾಕ್ ಲಕ್ಷ್ಮಿ
ಬನಹಟ್ಟಿ ವೈಭವ್
ಜಮಖಂಡಿ ಸುವರ್ಣ
ಹಾರೋಗೇರಿ ಚಂದ್ರಮ
ಅಥಣಿ ದುರ್ಗಾಲಕ್ಷ್ಮಿ
ಬಾದಾಮಿ ಮಹಾಕೂಟೇಶ್ವರ
ತಾಳಿಕೋಟೆ ಅಮೀರ್
ಹೊನ್ನಾವರ ಪದ್ಮಾಂಜಲಿ
ಇಂಡಿ ಮಹಾವೀರ
ಬ್ಯಾಡಗಿ ಶೋಭಾ
ಗುಳೇದಗುಡ್ಡ ಅಂಕಿತಾ
ಶಿರಸಿ ನಟರಾಜ
ಅಂಕೋಲ ಮಯೂರ
ರೋಣ ಮಲ್ಲಿಕಾರ್ಜುನ
ಚಿಕ್ಕೋಡಿ ಪವನ್
ಹೊಸರಿತ್ತಿ ಕೃಷ್ಣ
ರಾಮದುರ್ಗ ಶ್ರೀನಿವಾಸ
ಬೀಳಗಿ ಶ್ರೀನಿವಾಸ
ನಿಡಗುಂದಿ ಯಲಗೂರೇಶ್ವರ
ಶಿಗ್ಗಾಂವ ರಾಜಶ್ರೀ

ರಾಯಭಾಗ ದತ್ತ
ಮುಂಡರಗಿ CHHOTU MAHARAJ
ನಿಪ್ಪಾಣಿ MAGNUM CINEMAS
ಗುಲ್ಬರ್ಗ ಸಂಗಮ್ PVR INOX MIRAJ SHETTY'S
ರಾಯಚೂರು ಪೂರ್ಣಿಮ MIRAJ
ಬೀದರ್ ಸಪ್ನ
ಗಂಗಾವತಿ ಶಿವೆ
ಕೊಪ್ಪಳ ಲಕ್ಷ್ಮಿ
ಸಿಂಧನೂರು ಮಂಜುನಾಥ
ಷಹಾಪುರ ಜಯಶ್ರೀ
ದೇವದುರ್ಗ ಭರತ್
ಮಾನ್ವಿ ಅಪರ್ಣ
ಕುಷ್ಟಗಿ ಮಾರುತಿ
ಕಾರಟಗಿ ಲಕ್ಷ್ಮಿ
ಮಸ್ಕಿ ವಿಜಯ
ಕನಕಗಿರಿ ರಾಧಿಕಾ
ಅಂಗಸುಗೂರು ಎಂಪೈರ್
ಶ್ರೀರಾಮನಗರ ಲಕ್ಷ್ಮಿ ಪಿಕ್ಚರ್‌ಪ್ಯಾಲೇಸ್
ಮಂಗಳೂರು SP CINEMAS PVR INOX cinépolis Bharath Cinemas
ಉಡುಪಿ ಅಲಂಕಾರ್ Bharath Cinemas
ಮಣಿಪಾಲ PVR INOX Bharath Cinemas
ಸುರತ್ಕಲ್ Cine GALAXY
ಕುಂದಾಪುರ Bharath Cinemas
ಕಾರ್ಕಳ ರಾಧಿಕಾ
ಪಡುಬಿದ್ರೆ Bharath Cinemas
ಪುತ್ತೂರು Bharath Cinemas
ದೇರಳಕಟ್ಟೆ Bharath Cinemas



ಕೆ.ಜಿ.ರಸ್ತೆ : ತ್ರಿವೇಣಿ

ಮಾಗಡಿ ರಸ್ತೆ : ಪ್ರಸನ್ನ
ಲಾಲ್‌ಬಾಗ್ : ಊರ್ವಶಿ
ಜೆ.ಪಿ.ನಗರ : ಸಿದ್ಧಲಿಂಗೇಶ್ವರ ರೇಣುಕಾಪ್ರಸನ್ನ
ಪೀಣ್ಯ : ಭಾರತಿ
ಕಮಲಾನಗರ : ವೀರಭದ್ರೇಶ್ವರ
ಆವಲಹಳ್ಳಿ : ವೆಂಕಟೇಶ್ವರ
ತಾವರೆಕೆರೆ : ಲಕ್ಷ್ಮೀ
ಸಂಜಯನಗರ: ವೈಭವ್
ಬನಶಂಕರಿ : ಕಾಮಾಕ್ಯ
ಉಲ್ಲಾಳ : ವಜ್ರೇಶ್ವರಿ
ಗರುಡಾಚಾರ್‌ಪಾಳ್ಯ: ವಿಜಯಲಕ್ಷ್ಮೀ
ಚಿಕ್ಕಲಸಂದ್ರ : ಬಾಲಾಜಿ
ಹೊಂಗಸಂದ್ರ : ಬೃಂದಾ
ಕೋಣನಕುಂಟೆ: ಮಾನಸ
ಉತ್ತರಹಳ್ಳಿ : ವೈಷ್ಣವಿ-ವೈಭವಿ
ಸುಂಕದಕಟ್ಟೆ : ಮೋಹನ್
ಗೊಲ್ಲರಹಟ್ಟಿ : ವೆಂಕಟೇಶ್ವರ
ಗೌಡನಪಾಳ್ಯ : ಶ್ರೀನಿವಾಸ
ಕೆಂಗೇರಿ : ವೆಂಕಟೇಶ್ವರ
ಗೊಟ್ಟಿಗೆರೆ : ಲಕ್ಷ್ಮೀ
ದೊಮ್ಮಸಂದ್ರ : ಬಾಲಾಜಿ
ಟಿ.ಸಿ.ಪಾಳ್ಯ : V CINEMAS
ಅಗರ : ತಿರುಮಲ
ಕಾಡುಗೋಡಿ : ಶ್ರೀನಿವಾಸ
ಯಲಹಂಕ : ಪ್ರಕಾಶ್
ಕೊಡಿಗೆಹಳ್ಳಿ : ರಾಜ್‌ಮುರಳಿ
ಹರಿನಗರ : ವಿನಾಯಕ

PVR INOX MALL OF ASIA | NEXUS | ORION | VAISHNAVI | REGALIA | MARKET CITY | SPIRIT | UPTOWN | BHARATIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis ETA | MEENAKSHI | ORION EAST | LULU | SHANTINIKETAN | SJR
GOPALAN CINEMAS ARCH | INNOVATION | GRAND | SIGNATURE | LEGACY
ROCKLINE mall & cinemas
MIRAJ SUNKADAKATTE
CINEPHILE HSR LAYOUT
INNOVATIVE MARATHALLI
KIN CINEMAS SEEGEHALLI
MOVIETIME RR NAGAR
new fangled MG ROAD
ತುಮಕೂರು : ಮಾರುತಿ PVR INOX
ರಾಮನಗರ : ಶ್ರೀರಾಮ
ಕನಕಪುರ : ಅರ್ಕಾವತಿ
ನೆಲಮಂಗಲ : ರೂಪ
ಕುಣಿಗಲ್ : ಆಕಾಶ್
ಮಾಲೂರು : ಬಾಲಾಜಿ
ದೊಡ್ಡಬಳ್ಳಾಪುರ: ವೈಭವ್
ಚಿಕ್ಕಬಳ್ಳಾಪುರ : ಬಾಲಾಜಿ
ವಿಜಿಪುರ : ಸಂಗಮೇಶ್ವರ
ಚನ್ನಪಟ್ಟಣ : ಲಕ್ಷ್ಮೀ
ತಿಪಟೂರು : ತ್ರಿಮೂರ್ತಿ
ಮಧುಗಿರಿ : ಶಂಕರ್
ಹೆಸರುಘಟ್ಟ : ಎಸ್.ಎಲ್.ಎನ್
ಆನೇಕಲ್ : ಶ್ರೀಲಕ್ಷ್ಮೀನರಸಿಂಹ
ಮೈಸೂರು : ವುಡ್‌ಲ್ಯಾಂಡ್ಸ್ DRC PVR INOX GARUDA|FORUM SATYAM|CENTRO VISION CINEMAS
ಮಂಡ್ಯ : ಮಹಾವೀರ್
ಹಾಸನ : ಸಹ್ಯಾದ್ರಿ
ಚಾಮರಾಜನಗರ: ಬಸವೇಶ್ವರ
ಕೊಳ್ಳೇಗಾಲ : ಶ್ರೀನಿವಾಸ
ಚನ್ನರಾಯಪಟ್ಟಣ: ಗಾಯತ್ರಿ
ಹೊಳೆನರಸೀಪುರ: ಚನ್ನಾಂಬಿಕ

ನಂಜನಗೂಡು : ಶ್ರೀವತ್ಸ
ಗುಂಡ್ಲುಪೇಟೆ : ವೆಂಕಟೇಶ್ವರ
ಕೆ.ಆರ್.ನಗರ: ಗೌರಿಶಂಕರ
ಟಿ.ನರಸೀಪುರ: ಮುರುಗನ್
ಕೆ.ಎಂ.ದೊಡ್ಡಿ : ಸುಮಾ
ಮಳವಳ್ಳಿ : ಮಹಾಲಕ್ಷ್ಮೀ
ಅರಸೀಕೆರೆ : ರತ್ನ
ಮದ್ದೂರು : ಸಂಜಯ
ಕೆ.ಆರ್.ಪೇಟೆ: ಕೆಜೆಬಿ
ಸಕಲೇಶಪುರ : ತೇಜಸ್ವಿನಿ
ಸಾತನೂರು : ವೆಂಕಟೇಶ್ವರ
ದಾವಣಗೆರೆ : ಗೀತಾಂಜಲಿ MOVIETIME
ಚಿತ್ರದುರ್ಗ : ವೆಂಕಟೇಶ್ವರ
ಬಳ್ಳಾರಿ : ನಟರಾಜಕಾಂಪ್ಲೆಕ್ಸ್
ಹೊಸಪೇಟೆ : ಮೀರ್‌ಆಲಂ
ಚಳ್ಳಕೆರೆ : ರಾಮಕೃಷ್ಣ
ಹರಿಹರ : ಶ್ರೀಕಾಂತ್
ಹಿರಿಯೂರು : ಶ್ರೀಶೈಲ
ಹೂವಿನಹಡಗಲಿ: ಶಂಕರ್
ಹಗರಿಬೊಮ್ಮನಹಳ್ಳಿ: ಕೃಷ್ಣ
ಹೊಸದುರ್ಗ : ಜ್ಯೋತಿ
ಸಂಡೂರು : ಶ್ರೀನಿವಾಸ
ಹುಬ್ಬಳ್ಳಿ : ಸುಧಾ LAXMI CITY PRIDE MULTIPLEX cinépolis
ಧಾರವಾಡ : ಪದ್ಮ PVR INOX
ಗದಗ : ಕೃಷ್ಣ
ಬೆಳಗಾವಿ : ಪ್ರಕಾಶ್ PVR INOX KAPEEL CINEMA Bharath Cinemas
ಬಿಜಾಪುರ : ಡ್ರೀಮ್‌ಲ್ಯಾಂಡ್
ರಾಣೆಬೆನ್ನೂರು : ಶಂಕರ್
ಬಾಗಲಕೋಟೆ: ವಾಸವಿ

ಗೋಕಾಕ್ : ಲಕ್ಷ್ಮೀ
ರಬಕವಿ : ಶ್ರೀನಿವಾಸ
ಮಹಾಲಿಂಗಪುರ: ಮಾರುತಿ
ಮುದ್ದೇಬಿಹಾಳ : ಗಿರಿಜಾಶಂಕರ
ಬಸವನಬಾಗೇವಾಡಿ: ಸತ್ಯನಾರಾಯಣ
ಅಥಣಿ : ಮುರುಗೇಂದ್ರ
ತಾಳಿಕೋಟೆ : ಮಹಾವೀರ್
ಬೈಲಹೊಂಗಲ : ಸಂಗಮ್
ಹಳಿಯಾಳ : ಬಸವರಾಜ್
ಮುಂಡರಗಿ : CHHOTU MAHARAJ
ಬಾದಾಮಿ : ಕುಮಾರೇಶ್ವರ
ಗಜೇಂದ್ರಗಢ : ಅಲಂಕಾರ್
ಇಳಕಲ್ : ನಾರಾಯಣ
ಸಂಕೇಶ್ವರ : ಸಾಯಿನಾಥ್
ಹಾವೇರಿ : ಸರಸ್ವತಿ
ಮುಧೋಳ : ಸೂರ್ಯವಂಶಿ
ಕಲಬುರ್ಗಿ : ತ್ರಿವೇಣಿ PVR INOX MIRAJ
ಗಂಗಾವತಿ : ಕನಕದುರ್ಗ
ಕೊಪ್ಪಳ : ಶಾರದ
ಮಾನ್ವಿ : ಮಲ್ಲಿಕಾರ್ಜುನ
ಸಿಂಧನೂರು : ಕೂಡಲಸಂಗಮ
ಕಾರಟಗಿ : ಪದ್ಮಾವತಿ
ಮಸ್ಕಿ : ಶರಣಬಸವೇಶ್ವರ
ದೇವದುರ್ಗ: ಆನಂದ್
ಕುಷ್ಟಗಿ : ಬಸವರಾಜ್
ಶಹಪುರ : ಭವಾನಿ
ಕನಕಗಿರಿ : ನಂದಿ
ಭಾಲ್ಕಿ : ಸಂಗಮೇಶ್ವರ
ಶಿವಮೊಗ್ಗ : ವೀರಭದ್ರೇಶ್ವರ Bharath Cinemas
ಭದ್ರಾವತಿ : ವೀರಭದ್ರೇಶ್ವರ
ಚಿಕ್ಕಮಗಳೂರು: ನಾಗಲಕ್ಷ್ಮೀ
ಆನವೇರಿ : ಶ್ರೀದೇವಿ

ಕಡೂರು : ವಿಜಯಲಕ್ಷ್ಮೀ
ತರೀಕೆರೆ : ವಿನಾಯಕ
ತೀರ್ಥಹಳ್ಳಿ : ವೆಂಕಟೇಶ್ವರ
ಮಂಗಳೂರು : SP CINEMAS PVR INOX cinépolis Bharath Cinemas BHARATH MALL
Cine GALAXY SURATHKAL
ಮಣಿಪಾಲ : PVR INOX cinépolis

ತೆಲುಗು
ಮಡಿವಾಳ : ಸಂಧ್ಯಾ
ಮಾಗಡಿರಸ್ತೆ : ಅಂಜನ್
ರಾಮಮೂರ್ತಿನಗರ: ಲಕ್ಷ್ಮೀ
ಕೆ.ಆರ್.ಪುರಂ: ವೆಂಕಟೇಶ್ವರ
ಬೊಮ್ಮನಹಳ್ಳಿ : ಕೃಷ್ಣ
ಕೋನಪ್ಪನಅಗ್ರಹಾರ: ವೆಂಕಟೇಶ್ವರ
ಚಿಕ್ಕಲಸಂದ್ರ : ಬಾಲಾಜಿ
ಚಿಂತಾಮಣಿ : ಅಂಜನಿ
ಸರ್ಜಾಪುರ : ರವಿ
ಮತ್ತಿಕೆರೆ : ಮುರಳಿಗೋಕುಲ
ಬಿ.ಎಸ್.ಪುರ : ಪುಷ್ಪಾಂಜಲಿ
ಹೆಚ್.ಕ್ರಾಸ್ : ವೆಂಕಟೇಶ್ವರ
ಬೇತಮಂಗಲ : ವಿನಾಯಕ
ಪಾವಗಡ : ಅಲಂಕಾರ್
ಬಾಗೇಪಲ್ಲಿ : ವೆಂಕಟೇಶ್ವರ
ಗೌರಿಬಿದನೂರು: ಅಭಿಲಾಷ
ಮುಳುಬಾಗಿಲು : ನಟರಾಜ
ಬಳ್ಳಾರಿ : ರಾಧಿಕ
ಬಂಗಾರಪೇಟೆ : ಬಾಲಚಂದರ್
ಶಿರಗುಪ್ಪ : ಬಾಲಾಜಿ
ಕಂಪ್ಲಿ : ಭಾರತ್
ಕುರುಗೋಡು : ಎಸ್.ಎಲ್.ವಿ
ಹಾಗೂ ರಾಜ್ಯಾದ್ಯಂತ